ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಡಿಸೆಂಬರ್ 8 ಭಾನುವಾರ 2024

ಸಂಪುಟ: 45 | ಸಂಚಿಕೆ: 231 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695 ಸುದ್ದಿ
ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಜನರಿಗೆ ಅನುಕೂಲ ಕಲ್ಪಿಸಲು ಹೆಚ್ಚುವರಿ ಪ್ರವೇಶ, ನಿರ್ಗಮನ ವ್ಯವಸ್ಥೆ; ಫ್ಲೈಓವರ್ ನಿರ್ಮಾಣ ■ ಪುಟ–6

ರಾಜಕೀಯದ ಕೊನೆಗಾಲದಲ್ಲಿದ್ದೇನೆ

ಮುಂದಕ್ಕೆ ನೋಡೋಣ...!

ಮುಖ್ಯಮಂತ್ರಿ ಸಿದ್ದರಾಮಯ್ಯ ಅಚ್ಚರಿಯ ನುಡಿ



ಸತ್ತೇಗಾಲ (ಕೊಳ್ಳೇಗಾಲ ತಾ.), ಡಿ.7–ನಾನು ರಾಜಕೀಯದ ಕೊನೆಗಾಲದಲ್ಲಿ ಇದ್ದೇನೆ! ಮುಂದಕ್ಕೆ ನೋಡೋಣ... ಮುಖ್ಯಮಂತ್ರಿ ಸಿದ್ದರಾಮಯ್ಯ ಅಚ್ಚರಿ ಹೇಳಿಕೆ ಇದು.

ನಿವೃತ್ತ ಐಪಿಎಸ್ ಅಧಿಕಾರಿ ಮರಿಸ್ವಾಮಿಯವರು, ತಾವು ಓದಿದ್ದ ಸ್ವಗ್ರಾಮ ಸತ್ತೇಗಾಲದಲ್ಲಿ ಗ್ರಾಮಸ್ಥರ ನೆರವಿನೊಂದಿಗೆ ಸುಮಾರು 2.5 ಕೋಟಿ ರೂ. ವೆಚ್ಚದಲ್ಲಿ ಪುನರ್ ನಿರ್ಮಾಣ ಮಾಡಿದ ಲಕ್ಷ್ಮಮ್ಮ, ಸೋಸಯ್ಯನ ಸಿದ್ದಯ್ಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಟ್ಟಡವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಜಕಾರಣದಲ್ಲಿ ಜನರ ಅಭಿಮಾನ ಬಹಳ ಮುಖ್ಯ. ಜನರ ಪ್ರೀತಿ–ಅಭಿಮಾನ ಗಳಿಸದೇ ಹೋದರೆ ರಾಜಕೀಯದಲ್ಲಿ ಉಳಿಯಲು ಸಾಧ್ಯವಿಲ್ಲ. ಜನರ ಅಭಿಮಾನವೊಂದಿದ್ದರೆ ಎತ್ತರಕ್ಕೆ ಬೆಳೆಯಬಹುದು. ಹಾಗೇ ನಾನು ಎರಡನೇ ಬಾರಿ ಮುಖ್ಯಮಂತ್ರಿ ಆಗಿದ್ದೇನೆ ಎಂದು ಸಿದ್ದರಾಮಯ್ಯ ಹೇಳುತ್ತಿದ್ದಂತೆಯೇ ಅಭಿಮಾನಿಯೊಬ್ಬರು '3ನೇ ಸಲಾನೂ ನೀವೇ ಸಿಎಂ ಆಗ್ಬೇಕು' ಎಂದು ಕೂಗಿ ಹೇಳಿದಾಗ ಸಿದ್ದರಾಮಯ್ಯ ನಸುನಗುತ್ತಾ 'ನೀನ್ ಹೇಳ್ತಾ ಇದ್ದೀಯಾ ಕಣಯ್ಯಾ, ನಾನು ರಾಜಕೀಯದಲ್ಲಿ ಕೊನೆಗಾಲದಲ್ಲಿ ಇದ್ದೀನಿ. ಮುಂದಕ್ಕೆ ನೋಡೋಣ' ಎಂದು ಹೇಳಿದರು.

ಸಮಾಜದಲ್ಲಿ ಮುಂದುವರೆಯಲು, ಸ್ವಾಭಿಮಾನದಿಂದ ಬದುಕಲು ಶಿಕ್ಷಣ ಪ್ರಬಲ ಅಸ್ತ್ರ. ಪ್ರತಿಭೆ ಎಂಬುದು ಯಾವುದೇ ಜಾತಿಯಿಂದ ಬರುವುದಿಲ್ಲ. ಅವಕಾಶ ಸಿಕ್ಕರೆ ಮಾತ್ರ ಪ್ರತಿಭೆ ಹೊರಬರುತ್ತದೆ. ಸ್ವಾತಂತ್ರ್ಯ ಪೂರ್ವದಲ್ಲಿ ಶೂದ್ರರು, ದಲಿತರು ಶಿಕ್ಷಣ ಪಡೆಯಲು ಅವಕಾಶವಿರಲಿಲ್ಲ. ಡಾ. ಅಂಬೇಡ್ಕರ್ ಅವರು ■ 6ನೇ ಪುಟಕ್ಕೆ

ಚಾ.ನಗರಕ್ಕೆ ಬಂದು ನನ್ನ ಅಧಿಕಾರ ಮತ್ತಷ್ಟು ಗಟ್ಟಿಯಾಯ್ತು!

ಚಾಮರಾಜನಗರ ಜಿಲ್ಲೆಯಲ್ಲಿ ಬಿ.ರಾಚಯ್ಯನವರು ಬಹಳ ದೊಡ್ಡ ವ್ಯಕ್ತಿತ್ವದವರು. ನಾನು ರಾಜಕೀಯವಾಗಿ ಬೆಳೆಯಲು ಅವರೂ ಕಾರಣ. ನಾನು ಉಪ ಮುಖ್ಯಮಂತ್ರಿ ಆಗಿದ್ದಾಗ ಚಾಮರಾಜನಗರ ಜಿಲ್ಲೆ ಸ್ಥಾಪನೆ ಮಾಡಿದೆವು. ಆಗ ಮುಖ್ಯಮಂತ್ರಿ ಆಗಿದ್ದ ಜೆ.ಹೆಚ್.ಪಟೇಲ್ ಅವರು ಚಾಮರಾಜನಗರಕ್ಕೆ ಬಂದರೆ ಅಧಿಕಾರ ಹೋಗುತ್ತದೆ ಎಂದು ಮಹದೇಶ್ವರ ಬೆಟ್ಟದಲ್ಲಿ ಜಿಲ್ಲೆಯನ್ನು ಉದ್ಘಾಟನೆ ಮಾಡಿದರು. ಆದರೆ ನಾನು, ಬಿ.ರಾಚಯ್ಯ ಮೌಢ್ಯಕ್ಕೆ ಒಳಗಾಗದೇ ಚಾಮರಾಜನಗರಕ್ಕೇ ಹೋಗಿ ಜಿಲ್ಲೆ ಘೋಷಣೆ ಮಾಡಿದೆ. ನಾನು ಮುಖ್ಯಮಂತ್ರಿ ಆದ ನಂತರ ಸುಮಾರು 20 ಬಾರಿ ಚಾಮರಾಜನಗರಕ್ಕೆ ಭೇಟಿ ನೀಡಿದ್ದೇನೆ. ನನ್ನ ಅಧಿಕಾರ ಹೋಗಲಿಲ್ಲ. ಅಧಿಕಾರ ಮತ್ತಷ್ಟು ಗಟ್ಟಿಯಾಯಿತು ಎಂದು ಹೇಳಿದರು.

ನಾಳೆಯಿಂದ ಬೆಳಗಾವಿಯಲ್ಲಿ ವಿಧಾನ ಮಂಡಲ ಚಳಿಗಾಲದ ಅಧಿವೇಶನ

- ಮುಡಾ, ವಕ್ಫ್, ಅನುದಾನ; ವಿಪಕ್ಷಗಳ ಅಸ್ತ್ರವಾದರೆ!
- ಕೋವಿಡ್‌ಆಡಳಿತರೂಢ ಕಾಂಗ್ರೆಸ್ ಪಕ್ಷಕ್ಕೆ ಬ್ರಹ್ಮಾಸ್ತ್ರ!!



ಬೆಂಗಳೂರು, ಡಿ.7(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮುಡಾ ಹಗರಣ, ರೈತರು ಮತ್ತು ಮಠ ಮಾನ್ಯಗಳ ಭೂಮಿಯನ್ನು ವಕ್ಫ್ ಬೋರ್ಡ್ ಆಸ್ತಿಯೆಂದು ಒಕ್ಕಲೆಬ್ಬಿಸುತ್ತಿರುವ ವಿವಾದ ಹಾಗೂ ಐದು ಗ್ಯಾರಂಟಿ ಯೋಜನೆಗಳ ಜಾರಿಯಿಂದ ಶಾಸಕರಿಗೆ ಅನುದಾನ ನೀಡಲೂ ಆಗದೆ, ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವ ಅಸ್ತ್ರಗಳನ್ನು ಮುಂದಿಟ್ಟುಕೊಂಡು ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಲು ಪ್ರತಿಪಕ್ಷಗಳು ಸಜ್ಜುಗೊಂಡಿವೆ.

ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಸೋಮವಾರದಿಂದ ಆರಂಭವಾಗಲಿರುವ ವಿಧಾನ ಮಂಡಲದ ಚಳಿಗಾಲದ ಅಧಿವೇಶನದಲ್ಲಿ ಈ ವಿಷಯಗಳೇ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಭಾರಿ ವಾಕ್ ಸಮರಕ್ಕೆ ಎಡೆ ಮಾಡಿಕೊಡಲಿವೆ. ಸರ್ಕಾರದ ವಿರುದ್ಧದ ಹಗರಣಗಳ ಜೊತೆಗೆ ಆಡಳಿತರೂಢ ■ 6ನೇ ಪುಟಕ್ಕೆ

ಯತ್ನಾಳ್ ವಿಚಾರವಾಗಿ ಕಾಲವೇ ಉತ್ತರಿಸಲಿದೆ

ಕೋರ್ ಕಮಿಟಿ ನಂತರ ಬಿಜೆಪಿ ರಾಜ್ಯ ಉಸ್ತುವಾರಿ ರಾಧಾ ಮೋಹನ್‌ದಾಸ್ ಸ್ಪಷ್ಟೋಕ್ತಿ; ಬಿ.ವೈ.ವಿಜಯೇಂದ್ರ ರಾಜ್ಯಾಧ್ಯಕ್ಷರಾಗಿ ನೇಮಕ ವರಿಷ್ಠರ ಪ್ರಕಾರ ಸರಿ ಇದೆ: ಸಮರ್ಥನೆ

ಬೆಂಗಳೂರು: ನಮ್ಮದು ಶಿಸ್ತಿನ ಪಕ್ಷ, ರಾಜ್ಯದಲ್ಲಿ 71 ಲಕ್ಷ ಕಾರ್ಯಕರ್ತರಿದ್ದಾರೆ. ಎಲ್ಲರ ವ್ಯಕ್ತಿತ್ವ ಬೇರೆ ಬೇರೆ ಇರುತ್ತದೆ. ಕಾಲವೇ ಸರಿಯಾದ ಉತ್ತರ ಹಾಗೂ ಎಲ್ಲವನ್ನೂ ಸರಿ ಮಾಡಲಿದೆ ಎಂದು ರಾಜ್ಯ ಬಿಜೆಪಿಯಲ್ಲಿನ ಅಸಮಾಧಾನದ ಕುರಿತು ರಾಜ್ಯ ಬಿಜೆಪಿ ಉಸ್ತುವಾರಿ ಹಾಗೂ ರಾಜ್ಯಸಭಾ ಸದಸ್ಯ ಡಾ.ರಾಧಾ ಮೋಹನ್ ದಾಸ್ ಅಗರವಾಲ್ ಹೇಳಿದ್ದಾರೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಸೂಚನೆ ಮೇರೆಗೆ ಇಂದು ಬೆಂಗಳೂರಿಗೆ ಆಗಮಿಸಿದ್ದ ಡಾ.ರಾಧಾ ಮೋಹನ್ ದಾಸ್ ಅಗರವಾಲ್ ಅವರು ಮಲ್ಲೇಶ್ವರಂನ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಕೋರ್ ಕಮಿಟಿ ಸಭೆ ನಡೆಸಿದರು. ಬಳಿಕ ಮಾಧ್ಯಮಗಳ ಜೊತೆಗೆ ಮಾತನಾಡಿದ ಅವರು, ಬಸನಗೌಡ ಪಾಟೀಲ ಯತ್ನಾಳ್ ಅವರಿಂದ ರಾಜ್ಯ ನಾಯಕತ್ವದ ಕುರಿತು ಬಹಿರಂಗ ಹೇಳಿಕೆಗಳ ಬಗ್ಗೆ ಪ್ರತಿಕ್ರಿಯಿಸಿ, 'ಪಕ್ಷದಲ್ಲಿ ನಡೆಯುತ್ತಿರುವ ವಿಚಾರಗಳು ನಮಗೆ ಆತಂಕ ಮೂಡಿಸಿದೆ. ನಾವು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರಿಗೆ ಶೋಕಾಸ್ ನೋಟಿಸ್ ಕೊಟ್ಟಿದ್ದೇವೆ. ಅದಕ್ಕೆ ಇನ್ನೂ ಅವರು ಉತ್ತರ ಕೊಟ್ಟಿಲ್ಲ. ಅವರ ಉತ್ತರದ ಆಧಾರದ ಮೇಲೆ ನಾವು ಮುಂದಿನ ನಿರ್ಧಾರ ತೆಗೆದುಕೊಳ್ಳುತ್ತೇವೆ ಎಂದು ತಿಳಿಸಿದರು.

ವಿಜಯೇಂದ್ರ ನೇಮಕ ಸರಿ: ವಿಜಯೇಂದ್ರ ಬದಲಾವಣೆಗೆ ಯತ್ನಾಳ್ ಆಗ್ರಹದ ಬಗ್ಗೆ ಮಾತನಾಡಿ, ಪಕ್ಷದ ವರಿಷ್ಠರು ರಾಜ್ಯಾಧ್ಯಕ್ಷರನ್ನು ನೇಮಕ ಮಾಡಿದ್ದಾರೆ. ಈ ಸಂದರ್ಭದಲ್ಲಿ ವಿಜಯೇಂದ್ರರನ್ನು ಪಕ್ಷದ ಅಧ್ಯಕ್ಷರಾಗಿ ಮಾಡಿರುವುದು ಹೈಕಮಾಂಡ್‌ಗೆ ಔಚಿತ್ಯ ಅನಿಸಿದೆ. ಪಕ್ಷದಲ್ಲಿ ವಿಜಯೇಂದ್ರ ಮತ್ತು ಯತ್ನಾಳ್ ತಂಡ ಅಂತ ಇಲ್ಲ. ಆದರೆ ಪಕ್ಷದೊಳಗಿನ ■ 6ನೇ ಪುಟಕ್ಕೆ



ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ರಾಜ್ಯ ಬಿಜೆಪಿ ಉಸ್ತುವಾರಿ, ರಾಜ್ಯಸಭಾ ಸದಸ್ಯ ಡಾ.ರಾಧಾ ಮೋಹನ್‌ದಾಸ್ ಅಗರವಾಲ್ ನೇತೃತ್ವದಲ್ಲಿ ಬಿಜೆಪಿ ಕೋರ್ ಕಮಿಟಿ ಸಭೆ ನಡೆಯಿತು.

ಬಡಾವಣೆ ನಿರ್ಮಾಣಕ್ಕೆ ಭೂಮಿಯೇ ಹೋಗದವರಿಗೆ ಬರೀ 3000 ರೂ. ದರದಲ್ಲಿ ಮುಡಾದಿಂದ 23 ನಿವೇಶನ ಮಂಜೂರು

ಲೋಕಾಯುಕ್ತಕ್ಕೆ ದೂರು ನೀಡಿದರೂ ಕ್ರಮ ಕೈಗೊಳ್ಳದೇ ಇರುವುದಕ್ಕೆ ಪ್ರಧಾನಿ ಮೋದಿಗೆ ದೂರು ನೀಡಿದ ಮೈಸೂರು ವಕೀಲ ರವಿಕುಮಾರ್



ಮೈಸೂರು, ಡಿ.7–ಬಡಾವಣೆ ನಿರ್ಮಾಣದಲ್ಲಿ ತನ್ನ ಭೂಮಿ ಇಲ್ಲದೇ ಇದ್ದರೂ ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರಿಗೆ ಕೋಟ್ಯಾಂತರ ರೂ. ಮೌಲ್ಯದ 23 ನಿವೇಶನಗಳನ್ನು ಕೇವಲ 3 ಸಾವಿರ ರೂ.ಗಳಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಹಿಂದಿನ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಅವರು ಕ್ರಯಪತ್ರದ ಮೂಲಕ ಪರಭಾರೆ ಮಾಡಿದ್ದಾರೆ ಎಂದು ಮೈಸೂರಿನ ವಕೀಲ ವಿ.ರವಿಕುಮಾರ್ ಅವರು ಪ್ರಧಾನಿ ಮೋದಿಯವರಿಗೆ ಪತ್ರ ಬರೆದಿದ್ದಾರೆ.

ಈ ಭ್ರಷ್ಟಾಚಾರದ ಬಗ್ಗೆ ಮೈಸೂರಿನ ಸಾಮಾಜಿಕ ಕಾರ್ಯಕರ್ತ ಕೆ.ಕೃಷ್ಣ ಎಂಬುವರು ಲೋಕಾಯುಕ್ತರಿಗೆ ದೂರು ಸಲ್ಲಿಸಿ ವರ್ಷ ಕಳೆದರೂ ಈವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂಬುದನ್ನು ಉಲ್ಲೇಖಿಸಿರುವ ಅವರು, ಕೋಟ್ಯಾಂತರ ರೂ. ಮೌಲ್ಯದ ನಿವೇಶನಗಳಿಗೆ ತಲಾ ಕೇವಲ 3 ಸಾವಿರ ರೂ.ಗಳನ್ನು ಪರಿಗಣಿಸಿ ತಲಾ 600 ರೂ. ನೋಂದಣಿ ಶುಲ್ಕ ಪಾವತಿಸಿಕೊಂಡು ನೋಂದಣಿ ಮಾಡುವ ಮೂಲಕ ಹೆಚ್ಚುವರಿ ನೋಂದಣಾಧಿಕಾರಿ ಶ್ರೀಮತಿ ಕಾವ್ಯ ಅವರು ಸರ್ಕಾರಕ್ಕೆ ಕೋಟ್ಯಾಂತರ ರೂ. ನಷ್ಟ ಉಂಟು ಮಾಡಿದ್ದಾರೆ ಎಂದು ಅವರು ಆರೋಪಿಸಿದ್ದಾರೆ.



ವಿ.ರವಿಕುಮಾರ್

ವಿವರ: ಮೈಸೂರಿನ ರಿಯಲ್ ಎಸ್ಟೇಟ್ ಉದ್ಯಮಿ ಎನ್.ಮಂಜುನಾಥ್ ಎಂಬುವರಿಗೆ ಮುಡಾ ಹಿಂದಿನ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್ ಅವರು 2023ರ ಏಪ್ರಿಲ್ 5, ಏ.6, ಏ.18 ಮತ್ತು ಏ.19ರಂದು ಮೈಸೂರಿನ ವಿಜಯನಗರ ಹಾಗೂ ದಟ್ಟಗಳ್ಳಿ ಬಡಾವಣೆಗಳಲ್ಲಿ ಅಭಿವೃದ್ಧಿಪಡಿಸಿರುವ ಕೋಟ್ಯಾಂತರ ರೂ. ಮೌಲ್ಯದ 30X40, 40X60 ಮತ್ತು 50X80 ಅಳತೆಯ ಒಟ್ಟು 23 ನಿವೇಶನಗಳನ್ನು ಮುಡಾ ವಿಶೇಷ ತಹಸೀಲ್ದಾರ್ ಶಿವಕುಮಾರ್ ಮೂಲಕ ನೋಂದಣಿ ಮಾಡಿಕೊಟ್ಟಿದ್ದಾರೆ. ಪ್ರತಿ ನಿವೇಶನವೂ 1 ಕೋಟಿಗೂ ಹೆಚ್ಚು ಮೌಲ್ಯದ್ದಾಗಿದ್ದು, ಈ ನಿವೇಶನಗಳಿಗೆ ಮುಡಾದಿಂದ ತಲಾ 3 ಸಾವಿರ ರೂ.ಗಳನ್ನು ಮಾತ್ರ ನಿಗದಿಪಡಿಸಲಾಗಿದೆ ಎಂದು ಲೋಕಾಯುಕ್ತಕ್ಕೆ ನೀಡಿರುವ ದೂರನ್ನು ಅವರು ಉಲ್ಲೇಖಿಸಿದ್ದಾರೆ.

ವಿಶೇಷವೆಂದರೆ ಮುಡಾ ಬಡಾವಣೆಗಳನ್ನು ನಿರ್ಮಾಣ ಮಾಡಿದ ವೇಳೆ ಸ್ವಾಧೀನಪಡಿಸಿಕೊಂಡಿರುವ ಯಾವುದೇ ಭೂಮಿಗೂ ರಿಯಲ್ ಎಸ್ಟೇಟ್ ಉದ್ಯಮಿ ಮಂಜುನಾಥ್ ಮಾಲೀಕರಲ್ಲ. ಅವರಿಗೆ ಪರಿಹಾರವಾಗಿ ನಿವೇಶನ ನೋಂದಣಿ ಮಾಡಿಕೊಟ್ಟಿರುವ ಪತ್ರದಲ್ಲೂ ಕೂಡ ಮಂಜುನಾಥ್ ಕಳೆದುಕೊಂಡಿರುವ ಭೂಮಿಯ ಬಗ್ಗೆ ಉಲ್ಲೇಖವೇ ಇಲ್ಲ. ಆದರೂ ಕೂಡ ಮುಡಾಗಾಗಿ ಭೂಮಿಯನ್ನೇ ಕಳೆದುಕೊಳ್ಳದೇ ಇರುವ ಮಂಜುನಾಥ್ ಅವರಿಗೆ ಕೋಟ್ಯಾಂತರ ರೂ. ಮೌಲ್ಯದ ನಿವೇಶನಗಳನ್ನು ಕೇವಲ 3 ಸಾವಿರ ರೂ.ಗಳಿಗೆ ಕಾನೂನು ಬಾಹಿರವಾಗಿ ಪರಭಾರೆ ಮಾಡಲಾಗಿದೆ ಎಂದು ಅವರು ಆರೋಪಿಸಿದ್ದಾರೆ.

ಈ ಕ್ರಯಪತ್ರಗಳನ್ನು ನೋಂದಣಿ ಮಾಡುವ ವೇಳೆ ಉಚ್ಚ ನ್ಯಾಯಾಲಯ ರಿಟ್ ಅರ್ಜಿ ಪಿಟಿಷನ್ ಸಂಖ್ಯೆ 25130/2022, ದಿನಾಂಕ 15–12–2022ರ ಆದೇಶದಂತೆ ಮಂಜೂರು ಮಾಡಲಾಗಿದೆ ಎಂದು ಉಲ್ಲೇಖಿಸಲಾಗಿದೆ.

ವಿಚಿತ್ರವೆಂದರೆ ಸದರಿ ರಿಟ್ ಅರ್ಜಿಯ ಅರ್ಜಿದಾರರು ಶ್ರೀಮತಿ ಶಿವಮ್ಮ, ಶ್ರೀಮತಿ ಎಂ.ಎನ್. ಶೋಭಾ, ರಾಜಶೇಖರ್ ಮತ್ತು ಪ್ರದೀಪ್ ಕುಮಾರ್ ಎಂಬುವರಾಗಿದ್ದು, ಮಂಜುನಾಥ್ ಅರ್ಜಿದಾರರೇ ಅಲ್ಲ. ಆದರೆ ಅವರು ಇವರುಗಳ ಜಿಪಿಎ ಪ್ರತಿನಿಧಿ ಎಂದಿರುವ ವಕೀಲ ರವಿಕುಮಾರ್, ನ್ಯಾಯಾಲಯದ ಆದೇಶದಲ್ಲಿ ಅರ್ಜಿದಾರರ ಮನವಿಯನ್ನು ■ 6ನೇ ಪುಟಕ್ಕೆ

ಷಟ್ಸ್ಥಲ ಬ್ರಹ್ಮೋಪದೇಶಪೂರ್ವಕ ಪಟ್ಟಾಧಿಕಾರ ಮಹೋತ್ಸವ ಇಂದು; ಶ್ರೀ ಮಹಾಂತೇಶ್ವರ ಮಂಗಳ ಮಂಟಪ ಉದ್ಘಾಟನೆ

ಮೈಸೂರು,ಡಿ.7–ಮೈಸೂರು ತಾಲೂಕು ಜಯಪುರ ಹೋಬಳಿ ಬರಡನಪುರ ಶ್ರೀ ಮಹಾಂತೇಶ್ವರ ಮಠದ ವತಿಯಿಂದ ನಾಳೆ (ಡಿ.8)ರಂದು ಷಟ್ಸ್ಥಲ ಬ್ರಹ್ಮೋಪದೇಶಪೂರ್ವಕ ಪಟ್ಟಾಧಿಕಾರ ಮಹೋತ್ಸವ ಮತ್ತು ಶ್ರೀ ಮಹಾಂತೇಶ್ವರ ಮಂಗಳ ಮಂಟಪ ಉದ್ಘಾಟನಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಬೆಳಗ್ಗೆ 4ಕ್ಕೆ ಶ್ರೀಕರ್ತೃಗದ್ದುಗೆಗೆ ಏಕವಾರ ರುದ್ರಾಭಿಷೇಕ, ಅಷ್ಟೋತ್ತರ ಸಹಿತ ಮಹಾಮಂಗಳಾರತಿ, ಪೂಜಾ ಕೈಂಕರ್ಯ ನಡೆಯಲಿದೆ. ಬೆಳಗ್ಗೆ 6ಕ್ಕೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳಿಗೆ ಪಾದಪೂಜೆ, ಬೆಳಗ್ಗೆ 8ಕ್ಕೆ ಶ್ರೀಕಂಬಳೀಶ್ವರ ಮಠದ ಮಲ್ಲನಮೂಲೆ ಶ್ರೀ ಚನ್ನಬಸವ ಸ್ವಾಮೀಜಿ ಷಟ್ಸ್ಥಲ ಧ್ವಜಾರೋಹಣ ನೆರವೇರಿಸುವರು. ಸಂಜೆ 7ಕ್ಕೆ ನೂತನ ಶ್ರೀಗಳ ಪುಷ್ಪಾಂದೋಳಿಕೋತ್ಸವ ಶ್ರೀಮಠದಿಂದ ಹೊರಟು ಬರಡನಪುರ ಗ್ರಾಮದ ಪ್ರಮುಖ ಬೀದಿಗಳಲ್ಲಿ ಅಲಂಕೃತ ಪಲ್ಲಕ್ಕಿಯಲ್ಲಿ ಸಕಲವಾದ್ಯ ಮೇಳಗಳೊಂದಿಗೆ ಸಾಗಲಿದೆ. ಬೆಳಗ್ಗೆ 10.30ಕ್ಕೆ ಜರುಗುವ ಧಾರ್ಮಿಕ ಸಭೆಯ ಸಾನ್ನಿಧ್ಯವನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀಸಿದ್ಧಗಂಗಾ ಕ್ಷೇತ್ರದ ಶ್ರೀ ಸಿದ್ಧಲಿಂಗ ಮಹಾಸ್ವಾಮೀಜಿ ವಹಿಸುವರು. ಡಾ.ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳು, ಶ್ರೀ ಮಹಾಂತ ಸ್ವಾಮಿಗಳು, ಶ್ರೀಸಾಲೂರು ಬೃಹನ್ಮಠದ ಶ್ರೀಪಟ್ಟದ ಗುರುಸ್ವಾಮಿಗಳು, ಶ್ರೀಕುಂದೂರು ಮಠದ ಡಾ. ಶರತ್‌ಚಂದ್ರ ಸ್ವಾಮಿಗಳು, ದೇಗುಲ ಮಠದ ಕಿರಿಯ ಶ್ರೀಗಳಾದ ಶ್ರೀ ಚನ್ನಬಸವ ಸ್ವಾಮಿಗಳು, ಶ್ರೀ ಸಾಲೂರು ಬೃಹನ್ಮಠದ ಡಾ. ಶಾಂತಮಲ್ಲಿಕಾರ್ಜುನಸ್ವಾಮಿ ಉಪಸ್ಥಿತರಿರುವರು. ಶಾಸಕ ಜಿ.ಟಿ.ದೇವೇಗೌಡರು ಅಧ್ಯಕ್ಷತೆ ವಹಿಸುವರು.

ಕಾರ್ಯಕ್ರಮವನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸುವರು. ಶ್ರೀ ಮಹಾಂತೇಶ್ವರ ಮಂಗಳ ಮಂಟಪ ಉದ್ಘಾಟನೆಯನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೆರವೇರಿಸುವರು. ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ, ಶಾಸಕರಾದ ಟಿ.ಎಸ್.ಶ್ರೀವತ್ಸ, ಸಿ.ಎನ್. ಮಂಜೇಗೌಡ ಗ್ರಂಥ ಲೋಕಾರ್ಪಣೆ ಮಾಡುವರು. ಮುಖ್ಯ ಅತಿಥಿಗಳಾಗಿ ಶಾಸಕರಾದ ಕೆ. ಹರೀಶ್‌ಗೌಡ, ಗಣೇಶ್ ಪ್ರಸಾದ್, ಜಿ.ಡಿ. ಹರೀಶ್‌ಗೌಡ, ವೀರಶೈವ ಮುಖಂಡ ಪೊನ್ನಾಚಿ ಮಹದೇವಸ್ವಾಮಿ ಮತ್ತಿತರರು ಭಾಗವಹಿಸುವರು.

ಶ್ರೀ ಚಾಮುಂಡೇಶ್ವರಿ ದೇವಿಯ ತೈಲ ಚಿತ್ರ ಅನಾವರಣ...



ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ತ್ರಯೀನ್ಯಾಸ್ ಶ್ರೀವಿದ್ಯಾ ಮಂದಿರದಲ್ಲಿ ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಶನ್ ನಿರ್ಮಿಸಿದ್ದ ನಾಡದೇವತೆ ಶ್ರೀ ಚಾಮುಂಡೇಶ್ವರಿ ದೇವಿಯ ತೈಲ ಚಿತ್ರವನ್ನು ಸಂಸದ ಯದುವೀರ್ ಒಡೆಯರ್ ಅನಾವರಣಗೊಳಿಸಿದರು. ಈ ಸಂದರ್ಭದಲ್ಲಿ ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ಫೌಂಡೇಶನ್‌ನ ಸಂಸ್ಥಾಪಕ ಹೆಚ್.ಎಸ್.ತ್ಯಾಗರಾಜ್ ಇನ್ನಿತರರು ಉಪಸ್ಥಿತರಿದ್ದರು.

ದೇವಸ್ಥಾನ ನಿರ್ಮಾಣಕ್ಕೆ ಗುದ್ದಲಿಪೂಜೆ...




ಮೈಸೂರು ತಾಲೂಕಿನ ರಂಗನಾಥಪುರ ಗ್ರಾಮದಲ್ಲಿ ದಂಡಿನ ಮಾರಮ್ಮ ಆದಿಶಕ್ತಿ ದೇವಸ್ಥಾನ ನಿರ್ಮಾಣಕ್ಕೆ ಗುದ್ದಲಿಪೂಜೆ ನೆರವೇರಿಸಲಾಯಿತು. ತಾಲೂಕು, ಗ್ರಾಪಂ ಮಾಜಿ ಅಧ್ಯಕ್ಷ ಪುಟ್ಟಣ್ಣ, ಗ್ರಾಮದ ಮುಖಂಡರು ಇದ್ದರು.

ಇಂದು ಕ್ರಿಸ್ಮಸ್ ಕ್ಯಾರೋಲ್ ಗಾಯನ ಸ್ಪರ್ಧೆ

ಮೈಸೂರು, ಡಿ.7–ಕ್ರಿಸ್‌ಮಸ್ ಹಬ್ಬದ ಅಂಗವಾಗಿ ಕಾರ್ಮೆಲ್ ಕ್ಯಾಥೊಲಿಕ್ ಅಸೋಸಿಯೇಷನ್‌ನಿಂದ ಡಿ.8ರಂದು ಬೆಳಗ್ಗೆ 8.30ರಿಂದ ಸಂಜೆ 6.30ರವರೆಗೆ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಕ್ರಿಸ್ಮಸ್ ಕ್ಯಾರೊಲ್ ಗಾಯನ ಸ್ಪರ್ಧೆ ಆಯೋಜಿಸಲಾಗಿದೆ.

12 ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದ್ದು, ಪೂರ್ವ ಪ್ರಾಥಮಿಕ ಶಾಲೆಗಳಿಂದ ಆರಂಭವಾಗಿ ಕಾಲೇಜು, ಧಾರ್ಮಿಕ ಸಂಸ್ಥೆ, ದೇವಾಲಯ ಹಾಗೂ ವೃತ್ತಿ ನಿರತರು ಇದರಲ್ಲಿ ಪಾಲ್ಗೊಳ್ಳಲಿದ್ದಾರೆ. ಒಟ್ಟು 100 ಗುಂಪುಗಳಲ್ಲಿ 4 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಲಿದ್ದಾರೆ. ವಿಜೇತರಿಗೆ ಆಕರ್ಷಕ ಬಹುಮಾನ, ಪಾರಿತೋಷಕ ನೀಡಲಾಗುವುದು. ಕಾರ್ಯಕ್ರಮಕ್ಕೆ ಸಂಸದ ಯದುವೀರ್ ಒಡೆಯರ್ ಚಾಲನೆ ನೀಡಲಿದ್ದಾರೆ. ಧರ್ಮಗುರುಗಳಾದ ರಜೋ ಥಾಮಸ್, ಜೋಸೆಫ್ ಫ್ರಾನ್ಸಿಸ್, ರಿಷಿ ಇನ್ನಿತರರು ಭಾಗವಹಿಸಲಿದ್ದಾರೆ.

ರಾಷ್ಟ್ರ ಮಟ್ಟದ ಖೋ ಖೋ ಪಂದ್ಯಾವಳಿ ಸಾಧನೆ



ಮೈಸೂರು,ಡಿ.7–ಇತ್ತೀಚೆಗೆ ಉತ್ತರಪ್ರದೇಶದ ಅಲಿಘರ್‌ನಲ್ಲಿ ನಡೆದ 43ನೇ (18 ವರ್ಷದ ಒಳಗಿನ) ಬಾಲಕರ ರಾಷ್ಟ್ರೀಯ ಖೋ ಖೋ ಪಂದ್ಯಾವಳಿಯಲ್ಲಿ ಮೈಸೂರಿನ ಹರಿ ವಿದ್ಯಾಲಯದ ದ್ವಿತೀಯ ಪಿಯುಸಿ ವಿದ್ಯಾರ್ಥಿ ಭುವನ್ ಎಸ್ ಕರ್ನಾಟಕ ರಾಜ್ಯ ಸಂಸ್ಥೆಯನ್ನು ಪ್ರತಿನಿಧಿಸಿ ತೃತೀಯ ಸ್ಥಾನ ಗಳಿಸಿದ್ದಾರೆ. ರಾಷ್ಟ್ರೀಯ ಖೋ ಖೋ ಪಂದ್ಯಾವಳಿಯಲ್ಲಿ ಭಾಗವಹಿಸಿ, ತೃತೀಯ ಸ್ಥಾನ ಗಳಿಸಿದ ಭುವನ್ ಅವರನ್ನು ಸಂಸ್ಥೆ ಆಡಳಿತ ಮಂಡಳಿ ಅಭಿನಂದಿಸಿದೆ.

ಆರ್.ಯಶೋಧ ಅವರಿಗೆ ಡಾ.ಬಿ.ಆರ್.ಅಂಬೇಡ್ಕರ್ ಶ್ರೇಷ್ಠ ಸೇವಾ ರಾಷ್ಟ್ರೀಯ ಪ್ರಶಸ್ತಿ



ಮೈಸೂರು, ಡಿ. 7–ಮಹಿಳಾ ಉದ್ಯಮಿ ಹಾಗೂ 20 ವರ್ಷಗಳಿಂದ ಸಮಾಜ ಸೇವಾ ಕ್ಷೇತ್ರದಲ್ಲಿ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಾ ಬಂದಿರುವ ಮೈಸೂರಿನ ಗಾಂಧಿನಗರದ ನಿವಾಸಿ ಆರ್.ಯಶೋಧ ಅವರಿಗೆ ದೆಹಲಿಯ ಭಾರತೀಯ ದಲಿತ ಸಾಹಿತ್ಯ ಅಕಾಡೆಮಿಯು ಡಿ.8ರಂದು ಆಯೋಜಿಸಿರುವ 40ನೇ ವರ್ಷದ ರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರತಿಷ್ಠಿತ ಡಾ.ಬಿ.ಆರ್.ಅಂಬೇಡ್ಕರ್ ಶ್ರೇಷ್ಠ ಸೇವೆ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲು ನಿರ್ಧರಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ನಿಧನ



ನಾಗರತ್ನ

ಶ್ರೀರಂಗಪಟ್ಟಣ, ಡಿ.7– ಶ್ರೀರಂಗಪಟ್ಟಣ ನಿವಾಸಿ ನಾಗರತ್ನ (ನಾಗಮ್ಮ) (74) ಶನಿವಾರ ನಿಧನರಾದರು. ಮೃತರು ಪತಿ ನಾರಾಯಣ್, ಇಬ್ಬರು ಪುತ್ರಿಯರು ಹಾಗೂ ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಪಟ್ಟಣದ ಶಂಭುಲಿಂಗಯ್ಯನಕಟ್ಟೆ ರುದ್ರಭೂಮಿಯಲ್ಲಿ ಶನಿವಾರ ಸಂಜೆ ಮೃತರ ಅಂತ್ಯಕ್ರಿಯೆ ನೆರವೇರಿಸಲಾಯಿತು.



ವಿಜಯಕುಮಾರ್

ಮಂಡ್ಯ,ಡಿ.7– ಶ್ರೀರಂಗಪಟ್ಟಣ ತಾಲೂಕು ಕಾರೇಕುರ ಗ್ರಾಮದ ನಿವಾಸಿ ವಿಜಯಕುಮಾರ್ (35) ಶನಿವಾರ ಅನಾರೋಗ್ಯದಿಂದ ನಿಧನರಾದರು. ಮೃತರು ಪತ್ನಿ, ತಂದೆ, ತಾಯಿ ಸೇರಿದಂತೆ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಸ್ವಗ್ರಾಮದ ಅವರ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಲ್ಲಿ ಗ್ಯಾಸ್ ಪೈಪ್‌ಲೈನ್ ಕಾಮಗಾರಿ ಪುನರಾರಂಭ





ಪೈಪ್‌ಲೈನ್ ಮೂಲಕ ಮನೆ ಮನೆಗೆ ಅಡುಗೆ ಅನಿಲ ಪೂರೈಸುವ ಸಲುವಾಗಿ ಮೈಸೂರಿನಲ್ಲಿ ಗ್ಯಾಸ್ ಪೈಪ್‌ಲೈನ್ ಅಳವಡಿಸುವ ಕಾಮಗಾರಿಯು ಮತ್ತೆ ಆರಂಭವಾಗಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಡಿ.7(ಆರ್‌ಕೆ)– ಪೈಪ್‌ಲೈನ್ ಮೂಲಕ ಮನೆ ಮನೆಗೆ ಅಡುಗೆ ಅನಿಲ ಪೂರೈಸುವ ಸಲುವಾಗಿ ಮೈಸೂರಿನಲ್ಲಿ ಗ್ಯಾಸ್ ಪೈಪ್‌ಲೈನ್ ಅಳವಡಿಸುವ ಕಾಮಗಾರಿ ಮತ್ತೆ ಆರಂಭವಾಗಿದೆ.

ಯೋಜನೆ ಅನುಷ್ಠಾನಕ್ಕೆ ನಿಗದಿಪಡಿಸಿದ್ದ ದರ ಕಡಿತ ಮಾಡಿದ್ದರಿಂದ ಕಳೆದ ಒಂದೂವರೆ ವರ್ಷದಿಂದ ಈ ಕಾಮಗಾರಿ ಸ್ಥಗಿತಗೊಂಡಿತ್ತು. ಇದೀಗ ನಗರಾಭಿವೃದ್ಧಿ ಇಲಾಖೆಯ ಸೂಚನೆ ಮೇರೆಗೆ ಕಾಮಗಾರಿ ಆರಂಭಗೊಂಡಿದ್ದು, ಮೈಸೂರಿನಲ್ಲಿ ಶೀಘ್ರ ಗ್ರಾಹಕರು ಕಡಿಮೆ ದರದಲ್ಲಿ ಸಮರ್ಪಕ ಅಡುಗೆ ಅನಿಲ ಪಡೆಯಬಹುದಾಗಿದೆ. ಮೈಸೂರಿನ ರಾಮಕೃಷ್ಣನಗರದ ದಟ್ಟಗಳ್ಳಿ, ಕುವೆಂಪುನಗರ, ಹೆಬ್ಬಾಳಿನ ಕೆಲ ಬಡಾವಣೆಗಳಲ್ಲಿ ಈಗಾಗಲೇ ಪೈಪ್‌ಲೈನ್ ಅಳವಡಿಸಿದ್ದು, ಮನೆಗಳಿಗೆ ಸಂಪರ್ಕವನ್ನೂ ನೀಡಲಾಗಿದೆ. ರಿಂಗ್ (ಹೊರವರ್ತುಲ) ರಸ್ತೆಯಲ್ಲಿ ದೊಡ್ಡ ಪ್ರಮಾಣದ ಗ್ಯಾಸ್ ಪೈಪ್‌ಲೈನ್ ಅಳವಡಿಸಿ, ಅದರ ಮೂಲಕ ಮೈಸೂರು ನಗರದ ಎಲ್ಲಾ ಬಡಾವಣೆಗಳಿಗೆ ಸಂಪರ್ಕ ಕಲ್ಪಿಸುವುದು ಈ ಯೋಜನೆಯ ಉದ್ದೇಶ.



> “ಈ ಹಿಂದೆ ನಿಗದಿಗೊಳಿಸಿದ್ದ ಅನುಮತಿ ದರ ಕಡಿಮೆ. ಹಾಗಾಗಿ ಯೋಜನೆಯನ್ನು ಅನುಷ್ಠಾನ ಮಾಡಲು ಸಾಧ್ಯವಿಲ್ಲ ಎಂಬ ಕಾರಣ ಹೇಳಿ ಕಂಪನಿಯವರು ಗ್ಯಾಸ್ ಪೈಪ್‌ಲೈನ್ ಅಳವಡಿಸುವ ಕಾಮಗಾರಿಯನ್ನು ಸುಮಾರು 6 ತಿಂಗಳ ಕಾಲ ಸ್ಥಗಿತಗೊಳಿಸಿದ್ದರು. ಇದೀಗ ಸರ್ಕಾರದ ಗೆಜೆಟ್ ಅನುಸಾರ ಹಳೆಯ ದರವನ್ನು ನೀಡಬೇಕೆಂದು ಸರ್ಕಾರದ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗಳು ನಿರ್ದೇಶನ ನೀಡಿರುವ ಕಾರಣ ಮೈಸೂರು ನಗರಾದ್ಯಂತ ಕಾಮಗಾರಿ ಚುರುಕುಗೊಂಡಿದೆ. ಹಳ್ಳ ತೆಗೆದು ತಕ್ಷಣ ಪೈಪ್ ಅಳವಡಿಸಿ ಮುಚ್ಚಬೇಕು ಹಾಗೂ ಕೆಲಸ ಪ್ರಗತಿಯಲ್ಲಿದೆ ಎಂಬ ನಾಮಫಲಕ ಅಳವಡಿಸಿ ಯಾವುದೇ ಅಪಾಯ ಸಂಭವಿಸದಂತೆ ಮುನ್ನೆಚ್ಚರಿಕೆ ವಹಿಸಬೇಕೆಂದು ಕಂಪನಿಗೆ ಸೂಚನೆ ನೀಡಲಾಗಿದೆ. ಅಲ್ಲದೆ ಪಾಲಿಕೆ ಅಧಿಕಾರಿಗಳೂ ಆಗಿಂದಾಗ್ಗೆ ಪರಿಶೀಲಿಸಿ ಎಚ್ಚರಿಕಾ ಕ್ರಮವಹಿಸುತ್ತಿದ್ದಾರೆ. **–ಆಶಾದ್ ಉರ್ ರೆಹಮಾನ್ ಷರೀಫ್, ಮೈಸೂರು ಮಹಾನಗರಪಾಲಿಕೆ ಆಯುಕ್ತ**

ಈ ಯೋಜನೆಯನ್ನು ಕೈಗೆತ್ತಿಕೊಂಡಿರುವ ಎ.ಜಿ. ಅಂಡ್ ಪಿ ಪ್ರಥಮ್ ಕಂಪನಿಯು ಕಾಮಗಾರಿಗೆ ಅನುಮತಿ ಕೋರಿ ಮೈಸೂರು ಮಹಾನಗರಪಾಲಿಕೆಗೆ ಸಲ್ಲಿಸಿದ್ದ ಅರ್ಜಿ ಸಂಬಂಧ ಕಳೆದ ಎರಡು ವರ್ಷದ ಹಿಂದೆ ಕೌನ್ಸಿಲ್ ಸಭೆಯಲ್ಲಿ ಚರ್ಚಿಸಿ ಪ್ರತಿ ಮೀಟರ್‌ಗೆ 1857 ರೂ. ಅನುಮತಿ ಶುಲ್ಕ ಮತ್ತು 100 ರೂ. ಮೇಲ್ವಿಚಾರಣೆ ಶುಲ್ಕ ಒಟ್ಟು 1957 ರೂ.ಗಳನ್ನು ನಿಗದಿಮಾಡಿ ಕಂಪನಿಗೆ ಕಾಮಗಾರಿ ಕೈಗೊಳ್ಳಲು ಅನುಮತಿ ನೀಡಿದ್ದರಿಂದ ಕೆಲ ಭಾಗಗಳಲ್ಲಿ ಕಾಮಗಾರಿ ಆರಂಭಿಸಲಾಗಿತ್ತು.

ತದನಂತರ ಕೇಂದ್ರ ಸರ್ಕಾರವು ಅನುಮತಿ ಶುಲ್ಕವನ್ನು ಮೀಟರ್‌ಗೆ 1 ರೂ.ಗೆ ಇಳಿಕೆ ಮಾಡಿದ್ದರಿಂದ ಮಹಾನಗರಪಾಲಿಕೆಗೆ 25.06 ಕೋಟಿ ರೂ. ಆದಾಯ ನಷ್ಟವಾಗುತ್ತದೆ. ಹಾಗಾಗಿ ಈ ಹಿಂದೆ ಮೈಸೂರು ಮಹಾನಗರಪಾಲಿಕೆ ಕೌನ್ಸಿಲ್ ಸಭೆಯಲ್ಲಿ ನಿರ್ಧರಿಸಿದ್ದ ದರವನ್ನೇ ನಿಗದಿಪಡಿಸಬೇಕೆಂದು ಕೆಲ ಪಾಲಿಕೆ ಸದಸ್ಯರು ಒತ್ತಾಯಿಸಿದ್ದರು. ಈ ಕುರಿತಂತೆ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಅವರಿಗೂ ಪತ್ರ ಬರೆದಿದ್ದರು. ಈ ಹಿನ್ನೆಲೆಯಲ್ಲಿ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಅವರು ಗೆಜೆಟ್‌ನಲ್ಲಿ ಸೂಚಿಸಿರುವಂತೆ ಯಥಾವತ್ ನಿಯಮ ಪಾಲಿಸುವಂತೆ ನಿರ್ದೇಶನ ನೀಡಿರುವುದರಿಂದ ಕಂಪನಿಯು ಪೈಪ್‌ಲೈನ್ ಮೂಲಕ ಗ್ಯಾಸ್ ಪೂರೈಸುವ ಯೋಜನೆಯ ಕಾಮಗಾರಿಯನ್ನು ಪುನರಾರಂಭಿಸಿದೆ.

ಪ್ರಸ್ತುತ ನಿವೇದಿತಾನಗರ, ವಿದ್ಯಾರಣ್ಯಪುರಂನಲ್ಲಿ ಬಾಕಿ ಉಳಿದಿದ್ದ ರಿಂಗ್ ರಸ್ತೆ ಭಾಗ ಉದಯಗಿರಿ ಸೇರಿದಂತೆ ಮೈಸೂರಿನ ಬಹುತೇಕ ಎಲ್ಲಾ ಭಾಗಗಳಲ್ಲಿ ಕಂಪನಿಯು ಕ್ರೇನ್ ಮೂಲಕ ಪೈಪ್‌ಲೈನ್‌ಗಳನ್ನು ತಂದು ಗುಂಡಿ ತೆಗೆದು ಅಳವಡಿಸುವ ಕಾಮಗಾರಿಯನ್ನು ಚುರುಕುಗೊಳಿಸಿದೆ. ತ್ವರಿತವಾಗಿ ಕೆಲಸ ಮುಗಿಸಿ 6ರಿಂದ 7 ತಿಂಗಳೊಳಗಾಗಿ ಯೋಜನೆಯನ್ನು ಪೂರ್ಣಗೊಳಿಸಿ ಎಲ್ಲಾ ಮನೆಗಳಿಗೂ ಗ್ಯಾಸ್ ಪೈಪ್‌ಲೈನ್ ಸಂಪರ್ಕದ ಮೂಲಕ ಗ್ಯಾಸ್ ಕಲ್ಪಿಸಲಾಗುವುದು ಎಂದು ಎಜಿ ಅಂಡ್ ಪಿ ಪ್ರಥಮ್ ಕಂಪನಿ ಮೇಲ್ವಿಚಾರಕ ಸಂಜಿತ್ ಸುಮನ್ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

08.12.2024 ಭಾನುವಾರ, ಮಳೆ ನಕ್ಷತ್ರ: ಜ್ಯೇಷ್ಠ, 02.12.2024 ರಿಂದ 15.12.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಶತಭಿಷ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಕಾರ್ಮೆಲ್ ಕ್ಯಾಥೋಲಿಕ್ ಅಸೋಸಿಯೇಷನ್:** ಬೆಳಗ್ಗೆ 8.30 ರಿಂದ ಕ್ರಿಸ್‌ಮಸ್ ಹಬ್ಬದ ಅಂಗವಾಗಿ ಕ್ರಿಸ್ಮಸ್ ಕ್ಯಾರೊಲ್ ಗಾಯನ ಸ್ಪರ್ಧೆ, ಮುಖ್ಯ ಅತಿಥಿಗಳು : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಧರ್ಮಗುರುಗಳಾದ ರಜೋ ಥಾಮಸ್, ಜೋಸೆಫ್ ಫ್ರಾನ್ಸಿಸ್, ರಿಷಿ, ಸಂಜೆ 4.30ಕ್ಕೆ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಪೊಲೀಸ್ ಅಕಾಡೆಮಿಯ ನಿರ್ದೇಶಕ ಚನ್ನಬಸವಣ್ಣ, ಮಂಡ್ಯ ಧರ್ಮಸಭೆಯ ಬಿಷಪ್ ಮಾರ್ ಸೆಬಾಸ್ಟಿಯನ್, ಧರ್ಮ ಗುರು ಅಗಸ್ಟೀನ್ ಪಯ್ಯಂ ಪಳ್ಳಿಲ್, ಲಾಯಲ್ ವರ್ಲ್ಡ್ ಸಮೂಹದ ಅಧ್ಯಕ್ಷ ಪಿ. ಮೋಹಿದ್ದೀನ್, ಸ್ಥಳ:ಮಹಾರಾಜ ಕಾಲೇಜು ಶತಮಾನೋತ್ಸವ ಭವನ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕುತ್ತಿಗೆ ಹಾಗೂ ಬೆನ್ನು ನೋವಿಗೆ ಅಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಮಹಾಬೋಧಿ ಶಾಲೆ :** ಚಿಗುರು ಹಬ್ಬ, ಶಾಲಾ ವಾರ್ಷಿಕೋತ್ಸವ, ಉಪಸ್ಥಿತರು : ಮಹಾಬೋಧಿ ಸೊಸೈಟಿ ಅಧ್ಯಕ್ಷ ಭಿಕ್ಷು ಕಸ್ಸಪ ಮಹಾತೇರಾ, ಉಪ ಪೊಲೀಸ್ ಆಯುಕ್ತ ಮುತ್ತುರಾಜು, ಪ್ರಣವ್ ಚಂದ್ರನ್ ಕೋಡೂರ್, ಭಿಕ್ಷು ಧಮ್ಮಲೋಕ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಜವರೇಗೌಡ, ಸಿದ್ಧಾರ್ಥ್ ವಾತ್ಸನ್, ಸಿ.ಎನ್. ರಾಜು, ಸ್ಥಳ:ಕಲಾಮಂದಿರ, ಬೆಳಗ್ಗೆ 8.30ಕ್ಕೆ.

■ **ತಪೋನಂದನ ಬ್ಯಾಡ್ಮಿಂಟನ್ ಅಸೋಸಿಯೇಷನ್, ಬಿದಿರು ಸ್ಪೋರ್ಟ್ಸ್ ಕ್ಲಬ್ :** ಮೈಸೂರು ರಾಜವಂಶಸ್ಥ 'ಒಡೆಯರ್ ಕಪ್' ಬ್ಯಾಡ್ಮಿಂಟನ್ ಪಂದ್ಯಾವಳಿ, ಸ್ಥಳ: ಸ್ಪೋರ್ಟ್ಸ್ ಪಾರ್ಕ್, ರಾಜರಾಜೇಶ್ವರಿನಗರ, ಬೆಳಗ್ಗೆ 9ರಿಂದ.

■ **ಆಲ್ಕೋಹಾಲಿಕ್ಸ್ ಅನಾನಿಮಸ್ :** 23ನೇ ವಾರ್ಷಿಕೋತ್ಸವ, ನಿಮಗೆ ಅಥವಾ ನಿಮಗೆ ಗೊತ್ತಿರುವ ಇತರರಿಗೆ ಕುಡಿತದ ಸಮಸ್ಯೆಯೇ? ಕುರಿತು ಶಿಬಿರ, ಸ್ಥಳ: ಸೇಂಟ್ ಫಿಲೋಮಿನಾ ಚರ್ಚ್ ಆವರಣ, ಲಷ್ಕರ್ ಮೊಹಲ್ಲಾ, ಬೆಳಗ್ಗೆ 10 ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಕರ್ನಾಟಕ ರೋಲರ್ ಸ್ಕೇಟಿಂಗ್ ಸಂಸ್ಥೆ :** ರಾಷ್ಟ್ರ ಮಟ್ಟದ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಶಿಪ್ ಪಂದ್ಯಾವಳಿ, ಸ್ಥಳ: ಉನ್ನತಿನಗರ ಬಡಾವಣೆ, ಬೆಳಗ್ಗೆ 10 ರಿಂದ.

■ **ನೇವಲ್ ವೆಟರನ್ಸ್ ಅಸೋಸಿಯೇಷನ್ :** ನೇವಿ ಡೇ ಆಚರಣೆ, ಉಪಸ್ಥಿತರು : ಉಜಿರೆಯ ಎ.ಕೆ. ಶಿವನ್, ಸ್ಥಳ: ಹೋಟೆಲ್ ರಿಯೋ ಮೆರಿಡಿಯನ್, ಬೆಳಗ್ಗೆ 10ಕ್ಕೆ.

■ **ಶ್ರೀ ಸೂತ್ರ ಆಯುರ್ಧಾಮ :** ಕೂದಲಿನ ಉದುರುವಿಕೆ, ಇತರ ಕೂದಲಿನ ಸಮಸ್ಯೆಗಳಿಗೆ ಉಚಿತ ವೈದ್ಯಕೀಯ ತಪಾಸಣಾ ಶಿಬಿರ, ಸ್ಥಳ: ಶ್ರೀ ಸೂತ್ರ ಆಯುರ್ಧಾಮ, ಚಾಮುಂಡಿಪುರಂ, ಬೆಳಗ್ಗೆ 10 ರಿಂದ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಮಹಿಳಾ ಘಟಕ ಮತ್ತು ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್:** ಯುವ ಕವಯತ್ರಿ ಬಿ.ಎಂ.ರಜನಿ ಬಣವೆ ಅವರ ಚೊಚ್ಚಲ ಕೃತಿ 'ಭಾವನೆಗಳ ಗುಚ್ಛ' ಲೋಕಾರ್ಪಣೆ ಸಮಾರಂಭ, ಕಾರ್ಯಕ್ರಮ ಉದ್ಘಾಟನೆ: ಮಾಜಿ ಸಚಿವ ಎಂ.ಶಿವಣ್ಣ, ಕೃತಿ ಲೋಕಾರ್ಪಣೆ: ಹಿರಿಯ ಸಾಹಿತಿ ಚುಟುಕು ರತ್ನ ಡಾ.ಸಿಪಿಕೆ, ಪುಸ್ತಕ ತಾಂಬೂಲ ವಿತರಣೆ: ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಮುಖ್ಯ ಅತಿಥಿಗಳು: ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ರತ್ನಹಾಲಪ್ಪಗೌಡ, ವೈದ್ಯವಾರ್ತಾ ಪ್ರಕಾಶನದ ನಿರ್ದೇಶಕ ಜೆ.ಪಿ.ಅರಸ್ ಮತ್ತು ಕೃತಿ ಲೇಖಕಿ ಬಿ.ಎಂ.ರಜನಿ ಬಣವೆ, ಅಧ್ಯಕ್ಷತೆ: ಅರಸು ಜಾಗೃತಿ ಅಕಾಡೆಮಿ ಚಾರಿಟೆಬಲ್ ಟ್ರಸ್ಟ್ ಗೌರವ ಕಾರ್ಯದರ್ಶಿ ಡಾ.ಎಂ.ಜಿ.ಆರ್.ಅರಸ್, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣ, ವಿಜಯನಗರ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ಅರಸು ಮಹಾಮಂಡಲಿ ಚಾರಿಟಬಲ್ ಟ್ರಸ್ಟ್, ಕೆಯುಎಂಸಿ ಟ್ರಸ್ಟ್ :** ಜನಾಂಗದ ಯುವ ಜನೋತ್ಸವ, ಜನಾಂಗದ ಸಾಧಕರ ಪರಿಷ್ಕೃತ ಪುಸ್ತಕ ಬಿಡುಗಡೆ, ಜನಾಂಗದ ಸಾಧಕರ, ಚಿಂತಕರ 'ಚಿಂತನ–ಮಂಥನ' ಸಂವಾದ, ಉದ್ಘಾಟನೆ : ಚಿತ್ರ ಸಂಕಲನಕಾರ ಬಿ. ಸುರೇಶ್ ಅರಸ್, ಪುಸ್ತಕ ಬಿಡುಗಡೆ: ಬಿ.ಆರ್. ಜಯರಾಮರಾಜೇ ಅರಸ್, ಅಧ್ಯಕ್ಷತೆ : ಕೆಯುಎಂಸಿ ಟ್ರಸ್ಟ್ ಅಧ್ಯಕ್ಷ ಬಿ.ಎಸ್. ಶ್ರೀಧರ ರಾಜೇ ಅರಸ್, ಸ್ಥಳ: ಶ್ರೀವೇಣುಗೋಪಾಲಸ್ವಾಮಿ ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಬೆಳಗ್ಗೆ 10.30 ರಿಂದ.

■ **ರಂಗ ಚಾವಡಿ, ರಂಗಾಯಣ :** ವನ್ಯಜೀವಿ ಕ್ಯಾಲೆಂಡರ್ ಬಿಡುಗಡೆ ಸಮಾರಂಭ, ಉಪಸ್ಥಿತರು : ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಚಲನಚಿತ್ರ ಸಂಕಲನಕಾರ ಎಂ.ಎನ್. ಸ್ವಾಮಿ, ಕಲಾವಿದ ಎಂ.ಎಸ್. ಪ್ರಕಾಶ್ ಬಾಬು, ಸ್ಥಳ: ರಂಗ ಚಾವಡಿ, ರಂಗಾಯಣ ಆವರಣ, ಬೆಳಗ್ಗೆ 11ಕ್ಕೆ.

■ **ಶ್ರೀ ದುರ್ಗಾ ನೃತ್ಯ ಅಕಾಡೆಮಿ ಚಾರಿಟಬಲ್ ಟ್ರಸ್ಟ್ :** ಅವಲೋಕನ ಶೀರ್ಷಿಕೆಯಡಿ 10ನೇ ವರ್ಷದ ನೃತ್ಯ ಕಾರ್ಯಕ್ರಮ, ಉಪಸ್ಥಿತರು: ಡಾ.ಭವಾನಿ ಶಂಕರ್, ತನುಶ್ರೀರಾವ್, ಪಿರಮಿಡ್ ಸ್ಪಿರಿಚ್ಯುವಲ್ ಸೊಸೈಟಿ ಮೂವ್ಮೆಂಟ್ ಅವರಿಂದ ಅನಾಪನಸತಿ ಧ್ಯಾನ, ಸಂಜೆ 4ಕ್ಕೆ ಮೈಸೂರು ಹಾಗೂ ಕೊಳ್ಳೇಗಾಲದ ವಿದ್ಯಾರ್ಥಿಗಳಿಂದ ಭರತನಾಟ್ಯ, ಸಂಜೆ 6 ಗಂಟೆಗೆ ಕರುನಾಡ ದಶ ದೇಗುಲ ದರ್ಶನ ಏಕವ್ಯಕ್ತಿ ನೃತ್ಯ ಪ್ರಸ್ತುತಿ ಮಿಥುನ್ ಶ್ಯಾಮ್ ಅವರ ಶಿಷ್ಯೆ ಕಾವ್ಯ ಕಾಶಿನಾಥ್ ಅವರಿಂದ, ಸಂಜೆ 7 ಗಂಟೆಗೆ ಅಕಾಡೆಮಿಯ ವಿದ್ಯಾರ್ಥಿಗಳು ದಶಾವತಾ ನೃತ್ಯರೂಪಕ. ಸ್ಥಳ: ರಮಾಗೋವಿಂದ ಸಭಾಂಗಣ, ರಾಮಕೃಷ್ಣನಗರ, ಮಧ್ಯಾಹ್ನ 3ಕ್ಕೆ.

■ **ಪ್ರಜ್ಞಾಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್, ವಿಶ್ವಮೈತ್ರಿಬುದ್ಧ ವಿಹಾರ:** ದಲಿತ್ ವಾಯ್ಸ್ ಪತ್ರಿಕೆಯ ಸಂಪಾದಕರಾದ ವಿ.ಟಿ. ರಾಜಶೇಖರ್ ಅವರಿಗೆ ನುಡಿ ನಮನ, ಉಪಸ್ಥಿತರು : ಪ್ರೊ. ಅರವಿಂದ ಮಾಲಗತ್ತಿ, ಗೋಪಿನಾಥ್, ಎಸ್. ಚಿಕ್ಕಸವಕ, ಪುರುಷೋತ್ತಮ್, ಸಿ. ಹರಕುಮಾರ್, ಸೋಸಲೆ ಸಿದ್ದರಾಜು, ಪ್ರೊ. ನಂಜರಾಜೇ ಅರಸ್, ಉಮೇಶ್, ಅಹಿಂದ ಜವರಪ್ಪ, ಪುಟ್ಟನಂಜಯ್ಯ, ಚೋರನಹಳ್ಳಿ ಶಿವಣ್ಣ, ಅರಕಲವಾಡಿ ನಾಗೇಂದ್ರ, ಆರ್. ಲಕ್ಷ್ಮಣ್, ಡಾ. ತಿರುಮಲಯ್ಯ, ತಲಕಾಡು ಕೃಷ್ಣಮೂರ್ತಿ, ಸ್ಥಳ: ವಿಶ್ವಮೈತ್ರಿ ಬುದ್ಧ ವಿಹಾರ, ಸಂಜೆ 4ಕ್ಕೆ.

■ **ರೋಟರಿ ಮೈಸೂರು ಮಿಡ್‌ಟೌನ್, ಸ್ಪೋರ್ಟ್ಸ್ ಅಂಡ್ ಕಲ್ಚರಲ್ ಅಕಾಡೆಮಿ ಫಾರ್ ಡಿಫರೆಂಟ್ಲಿ ಏಬಲ್ಡ್ :** ಬಾಂಧವ್ಯ ಕ್ರೀಡಾ ಮಹೋತ್ಸವ–2024 ಸಾಂಸ್ಕೃತಿಕ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಚಲನಚಿತ್ರ ನಟ ಧರ್ಮ ಕೀರ್ತಿರಾಜ್, ಕರ್ನಾಟಕ ಸಂಗೀತ ಗಾಯಕ ರಜತ್ ಶರ್ಮ, ಬಾಂಧವ್ಯ ಅಧ್ಯಕ್ಷ ಆರ್. ವೆಂಕಟೇಶ್, ಉಪಾಧ್ಯಕ್ಷ ಆರ್. ರವೀಂದ್ರ ಬಾಬು, ಸಮುದಾಯ ಸೇವೆ ನಿರ್ದೇಶಕ ಆರ್. ನಾಗರಾಜ್, ಎಸ್. ಕುಮಾರಸ್ವಾಮಿ, ಎಲಿಜರ್ ಮಿಲ್ಟನ್, ಸ್ಥಳ: ಓವಲ್ ಮೈದಾನ, ಮೈಸೂರು ವಿಶ್ವವಿದ್ಯಾನಿಲಯ, ಸಂಜೆ 4.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ. ಬಿ.ಆರ್.ಅಣ್ಣಾಸಾಗರ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ರೋಹಿಣಿ ಸುಧಾಮ್, ವ್ಯಾಖ್ಯಾನ–ಡಾ.ಬೋರೇಗೌಡ ಚಿಕ್ಕಮರಳಿ, 6.50 ರೈತರಿಗೆ ಸಲಹೆ, 7.15 ಸಮಗ್ರ ವಿಕಾಸ ಕ್ಕಾಗಿ ದಿಟ್ಟ ಹೆಜ್ಜೆ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ವಿಕಾಸ ಅಕಾಡೆಮಿ, ಕಲಬುರ್ಗಿ, 8.30 ಕನ್ನಡ ಚಿತ್ರಗೀತೆಗಳು, 9.05 ನಮ್ಮ ಆರೋಗ್ಯ–ಆಯಿಷ್ ಯಶೋಗಾಥೆ ಸರಣಿಯಲ್ಲಿ 'ಸೀಳು ತುಟಿ ಮತ್ತು ಅಂಗಳು' ಮತ್ತು 'ನುಂಗುವ ತೊಂದರೆ' ಕುರಿತು ಕಾರ್ಯಕ್ರಮ ಭಾಗವಹಿಸುತ್ತಾರೆ : ಮಾನಸ.ಎ.ಎಸ್, ಸಿಂಧೂಶಾ ಚಂದ್ರನ್, ಕಾರ್ತಿಕ್.ಬಿ.ಕೆ ಮತ್ತು ಸುರೇಶ್.ಎಸ್ ನಡೆಸಿಕೊಡುತ್ತಾರೆ: ಬೇದ್ರೆ ಮಂಜುನಾಥ್ ಮತ್ತು ದಿಗ್ವಿಜಯ್. ಬಿ., ಪ್ರಾಯೋಜಕರು–ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ, ಮೈಸೂರು, 9.35 ಕನ್ನಡ ಚಿತ್ರಗೀತೆಗಳು, 10.00 ಕೇಳಿ ಗಿಳಿಗಳೇ: ಕಥೆ ಹೇಳುತ್ತಾರೆ–ಬಿ.ಜಿ.ಕವಿತಾ, 10.30 KRISH-TRISH and Balty boy ನಾವು ಭಾರತೀಯರು ಭಾಗ–02, 10.45 ಮಕ್ಕಳ ಮಂಟಪ : ಟಿ. ನರಸೀಪುರ ಕೇತುಪುರದ ಸರ್ಕಾರಿ ಪ್ರೌಢಶಾಲೆ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.15 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ–ವಚನಕಾರ್ತಿ ಅಕ್ಕಮಹಾದೇವಿ. ಮಾತನಾಡುತ್ತಾರೆ ಪಂಕಜ ಪದ್ಮನಾಭ, ಎಂ.ಕೆ.ಇಂದಿರಾ ಅವರ ಕಾದಂಬರಿಗಳನ್ನು ಕುರಿತು ಮಾತನಾಡುತ್ತಾರೆ ಭಾರತೀ ಹಿರಿಯಣ್ಣ, 12.35 ದೇವರನಾಮ– ದೀಪಿಕಾ ಪಾಂಡುರಂಗಿ, 12.45 ಜನಪದ ಸಂಗೀತ–ಮಂಡ್ಯ ಬೇವಿನಹಳ್ಳಿಯ ನಂಜಮ್ಮ ಮತ್ತು ಸಂಗಡಿಗರಿಂದ ದೂರೀ ಪದ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ಹೊಸ ಯುಗದ ಮೂಲಸೌಕರ್ಯಗಳು ಈ ಕುರಿತು ಮಾಹಿತಿ ನೀಡುತ್ತಾರೆ ನಿವೃತ್ತ ಅಧಿಕಾರಿ ಶರಚಂದ್ರ ರಾನಡೆ ಅವರು, 1.20 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖನ ಹಾಗೂ ಪ್ರಸ್ತುತಿ: ಶಭಾನ ಮತ್ತು ಕೀರ್ತಿ. ಎಸ್.ಬೈಂದೂರು, ಪರಿಕಲ್ಪನೆ: ಅಬ್ದುಲ್ ರಶೀದ್, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ–ರಾಮಾಪುರದ ರಾವಣ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ಎಸ್.ಶೀಲಾ–ಹಾಡುಗಾರಿಕೆ, 4.45 ಚಿತ್ರಗೀತೆಗಳು, 6.51 ಕೃಷಿರಂಗ: ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್.ಕೇಶವಮೂರ್ತಿ, ಆರ್.ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿ ಲೋಕ, ಕೃಷಿದರ್ಪಣ–ವಾರದ ಕೃಷಿರಂಗ, ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್.ಲೋಕೇಶ್ವರಿ, 7.45–ಕನ್ನಡದಲ್ಲಿ ಭಾಷಣ–ಮಹಿಳಾ ಸಬಲೀಕರಣಕ್ಕಾಗಿ ವಿವಿಧ ಯೋಜನೆಗಳು ಈ ಕುರಿತು ಮಾತನಾಡುತ್ತಾರೆ ಶಿವಮೊಗ್ಗದ ಕೆನರಾ ಬ್ಯಾಂಕಿನ ನಿವೃತ್ತ ಹಿರಿಯ ವ್ಯವಸ್ಥಾಪಕ ಜಿ.ಶಶಿಧರ್ ರಾನಡೆ, 8.00 'ಹಾದಿಯಲ್ಲಿ ಕಂಡ ಮುಖ' ಬಾನುಲಿ ಸರಣಿ, ಹುಣಸೂರು ತಾಲ್ಲೂಕು ಶ್ಯಾನುಭೋಗನಹಳ್ಳಿಯ ಬಯಲು ನಾಟಕ ಕಲಾವಿದರಾದ ದೊಂಬಿದಾಸರ ವೆಂಕಟಸ್ವಾಮಿ ಹಾಗೂ ನಾಗರಾಜ್ ಅವರೊಂದಿಗೆ ಸಂವಾದ. ಪ್ರಸ್ತುತಿ: ಅಬ್ದುಲ್ ರಶೀದ್, 9.15 ರಂಗಗೀತೆಗಳು, 9.30 National Programme of feature, 10.00 ರವಿವಾರದ ಅಖಿಲ ಭಾರತ ಸಂಗೀತ ಸಭಾ, ಸಂಗೀತ್‌ಕುಮಾರ್ ಪಾಠಕ್–ಪಖವಾಜ್, ಹರಿಮೋಹನ್ ಶರ್ಮ – ತಬಲಾ

■ **ಮೈಸೂರು ವಿಶ್ವವಿದ್ಯಾನಿಲಯ, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ :** 2024–25ನೇ ಸಾಲಿನ ಶೈಕ್ಷಣಿಕ ವಿಶ್ವವಿದ್ಯಾನಿಲಯ ಮಟ್ಟದ ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ಸಮಾರೋಪ ಹಾಗೂ ಪ್ರಶಸ್ತಿ ಪ್ರಮಾಣ ಪತ್ರ ವಿತರಣಾ ಸಮಾರಂಭ, ಅಧ್ಯಕ್ಷತೆ : ಮೈಸೂರು ವಿವಿ ಕುಲಸಚಿವ ಪ್ರೊ. ಎನ್. ನಾಗರಾಜ, ಉಪಸ್ಥಿತರು : ಆಡಳಿತಾಧಿಕಾರಿ ಪ್ರೊ. ಎಸ್.ಟಿ. ರಾಮಚಂದ್ರ, ಸ್ಥಳ: ಇಎಂಆರ್‌ಸಿ ಸಭಾಂಗಣ, ಮಾನಸಗಂಗೋತ್ರಿ, ಸಂಜೆ 5ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಅಘಹರಾನಂದ ಅವರಿಂದ ಶ್ರೀ ರಾಮಕೃಷ್ಣರು ವಿಶಿಷ್ಟ ವಿದ್ಯಮಾನ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ನಾದಬ್ರಹ್ಮ ಸಂಗೀತ ಸಭಾ :** ಲಕ್ಷ್ಯ ಸಮೂಹ ವಾದ್ಯಗಳ ಸ್ವರಗೋಷ್ಠಿ, ವಿದ್ವಾನ್ ಕೆ.ಜೆ. ದಿಲೀಪ್–ಪಿಟೀಲು, ವಿದುಷಿ ಇಳಾ ಸಂಗೀತ ದಿಲೀಪ್–ಪಿಟೀಲು ಮತ್ತು ಗಾಯನ, ವಿದ್ವಾನ್ ಸುನಾದ್ ಅನೂರ್–ರಿದಮ್ಸ್, ವಿದ್ವಾನ್ ಅಮನ್ ಮಹಾಜನ್–ಕೀಬೋರ್ಡ್, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ರಂಗಾಯಣ :** ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಅಗ್ನಿ ಮತ್ತು ಮಳೆ ನಾಟಕ ಪ್ರದರ್ಶನ, ರಚನೆ : ಗಿರೀಶ್ ಕಾರ್ನಾಡ್, ನಿರ್ದೇಶನ : ಸಾಲಿಯಾನ ಉಮೇಶ್ ನಾರಾಯಣ, ಸಂಗೀತ : ದಿಗ್ವಿಜಯ ಹೆಗ್ಗೋಡು, ಸ್ಥಳ: ವನರಂಗ, ರಂಗಾಯಣ, ಸಂಜೆ 6.30ಕ್ಕೆ.

ಸುತ್ತೂರಿನಲ್ಲಿಂದು, ನಂಜನಗೂಡು ತಾ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ :** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಸಂಸ್ಮರಣಾ ಜೆಎಸ್‌ಎಸ್ ಅಂತರ ಸಂಸ್ಥೆಗಳ ಕ್ರೀಡಾಕೂಟ, ಸ್ಥಳ: ಸುತ್ತೂರು ಕ್ಷೇತ್ರ, ಬೆಳಗ್ಗೆ 10 ರಿಂದ.

ಬರಡನಪುರದಲ್ಲಿಂದು, ಜಯಪುರ ಹೋಬಳಿ

■ **ಶ್ರೀ ಮಹಾಂತೇಶ್ವರ ಮಠ :** ಷಟ್ಸ್ಥಲ ಬ್ರಹ್ಮೋಪದೇಪೂರ್ವಕ ಪಟ್ಟಾಧಿಕಾರ ಮಹೋತ್ಸವ ಮತ್ತು ಶ್ರೀ ಮಹಾಂತೇಶ್ವರ ಮಂಗಳ ಮಂಟಪ ಉದ್ಘಾಟನಾ ಕಾರ್ಯಕ್ರಮ, ಶ್ರೀಕರ್ತೃಗದ್ದುಗೆಗೆ ಏಕವಾರ ರುದ್ರಾಭಿಷೇಕ, ಅಷ್ಟೋತ್ತರ ಸಹಿತ ಮಹಾಮಂಗಳಾರತಿ, ಪೂಜಾಕೈಂಕರ್ಯ, ಬೆಳಗ್ಗೆ 6ಕ್ಕೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳ ದಿವ್ಯ ಪಾದಪೂಜೆ, ಬೆಳಗ್ಗೆ 8ಕ್ಕೆ ಷಟ್ಸ್ಥಲ ಧ್ವಜಾರೋಹಣ: ಶ್ರೀಕಂಬಳೀಶ್ವರ ಮಠ, ಮಲ್ಲನಮೂಲೆ ಶ್ರೀ ಚನ್ನಬಸವ ಸ್ವಾಮೀಜಿ, ಸಂಜೆ 7ಕ್ಕೆ ನೂತನ ಶ್ರೀಗಳ ಪುಷ್ಪಾಂದೋಳಿಕೋತ್ಸವ, ಬೆಳಗ್ಗೆ 10.30ಕ್ಕೆ ಧಾರ್ಮಿಕ ಸಭೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀಸಿದ್ಧಗಂಗಾ ಕ್ಷೇತ್ರದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ದಿವ್ಯ ಸಮ್ಮುಖ : ಡಾ. ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳು, ಶ್ರೀ ಮಹಾಂತ ಸ್ವಾಮಿಗಳು, ಶ್ರೀಸಾಲೂರು ಬೃಹನ್ಮಠದ ಶ್ರೀಪಟ್ಟದ ಗುರುಸ್ವಾಮಿಗಳು, ಶ್ರೀಕುಂದೂರು ಮಠದ ಡಾ. ಶರತ್‌ಚಂದ್ರ ಸ್ವಾಮಿಗಳು, ದೇಗುಲಮಠದ ಕಿರಿಯ ಶ್ರೀಗಳಾದ ಶ್ರೀ ಚನ್ನಬಸವ ಸ್ವಾಮಿಗಳು, ಶ್ರೀ ಸಾಲೂರು ಬೃಹನ್ಮಠದ ಡಾ. ಶಾಂತಮಲ್ಲಿಕಾರ್ಜುನಸ್ವಾಮಿ, ಅಧ್ಯಕ್ಷತೆ: ಶಾಸಕ ಜಿ.ಟಿ. ದೇವೇಗೌಡ, ಕಾರ್ಯಕ್ರಮ ಉದ್ಘಾಟನೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶ್ರೀ ಮಹಾಂತೇಶ್ವರ ಮಂಗಳ ಮಂಟಪ ಉದ್ಘಾಟನೆ : ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಗ್ರಂಥ ಲೋಕಾರ್ಪಣೆ : ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ, ಶಾಸಕರಾದ ಟಿ.ಎಸ್. ಶ್ರೀವತ್ಸ, ಸಿ.ಎನ್. ಮಂಜೇಗೌಡ, ಸ್ಥಳ: ಶ್ರೀ ಮಹಾಂತೇಶ್ವರ ಮಠ, ಬರಡನಪುರ, ಜಯಪುರ.

ಉಸ್ತಾದ್ ಶ್ರೀನಿವಾಸಣ್ಣನವರ ಗರಡಿ ಮನೆ ಪುನರ್ ನಿರ್ಮಾಣ

'ಮೈಸೂರು ಮಿತ್ರ' ವರದಿಗೆ ಸ್ಪಂದಿಸಿದ ಶಾಸಕ ಕೆ.ಹರೀಶ್‌ಗೌಡ



ಲಷ್ಕರ್ ಮೊಹಲ್ಲಾದ ಇರ್ವಿನ್ ರಸ್ತೆ ಪಕ್ಕದ ಬೆಂಕಿ ನವಾಬ ರಸ್ತೆಯಲ್ಲಿರುವ 'ಉಸ್ತಾದ್ ಶ್ರೀನಿವಾಸಣ್ಣನವರ ಗರಡಿ ಮನೆಗೆ ಶಾಸಕ ಕೆ.ಹರೀಶ್‌ಗೌಡ ಶನಿವಾರ ಭೇಟಿ ನೀಡಿದರು.

ಮೈಸೂರು, ಡಿ.7(ಎಂಕೆ)– ಮೈಸೂರಿನಲ್ಲಿ ಸುರಿದ ಭಾರೀ ಮಳೆಗೆ ಕುಸಿದು ಬಿದ್ದಿದ್ದ ಲಷ್ಕರ್ ಮೊಹಲ್ಲಾದ ಇರ್ವಿನ್ ರಸ್ತೆ ಪಕ್ಕದ ಬೆಂಕಿ ನವಾಬ ರಸ್ತೆಯಲ್ಲಿರುವ 'ಉಸ್ತಾದ್ ಶ್ರೀನಿವಾಸಣ್ಣನವರ ಗರಡಿ ಮನೆಗೆ ಶನಿವಾರ ಭೇಟಿ ನೀಡಿದ ಶಾಸಕ ಕೆ.ಹರೀಶ್‌ಗೌಡ, ಪಾರಂಪರಿಕ ಶೈಲಿಯಲ್ಲೇ ಗರಡಿ ಮನೆಯನ್ನು ಪುನರ್ ನಿರ್ಮಿಸಿಕೊಡುವ ಭರವಸೆ ನೀಡಿದರು. ಡಿ.3 ರ 'ಮೈಸೂರು ಮಿತ್ರ'ನಲ್ಲಿ 'ಭಾರೀ ಮಳೆಗೆ ದ್ವಿಶತಮಾನದ ಅಂಚಿನಲ್ಲಿರುವ ಗರಡಿಮನೆಯ ಗೋಡೆ ಕುಸಿತ' ಶೀರ್ಷಿಕೆಯಡಿ ಪ್ರಕಟಗೊಂಡ ಸುದ್ದಿಯನ್ನು ಗಮನಿಸಿರುವ ಶಾಸಕರು, ಶನಿವಾರ ಖುದ್ದು ಸ್ಥಳಕ್ಕೆ ಭೇಟಿ ನೀಡಿದರು. ಸುಮಾರು 188 ವರ್ಷಗಳ ಪಾರಂಪರಿಕ 'ಉಸ್ತಾದ್ ಶ್ರೀನಿವಾಸಣ್ಣನವರ ಗರಡಿ ಮನೆ'ಯ ಗೋಡೆ ಕುಸಿದು ಬಿದ್ದಿರುವುದನ್ನು ಪರಿಶೀಲಿಸಿದ ಅವರು, ಪುರಾತನವಾದ ಶ್ರೀನಿವಾಸಣ್ಣನವರ ಗರಡಿ ಮನೆಯನ್ನು ನೂತನವಾಗಿ ಮತ್ತು ಪಾರಂಪರಿಕತೆಯನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ನೂತನ ಗರಡಿಯ ಮನೆಯನ್ನು ಮೂಲರೂಪದಂತೆ ನಿರ್ಮಿಸಿ ಕೊಡುವುದಾಗಿ ಭರವಸೆ ನೀಡಿದರು.

ಬಳಿಕ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅವರು, ಶಾಸಕರ ಹಾಗೂ ಪಾಲಿಕೆ ಅನುದಾನವನ್ನು ಬಳಕೆ ಮಾಡಿಕೊಂಡು ಗರಡಿ ಮನೆಯನ್ನು ಪುನರ್ ನಿರ್ಮಿಸಲಾಗುವುದು. ಅಂದಾಜು 50 ಲಕ್ಷ ರೂ. ಖರ್ಚಾಗುವ ಸಾಧ್ಯತೆ ಇದೆ. ಮೈಸೂರಿನಲ್ಲಿ ಹಲವಾರು ಗರಡಿ ಮನೆಗಳು ಶಿಥಿಲಗೊಂಡಿದ್ದು, ಮುಂದಿನ ದಿನಗಳಲ್ಲಿ ಚಾಮರಾಜ ಕ್ಷೇತ್ರ ವ್ಯಾಪ್ತಿಯಲ್ಲಿ ಶಿಥಿಲಗೊಂಡಿರುವ ಗರಡಿ ಮನೆಗಳನ್ನು ನವೀಕರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು. ನಗರಪಾಲಿಕೆ ಮಾಜಿ ಸದಸ್ಯ ಜೆ.ಗೋಪಿ, ಪಾಲಿಕೆ ಅಧಿಕಾರಿಗಳಾದ ಎಸಿ ಪ್ರತಿಭಾ, ಎಇಇ ವೆಂಕಟೇಶ್, ಗರಡಿ ಮನೆಯ ವೆಂಕಟೇಶ್, ಶ್ರೀನಿವಾಸ್, ಆನಂದ ಸೇರಿದಂತೆ ಸ್ಥಳೀಯ ನಿವಾಸಿಗಳು ಉಪಸ್ಥಿತರಿದ್ದರು.

ಶ್ರದ್ಧಾಂಜಲಿ



ಶ್ರೀಮತಿ ಸಾವಿತ್ರಮ್ಮ

(ನಿವೃತ್ತ ಪೊಲೀಸ್ ಅಧಿಕಾರಿ)

ಮರಣ: 07.12.2024, ದಹನ: 8.12.2024

ಸಮಯ: ಮಧ್ಯಾಹ್ನ 2.00ಕ್ಕೆ , ಸ್ಥಳ: ಹರಿಶ್ಚಂದ್ರಘಾಟ್, ಚಾಮುಂಡಿ ಬೆಟ್ಟದ ತಪ್ಪಲು, ಮೈಸೂರು

ಗೌರವಾನ್ವಿತ ಪ್ರಧಾನ ಹಿರಿಯ ಶ್ರೇಣಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಹುಣಸೂರು

FDP.No. 4/2021

ಅರ್ಜಿದಾರರು : ಯೂನಸ್ ಬೇಗ್

ವಿರುದ್ಧ

ಎದುರುದಾರರು : ಶಹನಜ್ ಬೇಗಂ ಮತ್ತು ಇತರರು

ಎದುರುದಾರರು ನಂ.2(ಬಿ) : ಅಮೀರ್ ಪಾಷ ಬಿನ್ ಲೇಟ್ ಇಕ್ಬಾಲ್ ವಯಸ್ಸು ಸುಮಾರು 50 ವರ್ಷ

ಎದುರುದಾರರು ನಂ.2(ಸಿ) : ಅಮ್ರೀನ್ ಬಿನ್ ಲೇಟ್ ಇಕ್ಬಾಲ್ ವಯಸ್ಸು ಸುಮಾರು 47 ವರ್ಷ 2(ಬಿ)& 2(ಸಿ) ಇಬ್ಬರ ವಾಸ: SCVDS ಟಾಕೀಸ್ ಎದುರು ಹಳೇ ಸೇತುವೆ. ಹುಣಸೂರು ಟೌನ್, ಮೈಸೂರು ಜಿಲ್ಲೆ

ಎದುರುದಾರರು ನಂ.12(ಎ) : ಜೇನತ್ ಕೋಂ ಲೇಟ್ ನಸೀರ್ ಅಹ್ಮದ್ ವಯಸ್ಸು ಸುಮಾರು 71 ವರ್ಷ

ಎದುರುದಾರರು ನಂ.12(ಬಿ) : ರೇಷ್ಮ ಬಿನ್ ಲೇಟ್ ನಸೀರ್ ಅಹ್ಮದ್ ವಯಸ್ಸು ಸುಮಾರು 50 ವರ್ಷ

ಎದುರುದಾರರು ನಂ.12(ಸಿ) : ಆಷ್ಮ ಬಿನ್ ಲೇಟ್ ನಸೀರ್ ಅಹ್ಮದ್ ವಯಸ್ಸು ಸುಮಾರು 47 ವರ್ಷ

ಎದುರುದಾರರು ನಂ.12(ಡಿ) : ಶಫೀರ್ ಬಿನ್ ಲೇಟ್ ನಸೀರ್ ಅಹ್ಮದ್ ವಯಸ್ಸು ಸುಮಾರು 45 ವರ್ಷ

ಎದುರುದಾರರು ನಂ.12(ಎಫ್): ಆಯಿಶಾ ಬಿನ್ ಲೇಟ್ ನಸೀರ್ ಅಹ್ಮದ್ ವಯಸ್ಸು ಸುಮಾರು 38 ವರ್ಷ ಎದುರುದಾರರು ನಂ.12(ಎ) ಯಿಂದ 12(ಡಿ)& 12(ಎಫ್) ರವರ ವಾಸ : ಕ್ರಿಶ್ಚಿಯನ್ ಕಾಲೋನಿ, ಸರ್ದಾರ್ ನಗರ, ದಸ್ತಗಿರ್ ಶಾದಿ ಮಹಲ್ ಹತ್ತಿರ, ಮೈಸೂರು

ಎದುರುದಾರರು ನಂ.20 : ಮುನಾವರ್ ಬಿನ್ ಅಬಿಲ ಬಾನು, ವಯಸ್ಸು ಸುಮಾರು 48 ವರ್ಷ. ವಾಸ: ಡೋರ್ ನಂ. 00208, ವಾರ್ಡ್ ನಂ.1, ಸರಸ್ವತಿಪುರಂ, ಅರಸೀಕೆರೆ ಟೌನ್, ಹಾಸನ ಜಿಲ್ಲೆ

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಎದುರುದಾರರ ನಂ.2(ಬಿ),2(ಸಿ), 12(ಎ) ಯಿಂದ 12(ಡಿ) & 12(ಎಫ್) ಮತ್ತು 20 ಆದ ನಿಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ದಾವೆಯ ಅರ್ಜಿದಾರರಾದ ಯೂನಸ್‌ಬೇಗ್ ಬಿನ್ ಎಂ. ಅನ್ವರ್‌ಬೇಗ್, ವಾಸ: 4777, ಮಿರ್ಜಾ ಮೊಹಲ್ಲಾ, ಹಾಸನ ಟೌನ್ ಇವರು ಹುಣಸೂರಿನ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ಸಹನಾಜ್ ಬೇಗ್ ಮತ್ತು ಇತರರ ವಿರುದ್ಧ ಭಾಗಾಂಶಕ್ಕಾಗಿ ಅಸಲು ದಾವೆ ಸಂಖ್ಯೆ 21/2013 ರ ರೀತ್ಯಾ ದಾವೆ ಸಲ್ಲಿಸಿದ್ದು ಸದರಿ ದಾವೆಯ ಅಂತಿಮ ಡಿಕ್ರಿಗಾಗಿ ಮೇಲ್ಕಂಡ ಅರ್ಜಿ ಸಲ್ಲಿಸಿದ್ದು ಮೇಲ್ಕಂಡ ಎದುರುದಾರರ ನಂ.2(ಬಿ), 2(ಸಿ), 12(ಎ) ಯಿಂದ 12(ಡಿ) & 12(ಎಫ್) ಮತ್ತು 20 ರವರಾದ ನಿಮಗೆ ಪತ್ರಿಕಾ ಪ್ರಕಟಣೆಯ ಮೂಲಕ ಸಮನ್ಸ್ ಜಾರಿ ಮಾಡಲು ನ್ಯಾಯಾಲಯದ ಆದೇಶವಾಗಿರುತ್ತದೆ. ಸದರಿ ದಾವೆಯು ದಿನಾಂಕ: 8.01.2025 ರಂದು ನಿಮ್ಮ ಹಾಜರಾತಿಗಾಗಿ ಬೆಳಿಗ್ಗೆ 11.00 ಘಂಟೆಗೆ ವಿಚಾರಣೆ ನಿಗದಿಯಾಗಿದ್ದು ಆ ದಿನದಂದು ನೀವು ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಲು ತಿಳಿಯಪಡಿಸಲಾಗಿದೆ. ತಪ್ಪಿದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ತಿಳಿಯುವುದು.

ನ್ಯಾಯಾಲಯದ ಅಪ್ಪಣೆ ಮೇರೆಗೆ

ಅರ್ಜಿದಾರರ ಪರ ವಕೀಲರು
ಸ್ಥಳ : ಹುಣಸೂರು, ದಿನಾಂಕ : 08/12/2024

Sd/- Civil Judge (Sr. Dn) &
JMFC Court, Hunsur

2ನೇ ವರ್ಷದ ಪುಣ್ಯಸ್ಮರಣೆ



ಎಸ್.ಮಹೇಶ್

08 ಡಿಸೆಂಬರ್ 2024

ದುಃಖತಪ್ತರು: ತಾಯಿ ಎಂ. ಜಯಮ್ಮನವರು

ಸಹೋದರರಾದ: ಎಸ್.ಶಂಕರ್, ಬಿಜೆಪಿ ಹಿರಿಯ ಮುಖಂಡರು, ಟಿ ನರಸೀಪುರ
ಎಸ್.ಅರುಣ್ ಕುಮಾರ್, ಹಿರಿಯ ವಕೀಲರು
ಕುಟುಂಬ ವರ್ಗದವರು

ನಮ್ಮನ್ನೆಲ್ಲ ಬಿಟ್ಟು ಅಗಲಿದ ಓ ಚೇತನವೇ
ನೀ ಎಂದೆಂದಿಗೂ ನಮ್ಮೊಂದಿಗಿರುವೆ.

PUBLIC NOTICE

CLARIFICATION ISSUED BY

SRI N MANJUNATH

'Karthika Developers'

No.251, New No.8, 46th Cross, Jayanagar 8th Block, Bangalore – 560 078

IN RESPECT OF THE FALSE, FRIVILOUS AND BASELESS ALLEGATIONS MADE AGAINST HIM IN THE ELECTRONIC MEDIA

I, am issuing this clarification in view of the false, frivolous and baseless allegations made by certain individuals, which is aired on electronic media repeatedly, to the effect that I have been allotted sites at the rate of Rs.3000/- per site by the Mysore Urban Development Authority at Mysore and that the stamp duty payable as per the Stamps and Registration Acts has not been paid to the Department of Registrations, thereby causing loss to the Government exchequer and further to the same, I have made wrongful gains in connivance with the officials of the respective departments.

I would like to state that I am builder and developer by profession having a standing in the society and during the course of my business / developmental activities, I had developed a residential layout at Dattagalli Village, Kasaba Hobli, Mysore Taluk, after taking all necessary approvals, by entering into certain contractual agreements, with the land lords of the said land. The said lands were subject matter of acquisition proceedings which ultimately culminated in favour of the land lords. During the pendency of the acquisition proceedings, the Mysore Urban Development Authority had utilized certain extent of the land for public purpose, like laying drains and roads, without paying any compensation nor the leave of the court. In addition to the same, at the instance off Mysore Urban Development Authority, I had executed certain civil works for the completion of the incomplete storm water drain running through my layout. Due to all the above-mentioned reasons, the achievable sital area as per the norms of the Mysore Urban Development Authority could not be achieved by me.

After the development of the said lands, I made a representation to Mysore Urban Development Authority, for compensating the loss of the lands utilized by them and pay compensation as per the new Acquisition Act together with the cost of the construction of the civil works executed by me. When my representation was not considered I have approached the courts of law for the redressal of our grievances and the court has ordered for the allotment of the sites in lieu of the lands utilized by them and the cost of construction payable by them. It is on this back ground that the sites came to be allotted to me, by the Mysore Urban Development Authority. It is pertinent here to state that the loss of lands was at Dattagalli Village and the sites have been allotted in the Vijayanagar Area. The sital cost prevailing at both the areas are more or less the same.

In so far as, the site having been sold for Rs.3,000/-, I would like to state that the said sale consideration mentioned in the sale deed is only a symbolic price charged by Mysore Urban Development Authority as the same has been allotted in lieu of the land utilized by the Mysore Urban Development Authority without paying any compensation and the exempted stamp duty as applicable has been paid in pursuance of the same as per the prevailing act. Further, it is true that several sites have been registered by the Mysore Urban Development Authority, on a particular day in my name. However, I would also bring it to the knowledge of everyone, that the litigation in respect of the said lands were fought ever since 2013 and nothing has happened overnight as claimed by certain individual.

Hence, I would like state on record that all my claims are supported by documentary proof and that there has not been any irregularities in respect of the allotments of sites made to me from the Mysore Urban Development Authority and all the officials have acted and exercised their powers within the frame work of law, in the above-mentioned matter and further call upon people not to indulge in making any false, baseless and frivolous allegations / acquisitions, with an whole idea of tarnishing my image and reputation, without knowing the sum and substance or the details of the matter, just to gain popularity and mislead the General Public at large.

Mysore
Dated 07.12.2024

N.MANJUNATH
'Karthika Developers'

Note: I had earlier taken out Public Notice on two other occasions clarifying the same.

ನಕ್ಕರೆ ಅದೇ ಸ್ವರ್ಗ

ಟೀಚರ್ : ನಿನ್ನ ಹೆಸರೇನು?
ಸ್ಟೂಡೆಂಟ್ : ಚರಂಡಿ
ಟೀಚರ್ : ಏಯ್ ಈಡಿಯೆಟ್ ಹೆಸರು ಕೇಳಿದರೆ ನಾಟಕ ಆಡ್ತೀಯಾ
ಸ್ಟೂಡೆಂಟ್ : ಎಷ್ಟು ಸಾರಿ ಕೇಳಿದರೂ ಅಷ್ಟೆ.
ನನ್ನ ಹೆಸರು ಚರಂಡಿ, ಚರಂಡಿ. Charan D.

ಮೈಸೂರು ಮಿತ್ರ

ಭಾನುವಾರ, 8 ಡಿಸೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಪ್ರತಿಯೊಬ್ಬ ಮಾನವನಲ್ಲೂ ಸುಪ್ತವಾಗಿರುವ ದೈವೀ ಶಕ್ತಿಯನ್ನು ಪ್ರಕಟಗೊಳಿಸಿ ಪ್ರಕಾಶಿಸುವಂತೆ ಮಾಡುವುದೇ ನಿಜವಾದ ಧರ್ಮ. –ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಒಬ್ಬರ ಕೂಳು ಇನ್ನೊಬ್ಬರ ಕುತ್ತು.

ನಿಮ್ಮ ಪತ್ರಗಳು

ಖಾತೆ ಅರ್ಜಿಗಾಗಿ ಸಾರ್ವಜನಿಕರ ಅಲೆದಾಟ–ಪರದಾಟ

ಮಾನ್ಯರೆ,

ಮೈಸೂರು ಮಹಾನಗರ ಪಾಲಿಕೆಯ ಅವಾಂತರಗಳು ದಿನಕ್ಕೊಂದು ರೀತಿಯಲ್ಲಿ ವ್ಯಕ್ತವಾಗುತ್ತಿದೆ. ನಗರ ಪಾಲಿಕೆಯ ಸಿಬ್ಬಂದಿಗಳು ಜಿಡ್ಡುಗಟ್ಟಿ ಹೋಗಿದ್ದಾರೆ. ಸಾಮಾನ್ಯವಾಗಿ ಸ್ಥಿರ ಸ್ವತ್ತುಗಳಿಗೆ ಸಂಬಂಧಪಟ್ಟವರು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಳ್ಳುವುದು ಕಾನೂನು ಸಮ್ಮತವಾಗಿರುತ್ತದೆ. ಸ್ವತ್ತನ್ನು ಕ್ರಯಕ್ಕೆ ಪಡೆದುಕೊಂಡವರು ಮತ್ತು ಕುಟುಂಬದ ವಾರಸುದಾರರು ಮರಣ ಹೊಂದಿದರೆ ಖಾತೆ ಮಾಡಿಸಿಕೊಳ್ಳಲು ಅರ್ಜಿ ಸಲ್ಲಿಸಿದರೆ 45 ದಿನಗಳ (ರಜಾ ಹೊರತುಪಡಿಸಿ) ಕಾಲ ಖಾತೆ ವರ್ಗಾವಣೆಯಾಗುವುದಿಲ್ಲ ಎಂದು ಹೇಳಿ ಕಳುಹಿಸುವುದು ಸರ್ವೆ ಸಾಮಾನ್ಯವಾಗಿದೆ. 45 ದಿನಗಳ ನಂತರ ಒಂದೆರಡು ವರ್ಷಗಳವರೆಗೆ ಕೂಡಾ ವರ್ಗಾವಣೆಗೆ ಅಲೆಯಬೇಕಾದ ಪರಿಸ್ಥಿತಿ ಇದೆ. ಖಾತೆ ವರ್ಗಾಯಿಸಿಕೊಳ್ಳಲು ಒಂದೆರಡು ವರ್ಷ ಕಾಯುವುದರ ಜೊತೆಗೆ ಖಾತೆಯ ಅರ್ಜಿ ಹುಡುಕಿಕೊಂಡು ಮೈಸೂರು ನಗರದಲ್ಲಿರುವ 09 ವಲಯ ಕಚೇರಿ ಮತ್ತು ಮುಖ್ಯ ಕಚೇರಿಗಳಿಗೆ ಅಲೆಯಬೇಕು. ಇತ್ತೀಚೆಗೆ ಸಾಮಾನ್ಯವಾಗಿ ಯಾವುದೇ ವಲಯ ಕಚೇರಿಗೂ ಹೋದರೆ ಖಾತೆ ಫಾರಂ ಸಿಗುವುದಿಲ್ಲ. ಖಾತೆ ಫಾರಂಗಾಗಿ ಇಷ್ಟು ಬೇಡಿಕೆ ಸೃಷ್ಟಿಸಿರುವುದು ಅರ್ಥವಾಗುತ್ತಿಲ್ಲ. ಖಾತಾ ವರ್ಗಾವಣೆ ಅರ್ಜಿಯನ್ನು ಮುಕ್ತ ಮಾರುಕಟ್ಟೆಯಲ್ಲಿ ಬಿಡಲಿ. ಇಲ್ಲವಾದಲ್ಲಿ ಬಿಳಿ ಹಾಳೆಯಲ್ಲಿ ಅರ್ಜಿ ತೆಗೆದುಕೊಳ್ಳಲಿ. ಖಾತೆ ಅರ್ಜಿಗಾಗಿ ಇಷ್ಟೊಂದು ಬೇಡಿಕೆ ಸೃಷ್ಟಿಸಿದರೆ ಮುಂದೊಂದು ದಿನ ಇದು ಕಳ್ಳಸಂತೆಯಲ್ಲಿ ಮಾರಾಟವಾಗುವುದರಲ್ಲಿ ಸಂಶಯವಿಲ್ಲ. ಸಾರ್ವಜನಿಕರು ಖಾತೆ ಅರ್ಜಿಗಾಗಿ ಯಾಕೆ ಅಲೆಯಬೇಕು, ಪರದಾಡಬೇಕು. ಮಹಾನಗರ ಪಾಲಿಕೆಯವರು ಖಾತೆ ವರ್ಗಾವಣಾ ಅರ್ಜಿಗಾಗಿ ಸಾರ್ವಜನಿಕರ ಅಲೆದಾಟ, ಪರದಾಟ ನಿಲ್ಲಿಸಿ ಅರ್ಜಿದಾರರಿಗೆ ಖಾತ ಫಾರಂ ಸುಲಭವಾಗಿ ಸಿಗುವಂತೆ ಮಾಡಲಿ.

–ಎಂ.ಎನ್. ಧರಣಿ ವೆಂಕಟೇಶ, ಸ್ಥಿರಾಸ್ತಿಗಳ ಜಿಲ್ಲಾ ಪತ್ರ ಬರಹಗಾರರು, ಮೈಸೂರು.

ಸರ್ಕಾರಿ ಆಸ್ಪತ್ರೆಗಳ ಮೇಲೆ ಜನರ ವಿಶ್ವಾಸ ಕ್ಷೀಣ

ಮಾನ್ಯರೆ,

ಕಳೆದ ಕೆಲ ದಿನಗಳಿಂದ ಬಳ್ಳಾರಿ ಸರ್ಕಾರಿ ಆಸ್ಪತ್ರೆಯಲ್ಲಿ ಬಾಣಂತಿಯರ ಸರಣಿ ಸಾವಿನ ಹಿಂದೆ ಆರೋಗ್ಯ ಇಲಾಖೆಯ ನಿರ್ಲಕ್ಷ್ಯತೆ ಎದ್ದು ಕಾಣುತ್ತಿದೆ. ಕಳೆದ ವಾರವಷ್ಟೇ ನಾಲ್ಕಕ್ಕೂ ಹೆಚ್ಚು ಬಾಣಂತಿಯರು ಮೃತಪಟ್ಟ ನಂತರವೂ ಎಚ್ಚೆತ್ತುಕೊಳ್ಳದ ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದಂತೆ ಕಂಡುಬರುತ್ತಿಲ್ಲ.

ಈ ಸರಣಿ ಸಾವಿಗೆ ಔಷಧಿಗಳ ಅಡ್ಡ ಪರಿಣಾಮ ಎಂದು ತಜ್ಞರು ವರದಿ ಕೊಟ್ಟರೂ ಪರ್ಯಾಯ ಕ್ರಮ ಅನುಸರಿಸದಿರುವುದು ದುರಂತಕ್ಕೆ ಕಾರಣವೆನ್ನಬಹುದು. ಈ ಕಾರಣದಿಂದಲೇ ಸರ್ಕಾರಿ ಆಸ್ಪತ್ರೆಗಳ ಮೇಲೆ ಜನರ ವಿಶ್ವಾಸ ಕ್ಷೀಣಿಸುತ್ತಿದೆ. ಆರೋಗ್ಯ ಸಚಿವರು ವಿರೋಧ ಪಕ್ಷಗಳ ಟೀಕೆಗಳಿಗೆ ತಮ್ಮ ಬಹುಪಾಲು ಸಮಯವನ್ನು ವ್ಯರ್ಥ ಮಾಡುತ್ತಿದ್ದು ತಮ್ಮ ಇಲಾಖೆಗೆ ಸಂಬಂಧಪಟ್ಟಂತೆ ನಡೆಯುತ್ತಿರುವ ಇಂಥ ದುರ್ಘಟನೆಗಳ ಬಗ್ಗೆ ಗಮನ ಹರಿಸಲಿ.

– ಹೆಚ್.ಆರ್.ಪ್ರಸಾದ್, ವಿವೇಕಾನಂದ ನಗರ, ಮೈಸೂರು.

ವಿದ್ಯುತ್ ದೀಪ ಬೆಳಗಿಸಿ

ಮಾನ್ಯರೆ,

ಮೈಸೂರು–ಟಿ. ನರಸೀಪುರ ರಸ್ತೆ, ಆಲನಹಳ್ಳಿ ರಿಂಗ್ ರೋಡ್ ಜಂಕ್ಷನ್‌ನಿಂದ ಚಿಕ್ಕಹಳ್ಳಿಯವರೆಗೆ ರಸ್ತೆಯಲ್ಲಿ ವಿದ್ಯುತ್ ಕಂಬಗಳಿದ್ದು ಬಲ್ಬ್‌ಗಳು ಸಹ ಇವೆ. ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಈ ರಸ್ತೆಯಲ್ಲಿ ರಾತ್ರಿ ವೇಳೆ ವಿದ್ಯುತ್ ದೀಪಗಳಿಲ್ಲದೆ ವಾಹನಗಳ ಸುಗಮ ಸಂಚಾರಕ್ಕೆ ತುಂಬಾ ತೊಂದರೆಯಾಗಿದೆ.

ಅನೇಕ ಸಂದರ್ಭಗಳಲ್ಲಿ ಅಪಘಾತಗಳು ಉಂಟಾಗಿವೆ. ಹೀಗಾಗಿ ಎನ್‌ಹೆಚ್ ರಸ್ತೆಯಲ್ಲಿ ರಾತ್ರಿ ವೇಳೆ ಸುಗಮ ಸಂಚಾರಕ್ಕಾಗಿ ಕೂಡಲೇ ವಿದ್ಯುತ್ ದೀಪ ಬೆಳಗುವಂತೆ ಮಾಡಲು ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಮನವಿ.

– ನಂಜುಂಡಸ್ವಾಮಿ, ನಿವೃತ್ತ ಅಧ್ಯಾಪಕರು, ಪೊಲೀಸ್ ಬಡಾವಣೆ 2ನೇ ಹಂತ, ಮೈಸೂರು.

ಬಾಂಗ್ಲಾದ ಹಿಂದೂ ವಿರೋಧಿ ನೀತಿ ಖಂಡನೀಯ

ಮಾನ್ಯರೆ,

ನೆರೆಯ ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ಹಿಂಸಾಚಾರಗಳು ತೀವ್ರ ಖಂಡನೀಯವಾಗಿದೆ. ಕೆನಡಾ, ಅಫ್ಘಾನಿಸ್ತಾನ, ಪಾಕಿಸ್ತಾನಗಳಲ್ಲಿಯೂ ಹಿಂದೂ ವಿರೋಧಿ ಧೋರಣೆ ಹೆಚ್ಚುತ್ತಿದೆ. ಬಾಂಗ್ಲಾದೇಶಕ್ಕೆ ಸ್ವಾತಂತ್ರ್ಯ ದೊರಕಿಸಿಕೊಟ್ಟದ್ದು ಭಾರತ ಎಂಬ ಸತ್ಯವನ್ನು ಆ ದೇಶ ಮರೆತಂತಿದೆ. ಹಿಂದೂಗಳ ಮೇಲಿನ ದಮನಕಾರಕ ನೀತಿ ಹಾಗೂ ಭಾರತ ವಿರೋಧಿ ಧೋರಣೆ ತಳೆದಿರುವ ಬಾಂಗ್ಲಾದೇಶ ಇತರ ಹಿಂದೂ ವಿರೋಧಿ ದೇಶಗಳಾದ ಪಾಕಿಸ್ತಾನ, ಅಫ್ಘಾನಿಸ್ತಾನ ಮುಂತಾದ ದೇಶಗಳೊಂದಿಗೆ ಸೇರಿಕೊಂಡಿರುವುದು ತೀವ್ರ ಖಂಡನೀಯವಾಗಿದೆ. ಬಾಂಗ್ಲಾದೇಶದಲ್ಲಿ ಹಿಂದೂ ನಾಯಕರ ಮೇಲಿನ ದೌರ್ಜನ್ಯ ಹೆಚ್ಚುತ್ತಲೇ ಇದೆ.

ಆ ದೇಶದ ಹಿಂದೂ ಮುಖಂಡ ಚಿನ್ಮಯಿ ಕೃಷ್ಣದಾಸ್ ಅವರನ್ನು ದೇಶದ್ರೋಹ ಆರೋಪದ ಮೇಲೆ ಬಂಧಿಸಲಾಗಿತ್ತು. ಆದರೆ ಅವರು ಸಲ್ಲಿಸಿದ್ದ ಜಾಮೀನು ಅರ್ಜಿಯವ ಪರ ವಾದಿಸಲು ಯಾವುದೇ ವಕೀಲರು ಮುಂದೆ ಬಾರದಿರುವುದು, ಆ ದೇಶದ ಹಿಂದೂ ವಿರೋಧಿ ಧೋರಣೆಯ ಪ್ರತೀಕವಾಗಿದೆ. ಬಾಂಗ್ಲಾದೇಶದ ತಾತ್ಕಾಲಿಕ ಸರ್ಕಾರ ಹಿಂದೂಗಳಿಗೆ ರಕ್ಷಣೆ ನೀಡುವುದರ ಬಗ್ಗೆ ಈಗಲಾದರೂ ತುರ್ತು ಕ್ರಮ ಕೈಗೊಳ್ಳಬೇಕು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಮಹಿಳಾ ಪ್ರಯಾಣಿಕರಿಗಾಗಿ ಸಾರಿಗೆ ಬಸ್ ಇತರ ನಗರ, ಪಟ್ಟಣಗಳಿಗೂ ವಿಸ್ತರಿಸಿ

ಮಾನ್ಯರೆ,

ಬೆಂಗಳೂರಿನ ಸಾರ್ವಜನಿಕ ನಗರ ಸಾರಿಗೆಯು (ಬಿಎಂಟಿಸಿ) ಕೆಲವು ಬಸ್ಸುಗಳನ್ನು ಮಹಿಳಾ ಪ್ರಯಾಣಿಕರಿಗೆಂದೇ ಮೀಸಲು ಮಾಡಿ ಓಡಿಸುತ್ತಿದೆ. ಹೇಗೂ ಹೆಚ್ಚಿನ ಮಹಿಳೆಯರಿಗೆ ಪ್ರಯಾಣವನ್ನು ಶುಲ್ಕರಹಿತ ಎಂದು ಮಾಡಿರುವುದರಿಂದ, ಕೆಲವೇ ಮಹಿಳೆಯರಿಗೆ 'ಟಿಕೆಟ್' ನೀಡಬೇಕಾಗುತ್ತದೆ. ಇದರಿಂದ, ನಿರ್ವಾಹಕರ ಕೆಲಸ ಸ್ವಲ್ಪ ಸುಲಭಗೊಂಡು, ಪ್ರಯಾಣಾವಧಿಯು ಕಡಿಮೆಯಾಗುವುದು. ಬಹುಶಃ, ಇದರಿಂದಾಗಿ ಹೆಚ್ಚು ಟ್ರಿಪ್ಪುಗಳನ್ನು ತೊಡಗಿಸಲು ಸಾಧ್ಯ. ಮತ್ತು ಉಳಿದ ಬಸ್ಸುಗಳ ಮೇಲಿನ ಒತ್ತಡ ಕಡಿಮೆಯಾಗುತ್ತದೆ. ಇದೇ ರೀತಿಯ ಮಹಿಳಾ–ಮೀಸಲು ಬಸ್ಸುಗಳನ್ನು ನಗರ ಸಾರಿಗೆ ವಿಭಾಗವು ರಾಜ್ಯದ ಇನ್ನಿತರ ಮುಖ್ಯ ನಗರ, ಪಟ್ಟಣಗಳಲ್ಲಿಯೂ ಮೊದಲು ಮಾಡಿ ನೋಡಬಹುದು. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಿಸುವರೆಂಬ ಆಶಯ.

–ಡಿ.ವಿ.ಎಂ. ಪ್ರಕಾಶ್, ಗೋಕುಲ ರಸ್ತೆ, ಮೈಸೂರು.



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಕರ್ಮಫಲ ಸಾರುವ ಎರಡು ನೀತಿ ಕಥೆ!

1. ಒಂದೂರಿನಲ್ಲಿ ಒಬ್ಬ ಪ್ರಜಾಪಾಲಕನಾದ ರಾಜನಿದ್ದ. ಅವನಿಗೆ ಮೂರು ಜನ ಮಂತ್ರಿಗಳು. ಈ ಮೂರು ಜನ ಮಂತ್ರಿಗಳಲ್ಲಿ, ಒಳ್ಳೆಯವರೂ ಮತ್ತು ಕುತಂತ್ರಿಗಳೂ ಇದ್ದರು. ಆದರೆ ರಾಜನ ಎದುರಲ್ಲಿ ಸಭ್ಯನಂತೆ ವರ್ತಿಸಿ, ಒಳಗೊಳಗೆ ರಾಜನ ಆಜ್ಞೆಯನ್ನು ಅಲಕ್ಷಿಸುತ್ತಿದ್ದರು. ಇದರಿಂದ ಪ್ರಾಮಾಣಿಕನಿಗೆ ಬೆಲೆ ಇಲ್ಲವಾಗುತ್ತಿತ್ತು.

ಒಂದುದಿನ ರಾಜ ತನ್ನ ಮೂವರು ಮಂತ್ರಿಗಳನ್ನು ಕರೆಯುತ್ತಾನೆ. ಆ ಮೂರು ಜನರಿಗೆ ಒಂದೊಂದು ಗೋಣಿಚೀಲವನ್ನು ಕೊಟ್ಟು, ಕಾಡಿಗೆ ಹೋಗಿ, ನಾಳೆ ಸಂಜೆಯೊಳಗೆ ಕಾಡಿನಲ್ಲಿ ಸಿಗುವ ಅತ್ಯುತ್ತಮವಾದ ಹಣ್ಣುಗಳನ್ನು ಆಯ್ದು, ತುಂಬಿಕೊಂಡು ಬರುವಂತೆ ಆಜ್ಞೆ ಮಾಡಿದ. ಮೂರೂ ಮಂತ್ರಿಗಳಲ್ಲಿ ಒಬ್ಬನು ರಾಜನ ಆಜ್ಞೆಯನ್ನು ನಿಯತ್ತಿನಿಂದ ಪಾಲಿಸಿದ. ಕಾಡು ಸುತ್ತಿ ಒಳ್ಳೆಯ ಮತ್ತು ತಿನ್ನಲು ಯೋಗ್ಯವಾದ ಹಣ್ಣುಗಳನ್ನು ಆಯ್ದು ತುಂಬಿಕೊಳ್ಳುತ್ತಾನೆ. ಎರಡನೆಯವನು ಅಯ್ಯೋ ರಾಜರು ಒಳಗೆಲ್ಲಿ ನೋಡುತ್ತಾರೆ ಎಂದು ಅಂದುಕೊಂಡು ಕೆಳಗೆ ಕೊಳೆತ ಹಣ್ಣುಗಳನ್ನು ಇಟ್ಟು, ಮೇಲೆ ಸ್ವಲ್ಪ ಒಳ್ಳೆಯ ಹಣ್ಣುಗಳನ್ನು ತುಂಬಿಸಿ ಕೊಡುತ್ತಾನೆ.

ಇನ್ನು ಮೂರನೆಯವನು; ಅಯ್ಯೋ, ರಾಜ ನೋಡುವುದೇ ಇಲ್ಲ. ಕಾಡು ಸುತ್ತಿ ಯಾರು ಹಣ್ಣುಗಳನ್ನು ತರುತ್ತಾರೆ ಎಂದು ಗೋಣಿಚೀಲದಲ್ಲಿ ತರಗೆಲೆ ಮತ್ತು ಕಸಕಡ್ಡಿಗಳನ್ನು ತುಂಬಿಕೊಂಡು ಹೋಗುತ್ತಾನೆ. ಮಾರನೆಯ ದಿನ ಮಂತ್ರಿಗಳು ಗೋಣಿಯ ಮೂಟೆಯನ್ನು ಅರಸನ ಮುಂದೆ ಇಡುತ್ತಾರೆ. ಅರಸ ಅದನ್ನು ಪರೀಕ್ಷಿಸುವುದಿಲ್ಲ. ಬದಲಾಗಿ ಭಟರನ್ನು ಕರೆದು 'ಈ ಮೂರು ಜನರನ್ನು ಕಾರಾಗೃಹಕ್ಕೆ ಅಟ್ಟಿ, ಅವರವರು ತಂದ ಹಣ್ಣಿನ ಮೂಟೆ ಅವರವರ ಬಳಿ ಇರಲಿ, ಒಂದು ತಿಂಗಳ ಕಾಲ ಅವರಿಗೆ ತಿನ್ನಲು ಏನನ್ನೂ ಕೊಡಬೇಡಿ' ಎಂದು ಆಜ್ಞೆ ಮಾಡಿದ. ಒಂದು ತಿಂಗಳ ನಂತರ ಸೆರೆಮನೆಯ ಬಾಗಿಲು ತೆರೆದಾಗ, ಪ್ರಾಮಾಣಿಕನಾಗಿ ಉತ್ತಮವಾದ ಹಣ್ಣುಗಳನ್ನು ತಂದಿದ್ದ ಮಂತ್ರಿಯು ಆರೋಗ್ಯವಂತನಾಗಿ ಹೊರಬರುತ್ತಾನೆ. ಕೊಳೆತ ಹಣ್ಣುಗಳನ್ನು ಪೇರಿಸಿಟ್ಟ ಮಂತ್ರಿ ರೋಗಗ್ರಸ್ತನಾಗಿದ್ದ. ಇನ್ನು ತಿನ್ನಲು ಯೋಗ್ಯವಲ್ಲದ ವಸ್ತುಗಳನ್ನು ತಂದ ಕೊನೆಯ ಮಂತ್ರಿಯು ಕೊನೆಯುಸಿರೆಳೆದಿದ್ದ.

ನೀತಿ: ಇದೆ ಕರ್ಮಫಲ. ಉತ್ತಮವಾದ ಕೆಲಸಕ್ಕೆ ಉತ್ತಮ ಫಲ, ಕೆಟ್ಟ ಕೆಲಸಕ್ಕೆ ಕೆಟ್ಟ ಪ್ರತಿಫಲ

2. ಸತ್ಯಜಿತ್ ಎಂಬ ಬ್ರಾಹ್ಮಣ. ಆತ ಸದಾಚಾರ ಸಂಪನ್ನ. ಅಲ್ಲದೆ ಆತ ಗಂಗೆಯ ಭಕ್ತ. ಎಲ್ಲಿ ಯಾವ ತೀರ್ಥಕ್ಷೇತ್ರಕ್ಕೆ ಹೋದರೂ, ಯಾವ ನದಿಗಳು ಕಂಡರೂ ಗಂಗಾದೇವಿಯ ಸ್ಮರಣೆ ಮಾಡುತ್ತಿದ್ದ. ಯಾವಾಗಲೂ ತೀರ್ಥಯಾತ್ರೆ ಮಾಡುತ್ತಿದ್ದ.



ಒಮ್ಮೆ ಗಂಗಾಸ್ನಾನ ಮಾಡಬೇಕೆಂಬ ಹಂಬಲದಿಂದ ಹೊರಟ. ಕುರುಕ್ಷೇತ್ರ ಎಂಬ ಊರಿಗೆ ಬಂದ. ದಣಿದ ಆತನಿಗೆ ಯಾತ್ರಿಕರಿಗೆ ಊಟ ಹಾಕುವ ಯಾವುದಾದರೂ ಕುಟುಂಬದ ಬಗ್ಗೆ ಅಲ್ಲಿ ಇದ್ದ ಜನರನ್ನು ವಿಚಾರಿಸಿದ. ಆ ಗ್ರಾಮದ ಜನರು ಸತ್ಯಕೇತು ಎಂಬ ಬ್ರಾಹ್ಮಣ ನಿತ್ಯ ಅನ್ನದಾನ ಮಾಡುತ್ತಿದ್ದಾನೆ. ಅವನಲ್ಲಿಗೆ ಹೋಗಿ ನೀವು ನಿಮ್ಮ ಹಸಿವಿನ ಬಾಧೆಯನ್ನು ನಿವಾರಣೆ ಮಾಡಿಕೊಳ್ಳಬಹುದೆಂದು ಹೇಳಿದರು.

ಸತ್ಯಜಿತ್ ಅವನ ಮನೆಗೆ ಬರುತ್ತಾನೆ. ಬಂದಂತಹ ಅತಿಥಿಯನ್ನು ನೋಡಿ ಸತ್ಯಕೇತು ಬಹು ಸಂತಸಗೊಂಡು ನಿಮ್ಮಂತಹ ಮಹಾತ್ಮರ, ಭಗವಂತನ ಭಕ್ತರ ಆಗಮನ ನನ್ನ ಜನ್ಮಾಂತರದ ಪುಣ್ಯದ ಫಲ. ನಮ್ಮ ಪಿತೃದೇವತೆಗಳು ಇಂದು ಸಂತೃಪ್ತಿ ಹೊಂದುವರು. ಅಲ್ಲದೆ ಅವರ ಅಂತರ್ಯಾಮಿಯಾದ ಶ್ರೀ ಹರಿಯು ಸಂಪ್ರಸನ್ನನಾಗುವನು. ಏಳಿ, ತಮ್ಮ ಸ್ನಾನ ಆಹ್ನೀಕಗಳನ್ನು ಮುಗಿಸಿಕೊಂಡು ಭೋಜನ ಮಾಡಲು ಸಿದ್ಧರಾಗಿ ಎಂದು ಕೈಮುಗಿದು ವಿಜ್ಞಾಪಿಸಿದ.

ಸತ್ಯಜಿತನು ಅವನ ಮಾತಿಗೆ ಸಂತಸಗೊಂಡು ಅಯ್ಯಾ, ಸತ್ಯಕೇತು, ಎಲ್ಲಾ ಕಡೆಯಿಂದ ಹಾರಿಬರುವ ಪಕ್ಷಿಗಳಿಗೆ ವೃಕ್ಷಗಳು ಹೇಗೆ ಆಶ್ರಯ ನೀಡುವುದೋ ಹಾಗೆ ನೀನು ಬರುವಂತಹ ಯಾತ್ರಿಕರಿಗೆ ಆಶ್ರಯದಾತನಾಗಿದ್ದಿ. ನಿನ್ನಂತಹ ಇನ್ನೊಬ್ಬ ಗೃಹಸ್ಥ ಇಲ್ಲ ಎನ್ನುತ್ತ ನೀನು ಗಂಗಾಸ್ನಾನ ಮಾಡಿರುವೆಯಾ ಎಂದು ಕೇಳಿದ. ಅದಕ್ಕೆ ಸತ್ಯಕೇತು ಕ್ಷಮಿಸಿ, ನಾನು ಇದುವರೆಗೆ ಗಂಗಾಸ್ನಾನ ಮಾಡಿಲ್ಲ. ನಾನು ಗಂಗಾಸ್ನಾನ ಮಾಡಲು ಹೊರಟರೆ ಇಲ್ಲಿ ನಿತ್ಯ ಬರುವ ಯಾತ್ರಿಕರಿಗೆ ತೊಂದರೆ ಆಗುತ್ತದೆ. ಮತ್ತು ನನ್ನ ಅನ್ನದಾನ ಮಾಡುವ ಸಂಕಲ್ಪ ನಿಂತು ಹೋಗುತ್ತದೆ. ಹಾಗಾಗಿ ಹೋಗಿಲ್ಲ ಎಂದು ಉತ್ತರಿಸಿದ. ಈ ಮಾತನ್ನು ಕೇಳಿ ಸತ್ಯಜಿತ ಛೇ! ಗಂಗಾಸ್ನಾನ ಮಾಡದ ನಿನ್ನ ಮುಖದರ್ಶನ, ನಿನ್ನ ಮನೆಯ ಭೋಜನ ಆತಿಥ್ಯ ಎಲ್ಲಾ ನಿಷಿದ್ಧ. ತಿಳಿಯದೆ ನಿನ್ನ ಮನೆಗೆ ಬಂದೆ ಎಂದು ಅವನ ಮನೆಯ ಆತಿಥ್ಯ ನಿರಾಕರಿಸಿ, ಅವನನ್ನ ನಿಂದಿಸಿ ಹಾಗೇ ಹೊರಟು ಹೋದ.

ಅಲ್ಲಿಂದ ಗಂಗಾನದಿಯ ದಡಕ್ಕೆ ಬಂದು ನೋಡಿದ, ಸುತ್ತಲೂ ಬರಿ ಮರಳು. ಒಂದು ಹನಿ ಸಹ ಗಂಗಾನದಿಯಲ್ಲಿ ಕಾಣುತ್ತಿಲ್ಲ. ಅಮ್ಮಾ, ಗಂಗಾಮಾತೆ! ನಾನು ಯಾವ ಅಪರಾಧ ಮಾಡಿಲ್ಲ. ಯಾಕೆ ನಿನ್ನ ದರುಶನ, ಸ್ನಾನ ನನಗೆ ಇಲ್ಲ. ದಯವಿಟ್ಟು ಕೃಪೆ ಮಾಡು ಎಂದು ಮರಳಲ್ಲಿ ಬಿದ್ದು ಹೊರಳಾಡಿದ, ಗೋಳಾಡಿದ. ಆಗ ತಾಯಿ ಗಂಗೆ ಎಲೈ ಮೂಢ! ಸತ್ಯಕೇತುವಿನ ಮನೆಯ ಅನ್ನವನ್ನು ತಿರಸ್ಕರಿಸಿ, ಅವನನ್ನು ನಿಂದಿಸಿ ಬಂದ ಕಾರಣದಿಂದ ನಿನಗೆ ನಾನು ಒಲಿಯುವುದಿಲ್ಲ ಎಂದಳು. ಅನ್ನದಾನಕ್ಕೆ ಸಮನಾದ ದಾನ ಇನ್ನೊಂದಿಲ್ಲ. ನಿತ್ಯ ಅನ್ನದಾನ ಮಾಡುತ್ತಾ, ಯಾತ್ರೆ ಮಾಡಿದರೆ ಚ್ಯುತಿ ಆಗುವುದೆಂದು ಗಂಗಾಸ್ನಾನ ಮಾಡದೇ ಮನೆಯಲ್ಲಿ ಬಂದಂತಹ ಅತಿಥಿಗಳ ಸತ್ಕಾರ ಮಾಡಿ ಅವರ ಹಸಿವು ನೀಗಿ, ಅವರನ್ನು ಸಂತಸಪಡಿಸುವ ಸತ್ಯಕೇತು ಎಂಬ ಸಜ್ಜನ ವ್ಯಕ್ತಿಯ ಮನಸ್ಸು ನೋಯಿಸಿ, ಅವನ ಆತಿಥ್ಯ ತಿರಸ್ಕರಿಸಿದ ಪಾಪಕ್ಕೆ ಇದು ಶಿಕ್ಷೆ. ಹೋಗಿ ಅವನ ಮನೆಯ ಆತಿಥ್ಯ ಸ್ವೀಕರಿಸಿ ಬಾ ಎಂದು ಗಂಗಾದೇವಿ ಆದೇಶಿಸಿದಳು.

ತಾಯಿಯ ಆದೇಶದಂತೆ ಬೇಗನೆ ಅವನ ಮನೆಗೆ ಹೊರಡುತ್ತಾನೆ. ಅಲ್ಲಿ ಬಂದಂತಹ ಅತಿಥಿ ಊಟ ಮಾಡದೆ ಹೊರಟ ಎನ್ನುವ ದುಃಖದಿಂದ ಸತ್ಯಕೇತು ಚಿಂತಾಕ್ರಾಂತನಾಗಿ ಕುಳಿತಿದ್ದ. ಮತ್ತೆ ತಿರುಗಿಬಂದ ಬ್ರಾಹ್ಮಣನಿಗೆ ಭೋಜನ ಮಾಡಿಸಿ ಕಳುಹಿಸಿದ. ಹೋಗುವ ಮುಂಚೆ ಅನ್ನದಾನದ ಮಹಿಮೆಯನ್ನು ತಿಳಿಯದೇ ನಿನಗೆ ನಿಂದಿಸಿದೆ. ನನ್ನನ್ನು ಕ್ಷಮಿಸಿ ಎಂದು ಹೇಳಿ ಅವನ ಅಪ್ಪಣೆ ಪಡೆದು ಗಂಗಾನದಿಯ ಕಡೆ ಬರುತ್ತಾನೆ. ಆಗ ತುಂಬಿ ಹರಿಯುವ ಗಂಗೆಯ ಕಂಡು ಸಂತಸಪಟ್ಟ, ಗಂಗೆಯಲ್ಲಿ ಮಿಂದು ಪುನೀತನಾಗುತ್ತಾನೆ ಸತ್ಯಜಿತ್.

ನೀತಿ: ಎಲ್ಲಾ ದಾನಗಳಿಗಿಂತ ಅನ್ನದಾನ ಶ್ರೇಷ್ಠ. ಅನ್ನವೇ ಪ್ರಾಣ. ಅನ್ನದಾನ ಮಾಡುವವನು ಹಸಿದವರಿಗೆ ಪ್ರಾಣದಾನ ಮಾಡಿದಂತೆ. ಅನ್ನದಾನವನ್ನು ಯಾರು ಮಾಡುತ್ತಾರೆಯೋ ಅವರು ಉತ್ತಮ ಫಲವನ್ನು ಪಡೆದು, ಭಗವಂತನ ಅನುಗ್ರಹಕ್ಕೆ ಪಾತ್ರರಾಗುತ್ತಾರೆ.

ಮಾದಕ ವಸ್ತು ಮಾರಾಟ; ಮೈಸೂರಿನ ಯುವಕ ಸೇರಿ ಮಂಗಳೂರಲ್ಲಿ ಇಬ್ಬರು ಸೆರೆ

ಮೈಸೂರು, ಡಿ.7(ಆರ್‌ಕೆ)– ಅನಧಿಕೃತವಾಗಿ ಮಾದಕ ವಸ್ತು (ಎಂಡಿಎಂಎ) ಮಾರಾಟ ಮಾಡುತ್ತಿದ್ದ ಮೈಸೂರಿನ ಯುವಕ ಸೇರಿ ಇಬ್ಬರು ಆರೋಪಿಗಳನ್ನು ಮಂಗಳೂರಿನಲ್ಲಿ ಪೊಲೀಸರು ಬಂಧಿಸಿದ್ದಾರೆ.


ದರ್ಶನ್


ಜೋಸೆಫ್

ಮೈಸೂರಿನ ನಜರ್‌ಬಾದ್ ನಿವಾಸಿ ಗೋಪಾಲ್ ಅವರ ಮಗ ಜಿ.ಎಸ್. ದರ್ಶನ್ (28) ಹಾಗೂ ಬೆಂಗಳೂರಿನ ಅಂದರಹಳ್ಳಿ ನಿವಾಸಿ ಜೋಸೆಫ್ ಚಿಕಾ (30) ಬಂಧಿತ ಯುವಕರಾಗಿದ್ದಾರೆ. ಮೂಲತಃ ಬೆಂಗಳೂರಿನವನಾದ ದರ್ಶನ್ ಹಾಗೂ ಮೂಲತಃ ನೈಜೀರಿಯಾ ಪ್ರಜೆ ಜೋಸೆಫ್ ಚಿಕಾ, ಮಂಗಳೂರಿನ ಪಂಪ್‌ವೆಲ್ ಜಂಕ್ಷನ್ ಬಳಿ ಯುವಕರಿಗೆ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದರು. ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಮಂಗಳೂರು ನಗರ ಬಜ್ಪೆ ಠಾಣೆ ಇನ್‌ಸ್ಪೆಕ್ಟರ್ ಜಿ.ಎಸ್. ಸಂದೀಪ್ ಹಾಗೂ ಸಿಸಿಬಿ ಇನ್‌ಸ್ಪೆಕ್ಟರ್ ಶ್ಯಾಮಸುಂದರ್ ಅವರು ಡಿ.3ರಂದು ದರ್ಶನ್‌ನನ್ನು ಬಂಧಿಸಿ, ಆತನಿಂದ 10 ಲಕ್ಷ ರೂ. ಬೆಲೆಬಾಳುವ 195 ಗ್ರಾಂ ಎಂಡಿಎಂಎ ಮಾದಕ ವಸ್ತುವನ್ನು ವಶಪಡಿಸಿಕೊಂಡಿದ್ದರು.

ಆತನನ್ನು ಠಾಣೆಗೆ ಕರೆತಂದು ತೀವ್ರ ವಿಚಾರಣೆಗೊಳಪಡಿಸಿದಾಗ ನನಗೆ ನೈಜೀರಿಯಾ ಮೂಲದ ಜೋಸೆಫ್ ಚಿಕಾ ಮಾದಕ ವಸ್ತುವನ್ನು ಸರಬರಾಜು ಮಾಡಿದ್ದಾಗಿ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ನಿನ್ನೆ (ಶುಕ್ರವಾರ) ಆತನನ್ನು ಮಂಗಳೂರಿನಲ್ಲಿ ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ತಾನು ದೆಹಲಿ, ಪಶ್ಚಿಮ ಬಂಗಾಳದಿಂದ ಎಂಡಿಎಂಎ ಮಾದಕ ವಸ್ತುವನ್ನು ತರುತ್ತಿದ್ದುದಾಗಿ ಚಿಕಾ ಪೊಲೀಸರಿಗೆ ತಿಳಿಸಿದ್ದಾನೆ.

ಪ್ರಕರಣ ದಾಖಲಿಸಿಕೊಂಡ ಬಜ್ಪೆ ಠಾಣೆ ಪೊಲೀಸರು ಇಬ್ಬರನ್ನೂ ಬಂಧಿಸಿ, ವಿಚಾರಣೆ ನಡೆಸಿದ ಬಳಿಕ ಶುಕ್ರವಾರ ಸಂಜೆ ಮಂಗಳೂರು ನಗರದ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ಇಬ್ಬರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಪತ್ತೆ ಕಾರ್ಯದಲ್ಲಿ ಬಜ್ಪೆ ಠಾಣೆ ಸಬ್‌ಇನ್‌ಸ್ಪೆಕ್ಟರ್ ಸುದೀಪ್, ಸಿಸಿಬಿ ಠಾಣೆ ಸಬ್‌ಇನ್ ಸ್ಪೆಕ್ಟರ್ ಸೃಜನ್ ಹಾಗೂ ಕ್ರೈಂ ತಂಡದ ಸಿಬ್ಬಂದಿ ಪಾಲ್ಗೊಂಡಿದ್ದರು.

ಮುಡಾ ಹಗರಣದಲ್ಲಿ ಆರೋಪಿಗಳನ್ನು ರಕ್ಷಿಸುತ್ತಿರುವ ಅಡ್ವೊಕೇಟ್ ಜನರಲ್: ಸ್ನೇಹಮಯಿ ಕೃಷ್ಣ ಆರೋಪ

ಸ್ಪಷ್ಟೀಕರಣದ ಎಚ್ಚರಿಕೆ ನೀಡದಿದ್ದರೆ ಕ್ರಮ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗಿಯಾಗಿದ್ದಾರೆ ಎನ್ನಲಾದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಪ್ರಕರಣದಲ್ಲಿ ಆರೋಪಿಗಳನ್ನು ಅಡ್ವೊಕೇಟ್ ಜನರಲ್ ರಕ್ಷಿಸುತ್ತಿದ್ದು, ಸರ್ಕಾರದ ಹಿತಾಸಕ್ತಿ ಕಾಪಾಡುತ್ತಿಲ್ಲ ಎಂದು ಶನಿವಾರ ಆರೋಪಿಸಿದ್ದಾರೆ.

ಮೈಸೂರು ನಗರದ ಹೊರವಲಯದ ಕಸಬಾ ಹೋಬಳಿಯ ಕೆಸರೆ ಗ್ರಾಮದ ಸರ್ವೆ ನಂಬರ್ 464ರಲ್ಲಿನ ಆಸ್ತಿಗೆ ಸಂಬಂಧಿಸಿದಂತೆ ನಗರಾಭಿವೃದ್ಧಿ ಕಾರ್ಯದರ್ಶಿಗೆ ನೀಡಿರುವ ಕಾನೂನು ಅಭಿಪ್ರಾಯವನ್ನು ವಿರೋಧಿಸಿ ಸ್ನೇಹಮಯಿ ಕೃಷ್ಣ ಅವರು ಅಡ್ವೊಕೇಟ್ ಜನರಲ್ ಶಶಿ ಕಿರಣ್ ಶೆಟ್ಟಿ ಅವರಿಗೆ ಪತ್ರ ಬರೆದಿದ್ದಾರೆ.

ಅಡ್ವೊಕೇಟ್ ಜನರಲ್ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗೆ ನೀಡಿರುವ ಅಭಿಪ್ರಾಯದ ಪ್ರತಿ ತನ್ನ ಬಳಿ ಇದೆ. ಜವಾಬ್ದಾರಿಯುತ ಅಧಿಕಾರಿಯಾಗಿರುವ ನೀವು ಆರೋಪಿಗಳನ್ನು ರಕ್ಷಿಸುವ ಅಭಿಪ್ರಾಯ ನೀಡಿದ್ದೀರಿ. ಕಾನೂನಿನ ಅರಿವಿಲ್ಲದ ವ್ಯಕ್ತಿಯಂತೆ ಸರ್ಕಾರಿ ಆಸ್ತಿ ಸಂರಕ್ಷಣೆ ವಿರುದ್ಧ ಹೋಗಿದ್ದೀರಿ ಮತ್ತು ಈ ಬಗ್ಗೆ ಸ್ಪಷ್ಟೀಕರಣ ಮತ್ತು ಅಧಿಕೃತ ದಾಖಲೆಗಳನ್ನು ಕೇಳುತ್ತಿದ್ದೇನೆ ಎಂದು ಕೃಷ್ಣ ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ.

ನಮ್ಮದು ಪ್ರಜಾಸತ್ತಾತ್ಮಕ ದೇಶ ಮತ್ತು ಜನರೇ ಸರ್ವಶ್ರೇಷ್ಠರು. ಸಾರ್ವಜನಿಕರು ಪಾವತಿಸುವ ಹಣದಲ್ಲಿ ನಿಮಗೆ ಸಂಬಳ ಮತ್ತು ಸೌಲಭ್ಯಗಳನ್ನು ಒದಗಿಸಲಾಗಿದ್ದು, ನೀವು ಅವರಿಗೆ ಜವಾಬ್ದಾರರಾಗಿರುತ್ತೀರಿ. ನಿಮ್ಮ ಕ್ರಮಗಳನ್ನು ಪ್ರಶ್ನಿಸಿ ನಿಮ್ಮ ವಿರುದ್ಧ ಕ್ರಮ ಕೈಗೊಳ್ಳಲು ಸಂವಿಧಾನದ 51ಎ ವಿಧಿಯ ನಿಬಂಧನೆಗಳ ಪ್ರಕಾರ ಈ ಅರ್ಜಿಯನ್ನು ಸಲ್ಲಿಸುತ್ತಿದ್ದೇನೆ ಎಂದು ಅವರು ಹೇಳಿದ್ದಾರೆ.

100 ರೂ.ಗಿಂತ ಹೆಚ್ಚಿನ ಆಸ್ತಿಯನ್ನು ಕಡ್ಡಾಯವಾಗಿ ನೋಂದಣಿ ಮಾಡಬೇಕು ಎಂದು ಕಾನೂನು ಹೇಳುತ್ತದೆ. ಶ್ವೇತ ಪತ್ರದ ಮೇಲಿನ ಹೇಳಿಕೆಗಳ ಆಧಾರದ ಮೇಲೆ ಲಕ್ಷಕ್ಕೂ ಹೆಚ್ಚು ಮೌಲ್ಯದ ಆಸ್ತಿಯನ್ನು ವರ್ಗಾಯಿಸುವುದು ಕಾನೂನು ಬಾಹಿರವಲ್ಲವೇ? ನಿಮ್ಮಂತಹ ಅಧಿಕಾರಿಗಳು ಇದನ್ನು ಬೆಂಬಲಿಸುವುದು ಸಮರ್ಥನೆಯೇ? ಎಂದು ಕೃಷ್ಣ ಅಡ್ವೊಕೇಟ್ ಜನರಲ್ ಅವರನ್ನು ಪ್ರಶ್ನಿಸಿದ್ದಾರೆ.

ಕರಾರು ಪತ್ರದ ಪ್ರಕಾರ ಆಸ್ತಿ ಹಕ್ಕುಗಳನ್ನು ಮೈಲಾರಪ್ಪಗೆ ವರ್ಗಾಯಿಸಲಾಗಿದೆ. 23 ವರ್ಷಗಳ ನಂತರ 1993ರಲ್ಲಿ ನಿಂಗ ಅವರ ಜವರ ಆಸ್ತಿ ಹೇಗಾಗುತ್ತದೆ? ನಾಲ್ಕನೇ ಆರೋಪಿ ಭೂಮಾಲೀಕ ಜೆ.ದೇವರಾಜು ಅವರ ಹೆಸರಿಗೆ ಕಂದಾಯ ಅಧಿಕಾರಿಗಳು ಭೂಮಿ ಹಸ್ತಾಂತರ ಮಾಡಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದ್ದು, ಯಾರ ಪ್ರಭಾವದಿಂದ ಇದೆಲ್ಲ ನಡೆದಿದೆ ಎಂಬುದರ ಕುರಿತು ತನಿಖೆ ನಡೆಸಬೇಕು ಎಂದು ಅವರು ಪತ್ರದಲ್ಲಿ ಒತ್ತಾಯಿಸಿದ್ದಾರೆ. ಈ ಬಗ್ಗೆ ಸ್ಪಷ್ಟೀಕರಣವನ್ನು ನೀಡದಿದ್ದರೆ, ನಿಮ್ಮ ವಿರುದ್ಧ ಕ್ರಮ ಕೈಗೊಳ್ಳಲು ಸೂಕ್ತ ಅಧಿಕಾರಿಗಳಿಗೆ ದೂರು ಸಲ್ಲಿಸುವುದು ಅನಿವಾರ್ಯವಾಗುತ್ತದೆ ಎಂದು 10 ಪುಟಗಳ ಪತ್ರದಲ್ಲಿ ಸ್ನೇಹಮಯಿ ಕೃಷ್ಣ ಎಚ್ಚರಿಕೆ ನೀಡಿದ್ದಾರೆ.

ನಿಖಿಲ್‌ಗೆ ಅಧ್ಯಕ್ಷ ಪಟ್ಟ: ದೇವೇಗೌಡರ ಸುಳಿವು

ನವದೆಹಲಿ: ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರನ್ನು ಜೆಡಿಎಸ್ ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಮಾಡುವ ಸುಳಿವನ್ನು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಶನಿವಾರ ನೀಡಿದರು.



ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ಸದ್ಯ ಕುಮಾರಸ್ವಾಮಿ ಪಕ್ಷದ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದಾರೆ. ಅವರು ಕೇಂದ್ರ ಸಚಿವರಾಗಿದ್ದು, ಪಕ್ಷದ ವ್ಯವಹಾರಗಳ ಮೇಲೆ ಗಮನ ಕೇಂದ್ರೀಕರಿಸಲು ಸಾಧ್ಯವಾಗುತ್ತಿಲ್ಲ. ಮುಂದೆ ನಿಖಿಲ್ ಅವರು ಪಕ್ಷದ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾರೆ ಎಂದರು.

ನಿಖಿಲ್ ಯುವ ನಾಯಕ ಮತ್ತು ಉಜ್ವಲ ಭವಿಷ್ಯ ಹೊಂದಿದ್ದಾರೆ. ಅವರಿಗೆ ಹೆಚ್ಚಿನ ಜವಾಬ್ದಾರಿ ನೀಡುತ್ತೇವೆ. ಅವರ ನಾಯಕತ್ವದಲ್ಲಿ ಪಕ್ಷ ಬೇರು ಮಟ್ಟದಲ್ಲಿ ಬಲಪಡಿಸುತ್ತೇವೆ ಎಂದರು. ಸ್ಪರ್ಧಿಸಿರುವ ಎಲ್ಲ ಚುನಾವಣೆಗಳಲ್ಲಿ ನಿಖಿಲ್ ಸೋತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಗೆಲುವು ಮತ್ತು ಸೋಲು ಪ್ರಜಾಪ್ರಭುತ್ವ ವ್ಯವಸ್ಥೆಯ ಭಾಗವಾಗಿದೆ. ಸೋತ ಕೂಡಲೇ ಅವರ ರಾಜಕೀಯ ಜೀವನ ಅಂತ್ಯವಾಗಿದೆ ಎಂದಲ್ಲ ಎಂದರು.

ದೇವೇಗೌಡರು ರಾಜಕೀಯದಿಂದ ನಿವೃತ್ತಿಯಾಗಬೇಕೆಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಈ ಹಿಂದೆ ಹಲವಾರು ಜನರು ನನ್ನನ್ನು ಮುಗಿಸಲು ಪ್ರಯತ್ನಿಸಿದ್ದರು. ಆದರೂ, ನಾನು ಇನ್ನೂ ಜೀವಂತವಾಗಿದ್ದೇನೆ ಎಂದರು.

ಹಾಸನ ಜಿಲ್ಲೆಯಲ್ಲಿ ದೇವೇಗೌಡರ ಕುಟುಂಬವನ್ನು ರಾಜಕೀಯವಾಗಿ ಮುಗಿಸುತ್ತೇವೆ ಎಂದು ಹಲವಾರು ನಾಯಕರು ಸವಾಲು ಹಾಕಿದ್ದಾರೆ. ದೇವೇಗೌಡರ ಕುಟುಂಬದ ಕೊಡುಗೆ ಏನು ಎಂಬುದು ಹಾಸನದ ಜನರಿಗೆ ತಿಳಿದಿದೆ ಎಂದರು.

ಬಾಣಂತಿಯರ ಸಾವು: ವರದಿ ಆಧರಿಸಿ ತಪ್ಪಿತಸ್ಥರ ವಿರುದ್ಧ ಕ್ರಮ

ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ

ಚಾಮರಾಜನಗರ: ಬಳ್ಳಾರಿ ಜಿಲ್ಲೆಯಲ್ಲಿ ಬಾಣಂತಿಯರ ಸಾವಿನ ಸಂಖ್ಯೆ 5ಕ್ಕೆ ಹೆಚ್ಚಾಗುತ್ತಿದ್ದಂತೆಯೇ, ಇದರ ತನಿಖೆಗಾಗಿ ಅಭಿವೃದ್ಧಿ ಆಯುಕ್ತರ ನೇತೃತ್ವದಲ್ಲಿ ರಚಿಸಲಾಗಿರುವ ತಜ್ಞರ ಸಮಿತಿ ನೀಡುವ ವರದಿ ಆಧಾರದ ಮೇಲೆ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.


ಸುದ್ದಿಗಾರರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

ಬಳ್ಳಾರಿ ಜಿಲ್ಲೆಯಲ್ಲಿ ಕಳೆದ ತಿಂಗಳು ನಾಲ್ವರು ಸಾವನ್ನಪ್ಪಿದ್ದರು. ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಮತ್ತೊರ್ವರು ಗುರುವಾರ ರಾತ್ರಿ ಸಾವನ್ನಪ್ಪಿದ್ದಾರೆ. ಇದರೊಂದಿಗೆ ಅಲ್ಲಿ ಮೃತಪಟ್ಟವರ ಸಂಖ್ಯೆ ಈಗ 5ಕ್ಕೆ ಏರಿಕೆಯಾಗಿದೆ.

ಈ ಕುರಿತ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ, ನಾಲ್ವರು ಬಾಣಂತಿಯರು ಸಾವನ್ನಪ್ಪಿದ್ದಾಗ ಸಭೆ ನಡೆಸಿದ್ದೆ. ನಿನ್ನೆ ನಡೆದ ಸಚಿವ ಸಂಪುಟ ಸಭೆಯಲ್ಲೂ ಇದರ ಬಗ್ಗೆ ಚರ್ಚಿಸಿದ್ದೇವೆ. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳು ಬಳ್ಳಾರಿಗೆ ಭೇಟಿ ನೀಡಿದ್ದಾರೆ ಎಂದರು.

ಗುಣಮಟ್ಟವಲ್ಲದ ರಿಂಗರ್ ಲ್ಯಾಕ್ಟೇಟ್ ಸಲ್ಯೂಷನ್‌ನಿಂದ ಬಾಣಂತಿಯರು ಸಾವನ್ನಪ್ಪಿರಬಹುದು. ಸರ್ಕಾರ ಈಗಾಗಲೇ ಔಷಧ ನಿಯಂತ್ರಕರನ್ನು ಅಮಾನತು ಮಾಡಿದ್ದು, ಸಲ್ಯೂಷನ್ ಪೂರೈಕೆ ಮಾಡಿದ ಕಂಪನಿಯನ್ನು ಕಪ್ಪುಪಟ್ಟಿಗೆ ಸೇರಿಸಲಾಗಿದೆ. ಇದರ ತನಿಖೆಗಾಗಿ ಅಭಿವೃದ್ಧಿ ಆಯುಕ್ತರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. ಈ ಸಮಿತಿ ವರದಿ ನೀಡಿದ ಬಳಿಕ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಈಗಾಗಲೇ ಕೆಲ ಕ್ರಮ ತೆಗೆದುಕೊಳ್ಳಲಾಗಿದೆ. ವರದಿ ಆಧಾರದ ಮೇಲೆ ಮತ್ತಷ್ಟು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಹೇಳಿದರು.

ಬಳ್ಳಾರಿಯಲ್ಲಿನ ಇತ್ತೀಚಿನ ಸಾವಿಗೆ ಸಂಬಂಧಿಸಿದಂತೆ ನವೆಂಬರ್ 30 ರಂದು ಉನ್ನತ ಮಟ್ಟದ ಸಭೆ ನಡೆಸಿದ್ದ ಮುಖ್ಯಮಂತ್ರಿ, ಮೃತ ಬಾಣಂತಿಯರ ಕುಟುಂಬಕ್ಕೆ ತಲಾ ರೂ.2 ಲಕ್ಷ ಪರಿಹಾರ ಘೋಷಿಸುವುದರೊಂದಿಗೆ ಸಾವು ಪ್ರಕರಣ ಕುರಿತು ತನಿಖೆಗೆ ಆದೇಶಿಸಿದ್ದರು. ಈ ಮಧ್ಯೆ ಬಳ್ಳಾರಿಯಲ್ಲಿ ಬಿಜೆಪಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು. ಬಾಣಂತಿಯರ ಸಾವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿಲ್ಲ ಎಂದು ಆರೋಪಿಸಿದ ಮಾಜಿ ಸಚಿವ ಶ್ರೀರಾಮುಲು, ಮೃತರ ಕುಟುಂಬಕ್ಕೆ ಘೋಷಿಸಲಾಗಿರುವ ರೂ. 2 ಲಕ್ಷ ಯಾವುದಕ್ಕೂ ಸಾಕಾಗುವುದಿಲ್ಲ, ಅವರಿಗೆ ತಲಾ ರೂ.1 ಕೋಟಿ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಬಳ್ಳಾರಿಯ ವಿಮ್ಸ್‌ಗೆ ಲೋಕಾಯುಕ್ತ ಅಧಿಕಾರಿಗಳ ದಿಢೀರ್ ಭೇಟಿ; ಪರಿಶೀಲನೆ

ಬಳ್ಳಾರಿ: ಬಾಣಂತಿಯರ ಸರಣಿ ಸಾವಿನಿಂದಾಗಿ ರಾಜ್ಯದಲ್ಲಿ ಹೆಚ್ಚು ಸುದ್ದಿಯಾಗುತ್ತಿರುವ ಬಳ್ಳಾರಿ ಜಿಲ್ಲಾ ಜಿಲ್ಲಾಸ್ಪತ್ರೆ ಹಾಗೂ ವಿಮ್ಸ್‌ಗೆ ಲೋಕಾಯುಕ್ತ ಅಧಿಕಾರಿಗಳು ಶನಿವಾರ ದಿಢೀರ್ ಭೇಟಿ ನೀಡಿದ್ದು, ಪರಿಶೀಲನೆ ನಡೆಸಿದ್ದಾರೆ.



ಲೋಕಾಯುಕ್ತ ಬಳ್ಳಾರಿ ಎಸ್‌ಪಿ ಸಿದ್ದರಾಜು ನೇತೃತ್ವದ 25ಕ್ಕೂ ಹೆಚ್ಚಿನ ಸಿಬ್ಬಂದಿಯನ್ನೊಳಗೊಂಡ ತಂಡ ಎರಡು ಭಾಗಗಳಾಗಿ ಜಿಲ್ಲಾಸ್ಪತ್ರೆ, ವಿಮ್ಸ್‌ಗೆ ಲಗ್ಗೆ ಹಾಕಿದೆ. ಪರಿಶೀಲನೆಯಲ್ಲಿ ಹೊಸಪೇಟೆ ಜಿಲ್ಲೆಯ ಲೋಕಾಯುಕ್ತ ಸಿಬ್ಬಂದಿಯೂ ಇದ್ದರು. ಬಳ್ಳಾರಿಯಲ್ಲಿ ಆಗಿರುವ ಬಾಣಂತಿಯರ ಸರಣಿ ಸಾವು ಸಂಬಂಧ ಲೋಕಾಯುಕ್ತದಲ್ಲಿ ಪ್ರಕರಣ ದಾಖಲಾಗಿದೆ. ಅದರ ಭಾಗವಾಗಿ ಇಂದು ಪರಿಶೀಲನೆ ನಡೆಯುತ್ತಿರುವುದಾಗಿ ಮಾಹಿತಿ ಲಭ್ಯವಾಗಿದೆ. ಬಳ್ಳಾರಿಯ ಜಿಲ್ಲಾ ಆಸ್ಪತ್ರೆಯಲ್ಲಿ ನವೆಂಬರ್ 9ರಿಂದ 11ರ ನಡುವೆ ನಾಲ್ಕು ತಾಯಂದಿರ ಸಾವು ವರದಿಯಾಗಿತ್ತು. ಡಿಸೆಂಬರ್ 5ರ ರಾತ್ರಿ ಮತ್ತೊಬ್ಬರು ಮೃತಪಟ್ಟಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

ಬಿಲ್ ಬಾಕಿ ಇದ್ದರೆ ವಿದ್ಯುತ್ ಕಟ್

ವಿದ್ಯುತ್ ಬಾಕಿ ಪಾವತಿಗೆ 3 ದಿನಗಳ ಗಡುವು

ಮೈಸೂರು,ಡಿ.7–ಗ್ರಾಹಕರು ವಿದ್ಯುತ್ ಶುಲ್ಕ ಬಾಕಿ ಉಳಿಸಿಕೊಂಡಿದ್ದರೆ, ನಿಗದಿತ ಅವಧಿಯೊಳಗೆ ಶುಲ್ಕ ಪಾವತಿ ಮಾಡದಿದ್ದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಳಿಸಲು ಸೆಸ್ಕ್ ತೀರ್ಮಾನಿಸಿದೆ.

ಕೆಲವು ಗ್ರಾಹಕರು, ಗ್ರಾಮ ಪಂಚಾಯಿತಿ ಕುಡಿಯುವ ನೀರು, ಬೀದಿದೀಪ ಸ್ಥಾವರಗಳನ್ನು ಒಳಗೊಂಡಂತೆ ವಿದ್ಯುತ್ ಶುಲ್ಕ ಪಾವತಿಸದೆ ಬಾಕಿ ಉಳಿಸಿಕೊಂಡಿವೆ. ಅವಧಿ ಮೀರಿದ್ದರೂ ವಿದ್ಯುತ್ ಶುಲ್ಕ ಹಾಗೂ ಹೆಚ್ಚುವರಿ ಭದ್ರತಾ ಠೇವಣಿಯನ್ನು ಪಾವತಿಸಿಲ್ಲ. ಈ ರೀತಿಯಾಗಿ ಬಿಲ್ ಬಾಕಿ ಉಳಿಸಿಕೊಂಡಿರುವ ವಿದ್ಯುತ್ ಕ್ರಮಕೈಗೊಳ್ಳುವ ನಿಟ್ಟಿನಲ್ಲಿ ವಿದ್ಯುತ್ ಕಡಿತಗೊಳಿಸಲು ಸೆಸ್ಕ್ ನಿರ್ಧರಿಸಿದೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪ್ರಕಾರ ವಿದ್ಯುತ್ ಸರಬರಾಜಿನ, ವಿತರಣಾ ಲೈಸೆನ್ಸ್‌ದಾರರ ಷರತ್ತುಗಳು 2004 ಅನುಬಂಧ-04ರ ನಿಯಮ 4.18(ಜೆ) ಪ್ರಕಾರ 'ಗ್ರಾಹಕರು ಬಿಲ್ ಪಾವತಿಗೆ ನೀಡಿರುವ ದಿನಾಂಕದೊಳಗೆ ಬಿಲ್ ಪಾವತಿಸದಿದ್ದರೆ, ನಿಗದಿತ ಗಡುವಿನ ದಿನಾಂಕದ ನಂತರ ಶುಲ್ಕ ಪಾವತಿಸದ ಗ್ರಾಹಕರಿಗೆ 15 ದಿನಗಳ ಸ್ಪಷ್ಟ ನೋಟಿಸ್ ನೀಡಿ, ಬಾಕಿ ಪಾವತಿಸದ ಕಾರಣಕ್ಕೆ ವಿದ್ಯುತ್ ಸಂಪರ್ಕ ಕಡಿತಗೊಳಿಸುವ ಹಕ್ಕನ್ನು ಲೈಸೆನ್ಸ್‌ದಾರರು ಹೊಂದಿರುತ್ತಾರೆ'. ಅಲ್ಲದೇ ನಿಯಮ 2.11ರ ಪ್ರಕಾರ 'ಬಿಲ್ ವಿತರಿಸಿದ ಬಳಿಕ ಬಿಲ್ ಪಾವತಿಗೆ 15 ದಿನಗಳ ಅವಧಿ ಅಂತಿಮ ಗಡುವಾಗಿರುತ್ತದೆ.' "ಗ್ರಾಹಕರಿಗೆ ನೀಡುವ ಬಿಲ್‌ನ ಹಿಂಬದಿಯ ಸೂಚನೆ 1ರಲ್ಲಿ ನಿಗದಿತ ದಿನದೊಳಗೆ ಬಿಲ್ ಪಾವತಿಸದಿದ್ದಲ್ಲಿ ಈ ಬಿಲ್ ಅನ್ನೇ ವಿದ್ಯುತ್ ಸರಬರಾಜು ನಿಲ್ಲಿಸುವ 15 ದಿನಗಳ ನೋಟಿಸ್ ಎಂದು ಪರಿಗಣಿಸಬೇಕು ಎಂದು ನಮೂದಿಸಲಾಗಿದೆ ಹಾಗೂ ಹಿಂದಿನ ಬಾಕಿಗೆ ದಿನಾಂಕ ಅನ್ವಯಿಸುವುದಿಲ್ಲ ಎಂದು ತಿಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ತುರ್ತು ಸೇವೆಗಳಾದ ಸರ್ಕಾರಿ ಆಸ್ಪತ್ರೆಗಳು, ಕುಡಿಯುವ ನೀರು, ಬೀದಿದೀಪಗಳ ಸೇವೆಗಳನ್ನು ಹೊರತುಪಡಿಸಿ ಎಲ್ಲಾ ಪ್ರವರ್ಗದ ವಿದ್ಯುತ್ ಗ್ರಾಹಕರು, ಸರ್ಕಾರಿ ಇಲಾಖೆ ಒಳಗೊಂಡಂತೆ ತಮ್ಮ ಸ್ಥಾವರಗಳ ವಿದ್ಯುತ್ ಶುಲ್ಕ ಬಾಕಿಯನ್ನು 3 ದಿನದೊಳಗೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್) ಅಧಿಕೃತ ನಗದು ಕೌಂಟರ್, ಆನ್‌ಲೈನ್ ಮೂಲಕ ಪಾವತಿಸುವಂತೆ ಕೋರಲಾಗಿದೆ. ಅಲ್ಲದೇ ನಿಗದಿತ ದಿನದೊಳಗೆ ವಿದ್ಯುತ್ ಶುಲ್ಕ ಬಾಕಿ ಪಾವತಿಸದಿದ್ದಲ್ಲಿ ಡಿಸೆಂಬರ್ 9, 2024ರ ಸೋಮವಾರ ಸಾಮೂಹಿಕವಾಗಿ ವಿದ್ಯುತ್ ಕಡಿತಗೊಳಿಸುವ ಅಭಿಯಾನದ ಮೂಲಕ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುವುದು ಎಂದು ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

> **ನಿಗದಿತ ಅವಧಿಯೊಳಗೆ ಶುಲ್ಕ ಪಾವತಿಸದೆ ಬಾಕಿ ಉಳಿಸಿಕೊಂಡಿರುವ ಸ್ಥಾವರಗಳಿಗೆ ನಿಯಮಾನುಸಾರ ವಿದ್ಯುತ್ ಸಂಪರ್ಕ ಕಡಿತಗೊಳಿಸಲು ನಿರ್ಧರಿಸಲಾಗಿದೆ. ಆದ್ದರಿಂದ ವಿದ್ಯುತ್ ಶುಲ್ಕ ಬಾಕಿ ಉಳಿಸಿಕೊಂಡಿರುವ ಗ್ರಾಹಕರು, ಸರ್ಕಾರಿ ಇಲಾಖೆಗಳು ತುರ್ತಾಗಿ ತಮ್ಮ ವಿದ್ಯುತ್ ಸ್ಥಾವರದ ಬಾಕಿ ಪಾವತಿಸಿ ಇಲಾಖೆಯೊಂದಿಗೆ ಸಹಕರಿಸಬೇಕಿದೆ.**
> **– ಜಿ.ಶೀಲಾ, ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕರು**

ಮೈಸೂರು ಜಿಲ್ಲೆಯಲ್ಲಿ ಈ ವರ್ಷ ಕೋವಿಡ್‌ನಿಂದ 10 ಮಂದಿ ಸಾವು

2024ರ ನವೆಂಬರ್ 21ರವರೆಗೆ ರಾಜ್ಯದಲ್ಲಿ 39 ಮಂದಿ ಕೋವಿಡ್‌ನಿಂದ ಮರಣದ ವರದಿ

ಮೈಸೂರು, ಡಿ.7(ಆರ್‌ಕೆ)– ಮೈಸೂರು ಜಿಲ್ಲೆಯಲ್ಲಿ 2024ರ ನವೆಂಬರ್ ಮಾಹೆವರೆಗೆ ಒಟ್ಟು 10 ಮಂದಿ ಕೋವಿಡ್–19 ಸೋಂಕಿನಿಂದ ಸಾವನ್ನಪ್ಪಿದ್ದಾರೆ ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರು ಸಂಸತ್‌ನಲ್ಲಿ ಮಾಹಿತಿ ನೀಡಿದ್ದಾರೆ.

ಅದೇ ರೀತಿ 2024ರ ನವೆಂಬರ್ 21ರವರೆಗೆ ಕರ್ನಾಟಕ ರಾಜ್ಯದಲ್ಲಿ 39 ಮಂದಿ ಕೋವಿಡ್‌ಗೆ ಸಂಬಂಧಿಸಿದಂತೆ ಸಾವನ್ನಪ್ಪಿದ್ದಾರೆ ಎಂಬುದನ್ನು ಅವರು ಸಭೆಯಲ್ಲಿ ಪ್ರಸ್ತಾಪಿಸಿದ್ದಾರೆ. ಜಿಲ್ಲೆಯಲ್ಲಿ ಕಳೆದ ವರ್ಷ 6 ಮಂದಿ, ಬೆಂಗಳೂರು ನಗರ ಜಿಲ್ಲೆಯಲ್ಲಿ 17 ಮಂದಿ ಸಾವನ್ನಪ್ಪಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಬೆಂಗಳೂರು ನಗರ ಜಿಲ್ಲೆಯಲ್ಲಿ 2020ರ ಸಾಲಿನಲ್ಲಿ 4344, 2021ರಲ್ಲಿ 12,074, 2022ರಲ್ಲಿ 575 ಮಂದಿ ಸಾವನ್ನಪ್ಪಿದ್ದರೆ, ಮೈಸೂರು ಜಿಲ್ಲೆಯಲ್ಲಿ 2020ರಲ್ಲಿ 1012, 2021ರಲ್ಲಿ 1416, 2022ರಲ್ಲಿ 145 ಮಂದಿ ಬಲಿಯಾಗಿದ್ದಾರೆ. ಸಂಸತ್‌ನಲ್ಲಿ ಗುಲ್ಬರ್ಗ ಸಂಸದ ರಾಧಾಕೃಷ್ಣ ದೊಡ್ಡಮನಿ, ಕೋವಿಡ್–19 ಸಾವುಗಳು ಹೆಚ್ಚುತ್ತಿರುವ ಬಗ್ಗೆ ಸಭೆಯ ಗಮನ ಸೆಳೆದಿದ್ದರು. ಅದಕ್ಕೆ ಪ್ರತಿಕ್ರಿಯಿಸಿದ ಕೇಂದ್ರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ಪ್ರತಾಪ್‌ರಾವ್ ಜಾಧವ್, ಕರ್ನಾಟಕದಲ್ಲಿ ಕೋವಿಡ್–19 ಪ್ರಕರಣಗಳ ಬಗ್ಗೆ ಅಂಕಿಅಂಶಗಳನ್ನು ನೀಡಿದರು. ಪ್ರಸಕ್ತ ಸಾಲಿನಲ್ಲಿ ಕರ್ನಾಟಕದ 31 ಜಿಲ್ಲೆಗಳ ಪೈಕಿ 14 ಜಿಲ್ಲೆಗಳಲ್ಲಿ ಶೂನ್ಯ ಕೋವಿಡ್ ಸಾವುಗಳಿದ್ದು, 9 ಜಿಲ್ಲೆಗಳಲ್ಲಿ ತಲಾ ಒಂದೊಂದು ಸಾವು, 4 ಜಿಲ್ಲೆಗಳಲ್ಲಿ ತಲಾ 2 ಸಾವು, 1 ಜಿಲ್ಲೆಯಲ್ಲಿ 4 ಸಾವು ಸಂಭವಿಸಿವೆ. ಆ ಪೈಕಿ ಮೈಸೂರು ಅತೀ ಹೆಚ್ಚು 10 ಕೋವಿಡ್ ಸಾವು ಸಂಭವಿಸಿದ ಜಿಲ್ಲೆಯಾಗಿದೆ ಎಂಬ ಮಾಹಿತಿಯನ್ನು ಅವರು ನೀಡಿದ್ದಾರೆ.


ಸಂಗ್ರಹ ಚಿತ್ರ

ಬಹುಸೋಂಕಿನಿಂದ ಸತ್ತವರು: ಈ ಕುರಿತಂತೆ ಮೈಸೂರು ಜಿಲ್ಲೆಯ ಆರೋಗ್ಯಾಧಿಕಾರಿ ಡಾ.ಪಿ.ಸಿ. ಕುಮಾರಸ್ವಾಮಿ ಅವರು, 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ್ದು, ಸಂಸತ್‌ನಲ್ಲಿ ಸಚಿವರು ನೀಡಿರುವ ಮಾಹಿತಿಯಂತೆ ಮೈಸೂರು ಜಿಲ್ಲೆಯಲ್ಲಿ ಸಾವನ್ನಪ್ಪಿದ 10 ಮಂದಿ ಕೋವಿಡ್–19 ಪಾಸಿಟಿವ್ ಕಂಡುಬಂದ ವರ ಪೈಕಿ ಎಲ್ಲರೂ ಬಹುಸೋಂಕಿನಿಂದ ಬಳಲುತ್ತಿದ್ದವರು. ಸಕ್ಕರೆ ಕಾಯಿಲೆ, ಕಿಡ್ನಿ ಸಮಸ್ಯೆ, ಕ್ಯಾನ್ಸರ್‌ನಂತಹ ಹಲವು ಸಮಸ್ಯೆಗಳಿಂದ ಆಸ್ಪತ್ರೆಗೆ ದಾಖಲಾಗಿ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದವರು ಸಾವನ್ನಪ್ಪಿದ್ದಾರೆ ಎಂದು ತಿಳಿಸಿದ್ದಾರೆ.

ಇಂತಹ ರೋಗಿಗಳು ಆರೋಗ್ಯ ಸಮಸ್ಯೆ ತೀವ್ರಗೊಂಡಾಗ ಆಸ್ಪತ್ರೆಗೆ ಬಂದವರಾಗಿದ್ದು, ಅಂತಹವರನ್ನು ಪರೀಕ್ಷಿಸಿದಾಗ ಕೋವಿಡ್–19 ಸೋಂಕಿತ್ತು. ಅವರ ದೇಹದಲ್ಲಿ ರೋಗ ನಿರೋಧಕ ಶಕ್ತಿ ತೀವ್ರ ಕಡಿಮೆಯಾಗಿದ್ದು, ಚಿಕಿತ್ಸೆಗೆ ಸ್ಪಂದಿಸದೆ ಉಸಿರಾಟಕ್ಕೆ ಸಮಸ್ಯೆಯಾಗಿ ಸಾವನ್ನಪ್ಪಿದ್ದಾರೆ. ಸದ್ಯ ಮೈಸೂರಿನಲ್ಲಿ ಕೋವಿಡ್–19 ಲಕ್ಷಣಗಳು ಕಂಡು ಬರುತ್ತಿಲ್ಲವಾದ್ದರಿಂದ ಸಾರ್ವಜನಿಕರು ಆತಂಕಪಡುವ ಅವಶ್ಯಕತೆ ಇಲ್ಲ. ಆದಾಗ್ಯೂ ಮುಂಜಾಗ್ರತಾ ಕ್ರಮವಾಗಿ ಒಳರೋಗಿಗಳಾಗಿ ದಾಖಲಾಗುವ ರೋಗಿಗಳಿಗೆ ಕೆ.ಆರ್.ಆಸ್ಪತ್ರೆ ಹಾಗೂ ಜೆಎಸ್‌ಎಸ್ ಆಸ್ಪತ್ರೆಗಳಲ್ಲಿ ಕೋವಿಡ್ ಪರೀಕ್ಷೆಯನ್ನು ಕಡ್ಡಾಯಗೊಳಿಸಲಾಗಿದೆ ಎಂದು ಡಾ.ಕುಮಾರಸ್ವಾಮಿ ತಿಳಿಸಿದರು.

ಅರ್ಜಿ ಆಹ್ವಾನ

ಮೈಸೂರು, ಡಿ.7–ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ 2024–25ನೇ ಸಾಲಿನ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಪರಿಶಿಷ್ಟ ಪಂಗಡ ಉಪಯೋಜನೆ ಅಡಿಯಲ್ಲಿ 2023ನೇ ಕ್ಯಾಲೆಂಡರ್ ವರ್ಷದಲ್ಲಿ (01–01–2023ರಿಂದ 31–12–2023) ಅಂತರರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಅಧಿಕೃತ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕ್ರೀಡಾಪಟುಗಳಿಗೆ ಪ್ರೋತ್ಸಾಹ ಧನಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಂತರರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಅಧಿಕೃತ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದ ಪರಿಶಿಷ್ಟ ಜಾತಿ ಮತ್ತು ಪಂಗಡದ ಕರ್ನಾಟಕದ ಕ್ರೀಡಾಪಟುಗಳು ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಭರ್ತಿ ಮಾಡಿ ಡಿ.21ರೊಳಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕಚೇರಿಗೆ ಸಲ್ಲಿಸಬಹುದು. ಅರ್ಜಿ ನಮೂನೆ ಮತ್ತು ಮಾಹಿತಿಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯ ನೋಟಿಸ್ ಬೋರ್ಡ್ ಅಥವಾ ದೂ.ಸಂ: 0821–2564179 ಅನ್ನು ಸಂಪರ್ಕಿಸಬಹುದು.

ಸರ್ಕಾರಿ ಆಸ್ಪತ್ರೆಗಳಲ್ಲಿ ಗೃಹಲಕ್ಷ್ಮಿಯರ ಜೀವಕ್ಕೆ ಗ್ಯಾರಂಟಿಯೇ ಇಲ್ಲ

- ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ತೀವ್ರ ವಾಗ್ದಾಳಿ
- ಸಾವಿನ ಕೂಪಗಳಾಗುತ್ತಿರುವ ಸರ್ಕಾರಿ ಆಸ್ಪತ್ರೆಗಳು: ಕಳವಳ

ಬೆಂಗಳೂರು, ಡಿ.7(ಕೆಎಂಶಿ)– ಬಾಣಂತಿಯರ ಸಾವಿನ ಬಗ್ಗೆ ಸಮಗ್ರ ತನಿಖೆ ಮಾಡಿಸಬೇಕು ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಒತ್ತಾಯಿಸಿದ್ದಾರೆ.



ಈ ಸಂಬಂಧ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಸರ್ಕಾರಿ ಆಸ್ಪತ್ರೆಗಳಲ್ಲಿ ಕಳಪೆ ಔಷಧ ಪೂರೈಕೆ ಆಗುತ್ತಿರುವ ವಿಷಯ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಗಮನಕ್ಕೆ ಬಂದಿರಲಿಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಪ್ರಸಕ್ತ ಸಾಲಿನಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ 327 ಬಾಣಂತಿಯರು ಸಾವನ್ನಪ್ಪಿರುವುದಾಗಿ ಸ್ವತಃ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ನೀಡಿರುವ ಮಾಹಿತಿ ಆಘಾತವುಂಟು ಮಾಡಿದೆ. ವೈದ್ಯ ಕ್ಷೇತ್ರದಲ್ಲಿ ಅಗಾಧ ಮುನ್ನಡೆ ಸಾಧಿಸಿರುವ ಕಾಲದಲ್ಲಿಯೂ ಬಾಣಂತಿಯರು ಆಸ್ಪತ್ರೆಗಳಲ್ಲಿ ಜೀವ ಚೆಲ್ಲುತ್ತಿರುವುದು ಕರ್ನಾಟಕಕ್ಕೆ ಗೌರವ ತರುವ ವಿಚಾರವಲ್ಲ.

ಮಹಿಳೆಯರಿಗೆ ಗೃಹಲಕ್ಷ್ಮಿ ಗ್ಯಾರಂಟಿ ಕೊಟ್ಟು ಆರ್ಥಿಕವಾಗಿ ಸಬಲೀಕರಣ ಮಾಡುತ್ತಿದ್ದೇವೆ ಎಂಬುದಾಗಿ ಕೊಚ್ಚಿಕೊಳ್ಳುವ ಕಾಂಗ್ರೆಸ್ ಸರ್ಕಾರ, ಆಸ್ಪತ್ರೆಗಳಲ್ಲಿ ಗೃಹಲಕ್ಷ್ಮಿಯರ ಜೀವಹರಣ ಮಾಡುತ್ತಿದೆ. ಮಗುವಿಗೆ ಜನ್ಮ ನೀಡುವ ವಿಶ್ವಾಸದಿಂದ ಸರ್ಕಾರಿ ಆಸ್ಪತ್ರೆಗೆ ಸೇರುವ ಗೃಹಲಕ್ಷ್ಮಿಯರು ಜೀವಸಮೇತ ಮರಳಿ ಮನೆಗೆ ಬರುವ ಗ್ಯಾರಂಟಿಯೇ ಇಲ್ಲವಾಗಿದೆ, ಇದೇನಾ ಮಹಿಳೆಯರ ಸಬಲೀಕರಣ. ಸರ್ಕಾರಿ ಆರೋಗ್ಯ ವ್ಯವಸ್ಥೆ ಪೂರ್ಣ ಹದಗೆಟ್ಟಿದೆ, ಆಸ್ಪತ್ರೆಗಳು ಸಾವಿನ ಕೂಪಗಳಾಗಿ ಮಾರ್ಪಡುತ್ತಿವೆ. ಕಳಪೆ ಗ್ಲೂಕೋಸ್, ಔಷಧಗಳಿಗೆ ಗೃಹಲಕ್ಷ್ಮಿಯರು ಬಲಿಯಾಗುತ್ತಿದ್ದಾರೆ, ಬಳ್ಳಾರಿ ಆಸ್ಪತ್ರೆಯಲ್ಲಿ ರಿಂಗರ್ ಲ್ಯಾಕ್ಟೇಟ್ ದ್ರಾವಣ ಪಡೆದ ಎರಡೇ ಗಂಟೆಯಲ್ಲಿ 9 ಬಾಣಂತಿಯರು ಅಸ್ವಸ್ಥರಾಗಿರುವುದು ಕಳವಳಕಾರಿ ವಿಷಯವಾಗಿದೆ, ಈ ದ್ರಾವಣವನ್ನು ಸರ್ಕಾರಿ ಆಸ್ಪತ್ರೆಗಳಿಗೆ ಪೂರೈಕೆ ಮಾಡಿದ ಕಂಪನಿ ಯಾವುದು, ಯಾರದ್ದು ಎಂಬುದನ್ನು ಬಹಿರಂಗಪಡಿಸಬೇಕು. ನನ್ನ ತಪ್ಪಿದ್ದರೆ ರಾಜೀನಾಮೆ ಕೊಡುವೆ ಎಂಬ ಆರೋಗ್ಯ ಸಚಿವರ ಹೇಳಿಕೆ ಅನಪೇಕ್ಷಿತ. ಜವಾಬ್ದಾರಿ ಕೊಟ್ಟಿರುವುದು ಕೈ ತೊಳೆದುಕೊಂಡು ಪಲಾಯನ ಮಾಡಲು ಅಲ್ಲ, ರೋಗಗ್ರಸ್ತ ಆರೋಗ್ಯ ಇಲಾಖೆಗೆ ಸೂಕ್ತ ಚಿಕಿತ್ಸೆ ನೀಡುವ ಮೂಲಕ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು, ಗೃಹಲಕ್ಷ್ಮಿಯರ ಶಾಪ ಸುಮ್ಮನೆ ಬಿಡುವುದಿಲ್ಲ. ಸರ್ಕಾರಿ ಆಸ್ಪತ್ರೆಗಳಲ್ಲಿ ಬಾಣಂತಿಯರ ಮರಣ ಪ್ರಕರಣಗಳಿಂದ ನುಣುಚಿಕೊಳ್ಳಲು ಸಾಧ್ಯವಿಲ್ಲ. ಹದಗೆಟ್ಟ ಆರೋಗ್ಯ ವ್ಯವಸ್ಥೆಯನ್ನು ಹಳಿಗೆ ತರುವ ಕೆಲಸ ತುರ್ತಾಗಿ ಆಗಬೇಕು ಎಂದು ಒತ್ತಾಯಸಿದ್ದಾರೆ.

ತುರ್ತು ಪರಿಸ್ಥಿತಿಯು ಸಂವಿಧಾನದ ಮೂಲಭೂತ ತತ್ವಾದರ್ಶಗಳಿಗೆ ಕೊಟ್ಟ ಬಹುದೊಡ್ಡ ಕೊಡಲಿ ಪೆಟ್ಟು

ಸಂವಿಧಾನ ದಿನಾಚರಣೆಯಲ್ಲಿ ಹಿರಿಯ ನ್ಯಾಯವಾದಿ ಕೆ.ಆರ್.ಶಿವಶಂಕರ್ ಬೇಸರ


ಮೈಸೂರಿನ ನೇಗಿಲಯೋಗಿ ಸೇವಾ ಭವನದಲ್ಲಿ ಸಂವಿಧಾನ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾರತಾಂಬೆ ಹಾಗೂ ಡಾ.ಅಂಬೇಡ್ಕರ್ ಫೋಟೋಗಳಿಗೆ ಪುಷ್ಪ ನಮನ ಸಲ್ಲಿಸಲಾಯಿತು.

ಮೈಸೂರು,ಡಿ.7(ಪಿಎಂ)– ದೇಶದಲ್ಲಿ ಹೇರಿದ್ದ ತುರ್ತು ಪರಿಸ್ಥಿತಿಯು ಸಂವಿಧಾನದ ಮೂಲಭೂತ ತತ್ವಾದರ್ಶಗಳಿಗೆ ಕೊಟ್ಟ ಬಹುದೊಡ್ಡ ಕೊಡಲಿ ಪೆಟ್ಟು ಎಂದು ಹಿರಿಯ ನ್ಯಾಯವಾದಿ ಕೆ.ಆರ್. ಶಿವಶಂಕರ್ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಜಯನಗರದ ನೇಗಿಲಯೋಗಿ ಸೇವಾ ಭವನದಲ್ಲಿ ಅಧಿವಕ್ತ ಪರಿಷತ್ ಕರ್ನಾಟಕ ದಕ್ಷಿಣ ಮೈಸೂರು ಘಟಕ ಹಾಗೂ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಜಂಟಿ ಆಶ್ರಯದಲ್ಲಿ 75ನೇ ವರ್ಷದ ಸಂವಿಧಾನ ದಿನಾಚರಣೆ ಅಂಗವಾಗಿ ಭಾರತ ಸಂವಿಧಾನ ಉಲ್ಲಂಘಿಸಿದ ಕರಾಳ ದಿನಗಳು (ತುರ್ತು ಪರಿಸ್ಥಿತಿ ಅವಧಿ) ಕುರಿತು ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

1975ರಲ್ಲಿ ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಣೆ ಮಾಡಲಾಯಿತು. ಆಗ ಇಪ್ಪತ್ತೊಂದು ತಿಂಗಳು ದೇಶ ದುಸ್ಥಿತಿಯಲ್ಲಿತ್ತು. ಹೀಗೆ ನಿಂತು ಮಾತನಾಡುವ ಪರಿಸ್ಥಿತಿಯೇ ಇರಲಿಲ್ಲ. ಹಲವಾರು ರಾಷ್ಟ್ರ ನಾಯಕರನ್ನು ಬಂಧಿಸಿ, ಮಾಧ್ಯಮಗಳ ಮೇಲೆ ನಿರ್ಬಂಧ ವಿಧಿಸಲಾಯಿತು. ಈ ಅವಧಿಯು ಭಾರತ ಸಂವಿಧಾನದ ಕರಾಳ ದಿನಗಳಾಗಿದ್ದವು ಎಂದು ಅವರು ವಿಷಾದಿಸಿದರು.

ತುರ್ತು ಪರಿಸ್ಥಿತಿ ಕಾರಣಕ್ಕೆ ಬೆಲೆತೆತ್ತು ಇಂದಿರಾ ಗಾಂಧಿ ಮುಂದೆ ಅಧಿಕಾರ ಕಳೆದುಕೊಳ್ಳಬೇಕಾಯಿತು. ಮೊರಾರ್ಜಿ ದೇಸಾಯಿ ಸರ್ಕಾರದ ಅವಧಿಯ 1979ರಲ್ಲಿ ತುರ್ತು ಪರಿಸ್ಥಿತಿ ಘೋಷಣೆಗೆ ಮತ್ತೊಮ್ಮೆ ಅವಕಾಶವೇ ಆಗದಂತೆ ಸಂವಿಧಾನಕ್ಕೆ 44ನೇ ತಿದ್ದುಪಡಿ ತರಲಾಯಿತು. ನಾವಿಂದು ಇಲ್ಲಿ ನಿಂತು ಸಂವಿಧಾನ ದಿನದ ಆಚರಣೆ ಮಾಡುತ್ತಿದ್ದೇವೆ ಎಂದರೆ ಅದಕ್ಕೆ ಈ 44ನೇ ತಿದ್ದುಪಡಿ ಕಾರಣ. ಈ ತಿದ್ದುಪಡಿ ನಂತರದಲ್ಲಿ ಸಂವಿಧಾನ ಉಲ್ಲಂಘನೆಗೆ ಅವಕಾಶ ಆಗದಂತೆ ಸಾಕಷ್ಟು ಪರಿವರ್ತನೆಗಳಾಯಿತು. ಈಗ ಕಳೆದ 11 ವರ್ಷಗಳಿಂದ ಭಾರತೀಯರು ಸುರಕ್ಷಿತವಾಗಿದ್ದೇವೆ. ಪ್ರಜೆಗಳ ಹಕ್ಕುಗಳು ಸಂರಕ್ಷಿಸಲ್ಪಟ್ಟಿವೆ ಎಂದು ತಿಳಿಸಿದರು.

ಸಂವಿಧಾನದ ಬಗ್ಗೆ ಕ್ಷುಲ್ಲಕವಾಗಿ ಮಾತನಾಡುವವರಿಗೆ ವಕೀಲರಾದ ನಾವು ತಕ್ಕಉತ್ತರ ನೀಡಬೇಕು. ಸಂವಿಧಾನದ ಬಗ್ಗೆ ಸಣ್ಣದಾಗಿ ಮಾತನಾಡಲು ಯಾರಿಗೂ ಅವಕಾಶ ನೀಡಬಾರದು. ವಾಗ್ವಾದಕ್ಕೆ ಇಳಿದಾದರೂ ಸಂವಿಧಾನದ ಬಗ್ಗೆ ಕೇವಲವಾಗಿ ಮಾತನಾಡದಂತೆ ತಡೆಯಬೇಕು. ಸಂವಿಧಾನದ ಮಹತ್ವವನ್ನು ನಾವು ಎಷ್ಟು ಜನಕ್ಕೆ ತಿಳಿಸಲು ಸಾಧ್ಯವೋ ಅಷ್ಟು ಜನಕ್ಕೆ ತಿಳಿಸಬೇಕು. ಡಾ.ಅಂಬೇಡ್ಕರ್ ಅವರ ಕೊಡುಗೆ ಸ್ಮರಿಸಬೇಕು ಎಂದು ಸಲಹೆ ನೀಡಿದರು.

ಇದಕ್ಕೂ ಮುನ್ನ ಮಾತನಾಡಿದ ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ನಮ್ಮ ವಕೀಲರ ಸಮುದಾಯದಲ್ಲಿ ಸಂಘಟನೆ ಕೊರತೆ ಇದೆ. ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರಾಗಿರುವ ಹಿಂದೂಗಳ ಮೇಲೆ ನಡೆದ ದೌರ್ಜನ್ಯ ಖಂಡಿಸಲು ನಮ್ಮ ಸಂಘದಿಂದ ಹಮ್ಮಿಕೊಂಡಿದ್ದ ಪ್ರತಿಭಟನೆಗೆ ಕೋರಮ್ ಇರಲೇ ಇಲ್ಲ. ಇದೇ ರೀತಿಯಲ್ಲಿ ಸಂಘಟನೆ ಇಲ್ಲದ ಕಾರಣಕ್ಕೆ ದೇಶದಲ್ಲಿ ತುರ್ತು ಪರಿಸ್ಥಿತಿ ಬಂದಿತ್ತು ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಅಧಿವಕ್ತ ಪರಿಷತ್ ಮೈಸೂರು ಅಧ್ಯಕ್ಷೆ ವಿ.ಶಾರದಾ, ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಡಿ.ರವಿಕುಮಾರ್ ಮತ್ತಿತರರು ಹಾಜರಿದ್ದರು.

ನಾಳೆಯಿಂದ ಪಾಲಿಕೆ ಪ್ರಧಾನ ಕಚೇರಿ ತಾರಸಿ ರಿಪೇರಿ ಕಾಮಗಾರಿ ಆರಂಭ

ಮೈಸೂರು,ಡಿ.7(ಆರ್‌ಕೆ)–ಶಿಥಿಲಗೊಂಡು ಸೋರುತ್ತಿದ್ದ ಮೈಸೂರು ಮಹಾನಗರ ಪಾಲಿಕೆ ಪ್ರಧಾನ ಕಚೇರಿ ತಾರಸಿ ದುರಸ್ತಿ ಕಾಮಗಾರಿ ಡಿಸೆಂಬರ್ 9 (ಸೋಮವಾರ)ರಿಂದ ಆರಂಭವಾಗಲಿದೆ.



ಸಯ್ಯಾಜಿರಾವ್ ರಸ್ತೆಯ ಪಾಲಿಕೆ ಕಚೇರಿಯ ಪಾರಂಪರಿಕ ಕಟ್ಟಡದ ತಾರಸಿಯಲ್ಲಿ ಮಳೆ ನೀರು ಸರಾಗವಾಗಿ ಹರಿದುಹೋಗಲು ವ್ಯವಸ್ಥೆ ಇಲ್ಲದ ಕಾರಣ, ಇತ್ತೀಚೆಗೆ ಸುರಿದ ಮಳೆಯಿಂದ ಮೊದಲ ಮಹಡಿ ಆಯುಕ್ತರ ಕಚೇರಿ ಸೇರಿದಂತೆ ಎಲ್ಲಾ ವಿಭಾಗಗಳ ಕಚೇರಿಯಲ್ಲಿ ನೀರು ಸುರಿದು ತೊಂದರೆಯಾಗಿತ್ತು. ಈ ಪಾರಂಪರಿಕ ಕಟ್ಟಡದ ತಾರಸಿಯನ್ನು ಅದೇ ವಿನ್ಯಾಸದಲ್ಲಿ ರಿಪೇರಿ ಮಾಡಿ ಮಳೆ ನೀರು ಹರಿದು ಹೋಗಲು ಪೈಪ್‌ಗಳನ್ನು ಅಳವಡಿಸುವ ಕಾಮಗಾರಿಗೆ ಪಾರಂಪರಿಕ ಇಲಾಖೆಯಿಂದ ಅನುಮತಿ ಪಡೆದು ಎಸ್ಟಿಮೇಟ್‌ನೊಂದಿಗೆ 80 ಲಕ್ಷ ರೂ.ಗಳಿಗೆ ಡಿಪಿಆರ್ ತಯಾರಿಸಿ ಪಾಲಿಕೆಯು ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿದ್ದು, ಅಶೋಕ್‌ಕುಮಾರ್ ಎಂಬುವರಿಗೆ ಕಾರ್ಯಾದೇಶ ನೀಡಿ, ಕಾಮಗಾರಿ ವಹಿಸಲಾಗಿದೆ.

ಪಾರಂಪರಿಕ ಶೈಲಿಯಲ್ಲಿ ಸುಣ್ಣ ಅರೆದು ಕೆಲಸ ಮಾಡಬೇಕಾಗಿರುವುದರಿಂದ ರಾಜಸ್ತಾನದ ಜೋದ್‌ಪುರ್‌ನಿಂದ ನಿರ್ಮಾಣ ಪರಿಕರ ತರಬೇಕಾಗಿದೆ. ಅಲ್ಲದೇ ಕೌಶಲವುಳ್ಳ ಕಾರ್ಮಿಕರನ್ನು ಜಾರ್ಖಂಡ್‌ನಿಂದ ಕರೆತರಬೇಕಾಗಿರುವ ಕಾರಣ ಕಾಮಗಾರಿ ಆರಂಭಿಸುವುದು ತಡವಾಗಿದೆ ಎಂದು ಗುತ್ತಿಗೆದಾರ ಅಶೋಕ್‌ಕುಮಾರ್ ತಿಳಿಸಿದ್ದಾರೆ.

ಇದೀಗ ಪಾಲಿಕೆ ಕಚೇರಿ ಆವರಣದಲ್ಲಿ ಸುಣ್ಣ ಅರೆಯುವ ಯಂತ್ರ ಇರಿಸಿ ಇತರ ಸಲಕರಣೆಗಳನ್ನು ಹಾಕಿದ್ದೇವೆ. ನಾಳೆ ಸುಣ್ಣವೂ ಬರುವುದರಿಂದ ಸೋಮವಾರದಿಂದ ಕೆಲಸ ಆರಂಭಿಸಿ ನಿಗದಿಯಂತೆ 6 ತಿಂಗಳೊಳಗಾಗಿ ಪೂರ್ಣಗೊಳಿಸುತ್ತೇವೆ ಎಂದು ತಿಳಿಸಿದ್ದರು. ಕಚೇರಿಯ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದ ಪ್ಲಾಸ್ಟರ್ ಆಫ್ ಪ್ಯಾರಿಸ್ ಸೀಲಿಂಗ್ ಸಹ ಕಳಚಿ ಬಿದ್ದಿತ್ತು. ಪಾಲಿಕೆ ಅಧಿಕಾರಿಗಳು ತಕ್ಷಣವೇ ಅದನ್ನು ರಿಪೇರಿ ಮಾಡಿಸಿದ್ದಾರೆ.

ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ


ಇತ್ತೀಚೆಗೆ ಬೆಂಗಳೂರಿನ ಜ್ಞಾನಭಾರತಿ ವಿಶ್ವವಿದ್ಯಾನಿಲಯದ ಪ್ರೊ.ಕೆ.ವೆಂಕಟಗಿರಿಗೌಡ ಸ್ಮಾರಕ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಮೈಸೂರಿನ ವಿಜಯನಗರದಲ್ಲಿರುವ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಕನ್ನಡ ಅಧ್ಯಾಪಕ ನಂದೀಶ ಬಿ.ಹದಿನಾರು ಅವರಿಗೆ ಕರ್ನಾಟಕ ರಾಜ್ಯ ಖಾಸಗಿ ಶಾಲಾ ಶಿಕ್ಷಕರ ಸಂಘವು ರಾಜ್ಯಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ನೀಡಿ, ಸನ್ಮಾನಿಸಲಾಯಿತು.

ಇಂದು ಥಾಮಸ್ ಕುಕ್‌ನಿಂದ ಬೃಹತ್ ಟ್ರಾವೆಲ್ ಮೇಳ

ಮೈಸೂರು, ಡಿ.7–ಭಾರತದ ಪ್ರಮುಖ ಟ್ರಾವೆಲ್ಸ್ ಸರ್ವಿಸ್ ಸಂಸ್ಥೆ ಇಂಡಿಯಾ ಲಿಮಿಟೆಡ್ ವತಿಯಿಂದ ಭಾನುವಾರ(ಡಿ.8) ಮೈಸೂರಿನ ವಿವಿ ಮೊಹಲ್ಲಾದಲ್ಲಿರುವ ಹೋಟೆಲ್ ರೂಪ ಎಲೈಟ್‌ನಲ್ಲಿ ಬೃಹತ್ ಟ್ರಾವೆಲ್ ಮೇಳ ಆಯೋಜಿಸಲಾಗಿದೆ.

ಬೆಳಗ್ಗೆ 10 ಗಂಟೆಯಿಂದ ಸಂಜೆ 6 ರವರೆಗೆ ನಡೆಯುವ ಈ ಹಾಲಿಡೇ ಕಾರ್ನಿವಲ್ ಬೃಹತ್ ಟ್ರಾವೆಲ್ ಮೇಳದಲ್ಲಿ ಮುಂಚಿತವಾಗಿ ಬುಕ್ ಮಾಡಿ ಕೊಡುಗೆಗಳನ್ನು ಪಡೆಯಬಹುದು. ಪ್ರತಿ ಕುಟುಂಬಕ್ಕೆ 70,000 ರೂಪಾಯಿವರೆಗೆ ಅರ್ಲಿಬರ್ಡ್ ಡಿಸ್ಕೌಂಟ್ ಇರಲಿದೆ.

ಯುರೋಪಿಯನ್ ಸಕ್ಸ್ಟ್ರ ವೇಕೆಂಸ, ಗ್ರಾಂಡ್ ಬಾರ್ಗೇನ್ ಟೂರ್ ಆಫ್ ಯೂರೋಪ್, ಸೆನ್ಸೇಷನಲ್ ಯೂರೋಪ್, ಯುರೋಪಿಯನ್ ಎಕ್ಸ್‌ಪ್ರೆಸ್, ಯುಕೆ ಡಿಲೈಟ್ ಇನ್ನಿತರೆ ಆಯ್ದ ಪ್ಯಾಕೇಜ್‌ಗಳಲ್ಲಿ ಕ್ರೂಸ್ ಪ್ರವಾಸ ಉಚಿತವಾಗಿ ಲಭ್ಯವಿರಲಿದೆ. ಆಯ್ಕೆ ಮಾಡಿದ ಪ್ರವಾಸಗಳಲ್ಲಿ ಸ್ವಿಸ್ ಫ್ರೆಂಚ್ ಮ್ಯಾಜಿಕ್‌ಗೆ ಫ್ರೆಂಚ್ ರಿವೇರಿಯ ಹಾಲಿಡೇ, ಸ್ಪೇನ್ ಮತ್ತು ಪೋರ್ಚುಗಲ್ ಪ್ರವಾಸಕ್ಕೆ ಮುರಕೋ ಹಾಲಿಡೇ, ಪೂರ್ವ ಯುರೋಪ್‌ಗೆ ಬಾಲ್ಕನ್ ಹಾಲಿಡೇ ಉಚಿತವಾಗಿ ದೊರೆಯಲಿದೆ. ಸೂಪರ್ ಸೇವೆಗಳು ಯೂರೋಪಿಯನ್ ಡ್ರೀಮ್ ಮತ್ತು ಗ್ಲಿನ್ಸ್ ಪೂರ್ವ ಯೂರೋಪ್ 1.89 ಲಕ್ಷ ರೂ.ನಿಂದ ಪ್ರಾರಂಭವಾಗುತ್ತದೆ. ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ಜಪಾನ್, ಕೊರಿಯಾ, ದಕ್ಷಿಣ ಅಮೇರಿಕಾ, ಉತ್ತರ ದ್ವೀಪಗಳು, ವಿಯೆಟ್ನಾಂ, ಕಾಂಬೋಡಿಯ, ಶಟ್ರ್ಥಾಲ್ ಏಷ್ಯಾ, ಮಲೇಶಿಯಾ, ಸಿಂಗಾಪೂರ್, ಥೈಲ್ಯಾಂಡ್, ದುಬೈ ಶಾಪಿಂಗ್ ಫೆಸ್ಟಿವಲ್‌ಗೆ ತತ್‌ಕ್ಷಣ ಪ್ರವಾಸ ಕೈಗೊಳ್ಳುವವರಿಗೆ ವಿಶೇಷ ಆಫರ್‌ಗಳು ಲಭ್ಯವಿದೆ.

ಕೊನೇ ಕ್ಷಣದ ಹಾಲಿಡೇ ಪ್ಲಾನ್‌ಗಾಗಿ ಡಿಸೆಂಬರ್ 8ರಂದು ಹೋಟೆಲ್ ರೂಪಾ ಎಲೈಟ್‌ನಲ್ಲಿ ನಡೆಯಲಿರುವ ಹಾಲಿಡೇ ಕಾರ್ನಿವಲ್ ಇಲ್ಲವೇ ಥಾಮಸ್ ಕುಕ್ ಇಂಡಿಯಾ ಲಿಮಿಟೆಡ್, ನಂ.5 ದಿವಾನ್ಸ್ ರೋಡ್, ದೇವರಾಜ ಅರಸ್ ರೋಡ್ ಕ್ರಾಸ್, ಮೈಸೂರು–570001 ಶಾಖೆಯನ್ನು ಸಂಪರ್ಕಿಸಬಹುದು ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ. (ದೂರವಾಣಿ ಸಂಖ್ಯೆ: 9619473026)

ಸರ್ಕಾರಕ್ಕೆ ಶಕ್ತಿ ಇದ್ದರೆ ಮುಡಾದ ಶೇ.50:50 ಅನುಪಾತದ ಎಲ್ಲಾ ನಿವೇಶನಗಳನ್ನು ಹಿಂಪಡೆಯಲಿ

ರಾಜ್ಯ ಸರ್ಕಾರಕ್ಕೆ ಮೈಸೂರು ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ ಸವಾಲು

- ಹಗರಣದ ರೂವಾರಿಗಳಾದ ನಟೇಶ್, ದಿನೇಶ್‌ಕುಮಾರ್ ಮೇಲೆ ಕ್ರಮ ಕೈಗೊಳ್ಳಲು ಹಿಂದೇಟು
- ಮುಡಾ ಹಗರಣದ ಬಗ್ಗೆ ಎಫ್‌ಐಆರ್, ಕ್ರಿಮಿನಲ್ ಕೇಸ್ ದಾಖಲಿಸಿ
- ಸುಳ್ಳು ಮಾಹಿತಿ ಬಗ್ಗೆ ಸದನದಲ್ಲಿ ಪ್ರಸ್ತಾಪ

ಮೈಸೂರು,ಡಿ.7(ಜಿಎ)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ತಮ್ಮ 14 ನಿವೇಶನ ಮುಡಾಕ್ಕೆ ವಾಪಸ್ ನೀಡಿರುವುದು ಮತ್ತು ಸರ್ಕಾರ ದಟ್ಟಗಳ್ಳಿಯ 48 ನಿವೇಶನಗಳನ್ನು ಹಿಂಪಡೆದಿರುವುದು ಸ್ವಾಗತಾರ್ಹ. ಆದರೆ, ರಾಜ್ಯ ಸರ್ಕಾರಕ್ಕೆ ಶಕ್ತಿ ಇದ್ದರೆ ಮುಡಾದಿಂದ 50:50 ಅನುಪಾತದಲ್ಲಿ ಹಂಚಿಕೆ ಆಗಿರುವ 928 ನಿವೇಶನಗಳನ್ನು ವಾಪಸ್ ಪಡೆಯಲಿ ಎಂದು ಮಾಜಿ ಶಾಸಕ ಮತ್ತು ಬಿಜೆಪಿ ನಗರ ಘಟಕದ ಅಧ್ಯಕ್ಷರೂ ಆದ ಎಲ್.ನಾಗೇಂದ್ರ ಸವಾಲು ಹಾಕಿದ್ದಾರೆ.


ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕರು ಮತ್ತು ಬಿಜೆಪಿ ನಗರ ಘಟಕದ ಅಧ್ಯಕ್ಷರೂ ಆದ ಎಲ್.ನಾಗೇಂದ್ರ ಮಾತನಾಡಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರು 14 ನಿವೇಶನಗಳನ್ನು ವಾಪಸ್ ನೀಡಿದ ನಂತರ ದಟ್ಟಗಳ್ಳಿಯಲ್ಲಿ ಅಕ್ರಮವಾಗಿ ಹಂಚಿಕೆ ಆಗಿದ್ದ 48 ನಿವೇಶನಗಳನ್ನು ಸರ್ಕಾರ ವಾಪಸ್ ಪಡೆದಿದೆ. ಆದರೆ, 2023ರ ಅಕ್ಟೋಬರ್‌ನಲ್ಲಿ 50:50 ನಿವೇಶನ ಹಂಚಿಕೆ ನಿಲ್ಲಿಸುವಂತೆ ನಗರಾಭಿವೃದ್ಧಿ ಕಾರ್ಯದರ್ಶಿ ಮುಡಾಕ್ಕೆ ಪತ್ರ ಬರೆದ ನಂತರವೇ ಹೆಚ್ಚು ನಿವೇಶನಗಳು ಹಂಚಿಕೆ ಆಗಿವೆ. ಹೀಗಾಗಿ ಈ ಎಲ್ಲಾ ಸೈಟುಗಳನ್ನು ಹಿಂಪಡೆಯಬೇಕು ಎಂದು ಅವರು ಒತ್ತಾಯಿಸಿದರು.

ಸಚಿವರ ಕುಮ್ಮಕ್ಕು: ಕಾಂಗ್ರೆಸ್ ಸರ್ಕಾರ ಬಂದ ನಂತರವೇ ಇಷ್ಟೆಲ್ಲ ಅಕ್ರಮ ನಡೆದಿದೆ. ಮುಡಾದ ಹಿಂದಿನ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್ ಒಬ್ಬರಿಗೆ ಇಷ್ಟೆಲ್ಲ ಶಕ್ತಿ ಇಲ್ಲ. ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಕುಮ್ಮಕ್ಕಿನಿಂದ ಹಗರಣ ನಡೆದಿದೆ. ಸರ್ಕಾರವೇ ಭ್ರಷ್ಟಾಚಾರದ ಹಿಂದೆ ನಿಂತಿದೆ. ಈ ಹಿನ್ನೆಲೆಯಲ್ಲಿ ಭಯದಿಂದ ದಿನೇಶ್ ಹಾಗೂ ಡಿ.ಬಿ. ನಟೇಶ್ ವಿರುದ್ಧ ಕ್ರಮ ಕೈಗೊಂಡಿಲ್ಲ ಎಂದು ಅವರು ವಾಗ್ದಾಳಿ ನಡೆಸಿದರು.

50:50 ಅನುಪಾತದಲ್ಲಿ ಬಹುತೇಕ ನಿವೇಶನಗಳು ಮಧ್ಯವರ್ತಿಗಳ ಪಾಲಾಗಿವೆ. ನಾಗರಾಜು ಎಂಬುವರಿಗೆ ಮುಡಾ 80 ಸಾವಿರ ಚದರ ಅಡಿ ನಿವೇಶನ ನೀಡಿದ್ದರೂ ಅದರ ಮಾಲೀಕರಿಗೆ ನಿವೇಶನ ಮಂಜೂರಾಗಿರುವುದೇ ಗೊತ್ತಿಲ್ಲ. ಇ.ಡಿ, ಲೋಕಾಯುಕ್ತಕ್ಕೆ ಬರೆದ ಪತ್ರದಲ್ಲಿ ಒಂದು ಸಾವಿರಕ್ಕೂ ಹೆಚ್ಚು ನಿವೇಶನಗಳು ಅಕ್ರಮವಾಗಿ ಹಂಚಿಕೆ ಆಗಿರುವುದಾಗಿ ಹೇಳಿದೆ ಎಂದು ತಿಳಿಸಿದರು.

ಕಾಂಗ್ರೆಸ್ ಹೈಕಮಾಂಡ್ ಭ್ರಷ್ಟಾಚಾರಕ್ಕೆ ಬೆಂಬಲ ಸೂಚಿಸಿ, ಸಿದ್ದರಾಮಯ್ಯ ಮೇಲೆ ಕ್ರಮ ಕೈಗೊಳ್ಳಲು ಹಿಂದೇಟು ಹಾಕಿ ವೀಕ್ ಆಗಿದೆ. ಮತ್ತೊಂದೆಡೆ ಮುಡಾ ಮಾಜಿ ಆಯುಕ್ತರಾದ ದಿನೇಶ ಕುಮಾರ್ ಮತ್ತು ನಟೇಶ್ ವಿರುದ್ಧ ಕ್ರಮ ಕೈಗೊಂಡರೆ ಎಲ್ಲಿ ತಮಗೆ ಸಮಸ್ಯೆ ಆಗುತ್ತದೆಂಯೋ ಎಂಬ ಭಯದಿಂದ ಸರ್ಕಾರ ಅವರಿಬ್ಬರ ವಿರುದ್ಧ ಕ್ರಮ ಕೈಗೊಳ್ಳಲು ಹಿಂದೇಟು ಹಾಕುತ್ತಿದೆ ಎಂದು ಹೇಳಿದರು.

ಕ್ರಿಮಿನಲ್ ಪ್ರಕರಣ ದಾಖಲಿಸಿ: ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಮುಡಾದಲ್ಲಿ ನಿವೇಶನಗಳ ಅಕ್ರಮ ಹಂಚಿಕೆ ವಿಚಾರವಾಗಿ ಮುಡಾ ಪ್ರಭಾರ ಅಧ್ಯಕ್ಷರೂ ಆಗಿರುವ ಜಿಲ್ಲಾಧಿಕಾರಿಗಳು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಬೇಕು. ಕಡತಗಳ ನಾಪತ್ತೆ ವಿರುದ್ಧವೂ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು. ಇನ್ನೂ ಹಲವು ಅಧಿಕಾರಿಗಳನ್ನು ಬಂಧಿಸಬೇಕು. ಮುಡಾದಲ್ಲಿ 50: 50 ಅನುಪಾತದಲ್ಲಿ ಕೇವಲ 129 ಜನರಿಗೆ ಬದಲಿ ನಿವೇಶನ ನೀಡಲಾಗಿದೆ ಎಂದು ಸರ್ಕಾರ ವಿಧಾನ ಸಭೆಯಲ್ಲಿ ನನ್ನ ಪ್ರಶ್ನೆಗೆ ಉತ್ತರ ನೀಡಿದೆ. ಈ ಹಂಚಿಕೆಯಲ್ಲೂ ಲೋಪ ಕಂಡುಬಂದಿದೆ. ಸೋಮವಾರದಿಂದ ನಡೆಯಲಿರುವ ಅಧಿವೇಶನದಲ್ಲಿ ಈ ಬಗ್ಗೆ ಧ್ವನಿ ಎತ್ತುತ್ತೇವೆ ಎಂದು ಹೇಳಿದರು.

ರಾಜ್ಯ ಸರ್ಕಾರ ಅಲ್ಪಸಂಖ್ಯಾತರ ಓಲೈಕೆ ಮಾಡಲು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಿಗೆ ಅನುದಾನ ನೀಡಬೇಕಾದರೆ ಶೇ.85ರಷ್ಟು ಅಲ್ಪಸಂಖ್ಯಾತರು ದಾಖಲಾಗಿರಬೇಕು ಎನ್ನುವ ನಿಯಮವನ್ನು ಸರ್ಕಾರ ಶೇ.50ಕ್ಕೆ ಇಳಿಸಿದೆ ಎಂದು ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಕಿಡಿಕಾರಿದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ಗ್ರಾಮಾಂತರ ಘಟಕದ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮುಖಂಡರಾದ ಕೇಬಲ್ ಮಹೇಶ್, ಮಹೇಶ್ ರಾಜೆ ಅರಸ್, ಮೋಹನ್, ಗಿರಿಧರ್ ಮತ್ತಿತರರು ಉಪಸ್ಥಿತರಿದ್ದರು.

ಬಾಣಂತಿಯರ ಡೆತ್ ಆಡಿಟ್ ಆಗಲಿ

> ರಾಜ್ಯದಲ್ಲಿ ಕಳೆದ ಒಂದು ವರ್ಷದಲ್ಲಿ 280 ಬಾಣಂತಿಯರು ಹಾಗೂ 100 ನವಜಾತ ಶಿಶುಗಳು ಮೃತಪಟ್ಟಿವೆ ಇದರ ಡೆತ್ ಆಡಿಟ್ ನಡೆಸಬೇಕು. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹಾಗೂ ಸರ್ಕಾರದ ವಿರುದ್ಧ ಬಿಜೆಪಿ ದೂರು ದಾಖಲಿಸಲಿದ್ದು, ಸದನದ ಒಳಗೂ ಮತ್ತು ಹೊರಗೂ ಹೋರಾಟ ನಡೆಸಲಾಗುವುದು. ಈ ಹಿನ್ನೆಲೆಯಲ್ಲಿ ಬಿಜೆಪಿ ಸತ್ಯಶೋಧನ ಸಮಿತಿಯು ಭಾನುವಾರ ಬಳ್ಳಾರಿಗೆ ಭೇಟಿ ನೀಡಿ, ಪರಿಶೀಲಿಸಲಿದೆ. **–ಎಂ.ಜಿ.ಮಹೇಶ್, ಬಿಜೆಪಿ ರಾಜ್ಯ ವಕ್ತಾರ**

ಒಂದನೇ ಪುಟದಿಂದ

ರಾಜಕೀಯದ ಕೊನೆಗಾಲದಲ್ಲಿದ್ದೇನೆ

ಸಂವಿಧಾನದ ಮೂಲಕ ಅಂತಹ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಹೀಗಾಗಿ ಈಗ ಎಲ್ಲರೂ ಶಿಕ್ಷಣ ಪಡೆದು ಸ್ವಾಭಿಮಾನದಿಂದ ಬದುಕಲು ಸಾಧ್ಯವಾಗುತ್ತಿದೆ. ನಾನು ವಿದ್ಯಾವಂತನಾಗದಿದ್ದರೆ ಮುಖ್ಯಮಂತ್ರಿ ಯಾಗಲು ಸಾಧ್ಯವಿರಲಿಲ್ಲ ಎಂದರು. ಈ ಗ್ರಾಮದಲ್ಲಿ ಹುಟ್ಟಿದ ಮರಿಸ್ವಾಮಿಯವರು ಕಷ್ಟಪಟ್ಟು ವಿದ್ಯಾವಂತರಾಗಿ ಐಪಿಎಸ್ ಅಧಿಕಾರಿ ಯಾಗಿ ಉನ್ನತ ಹುದ್ದೆಗಳನ್ನು ನಿಭಾಯಿ ಸುವ ಮೂಲಕ ನಿಮ್ಮ ಗ್ರಾಮಕ್ಕೆ ಹೆಮ್ಮೆ ತಂದಿದ್ದಾರೆ. ಸಮಾಜದಲ್ಲಿ ನಾವು ಮುಂದುವರೆದರೆ ಬೇರೆಯವರನ್ನೂ ಮುಂದಕ್ಕೆ ತರಬೇಕು. ಆಗ ಮಾತ್ರ ಸಮ ಸಮಾಜ ನಿರ್ಮಾಣ ಸಾಧ್ಯ. ಅದನ್ನು ಪಾಲಿಸುತ್ತಿರುವ ಮರಿಸ್ವಾಮಿ ಅವರು, ಗ್ರಾಮಸ್ಥರನ್ನು ಸೇರಿಸಿಕೊಂಡು 2 ಕೋಟಿಗೂ ಹೆಚ್ಚು ಹಣ ಖರ್ಚು ಮಾಡಿ ಗ್ರಂಥಾಲಯ, ಪ್ರಯೋಗಾಲಯ ಸೇರಿದಂತೆ ಎಲ್ಲಾ ಸೌಲಭ್ಯವುಳ್ಳ ಈ ಸರ್ಕಾರಿ ಶಾಲೆಯನ್ನು ನಿರ್ಮಿಸಿದ್ದಾರೆ. ಇದರ ಸದುಪಯೋಗಪಡಿಸಿಕೊಂಡು ಎಲ್ಲರೂ ವಿದ್ಯಾವಂತರಾಗಲೇಬೇಕು. ಸ್ವಾಭಿಮಾನದಿಂದ ಬದುಕಬೇಕು ಎಂದು ಕರೆ ನೀಡಿದರು. ಮರಿಸ್ವಾಮಿಯವರು ಮಾಡಿದಂತೆಯೇ ಶಿಕ್ಷಣ ಕಲಿತು ಸಮಾಜದಲ್ಲಿ ಮೇಲಕ್ಕೇರಿರುವವರು ಕನಿಷ್ಠ ಅವರ ಸ್ವಗ್ರಾಮದಲ್ಲಾದರೂ ಇತರರು ಮುಂದೆ ಬರಲು ಇಂತಹ ಕಾರ್ಯಗಳನ್ನು ಮಾಡಬೇಕು ಎಂದು ಮನವಿ ಮಾಡಿದರು.

ನಮ್ಮ ಕಾಲದಲ್ಲಿ ಶಾಲೆಗೆ ಹೋಗಿ ಶಿಕ್ಷಣ ಪಡೆಯಲು ಬಹಳ ಕಷ್ಟವಿತ್ತು. ಕಾಲಿಗೆ ಚಪ್ಪಲಿಯೂ ಇರಲಿಲ್ಲ. ಅದನ್ನು ಮನಗಂಡು ನಾನು ಮೊದಲ ಬಾರಿಗೆ ಮುಖ್ಯಮಂತ್ರಿಯಾದಾಗ ಸರ್ಕಾರಿ ಶಾಲೆ ಮಕ್ಕಳಿಗೆ ಪುಸ್ತಕ, ಶೂ-ಸಾಕ್ಸ್, ಸಮವಸ್ತ್ರ ಕೊಡುವ ಕೆಲಸ ಮಾಡಿದ್ದೆ. ಈಗ ಸರ್ಕಾರದಿಂದ ಬಿಸಿ ಊಟ, ಮೊಟ್ಟೆ, ಹಾಲು, ಚಿಕ್ಕಿ, ಮಾಲ್ಟ್ ಎಲ್ಲಾ ಸೌಲಭ್ಯವನ್ನೂ ಕೊಡುತ್ತಿದ್ದೇವೆ. ಹಾಗಿರುವಾಗ ಓದಿ ಮುಂದಕ್ಕೆ ಬರಲು ನಿಮಗೇನು ಕಷ್ಟ ಎಂದು ವಿದ್ಯಾರ್ಥಿಗಳನ್ನುದ್ದೇಶಿಸಿ ತುಸು ಕಟುವಾಗಿಯೇ ಪ್ರಶ್ನಿಸಿದರು.

ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್, ಸಮಾಜ ಕಲ್ಯಾಣ ಇಲಾಖೆ ಸಚಿವ ಹೆಚ್.ಸಿ.ಮಹದೇವಪ್ಪ, ಶಿಕ್ಷಣ ಸಚಿವ ಮಧುಬಂಗಾರಪ್ಪ, ಶಾಸಕರಾದ ಎಂ.ಆರ್.ಮಂಜುನಾಥ, ಸಿ.ಪುಟ್ಟರಂಗ ಶೆಟ್ಟಿ, ಎ.ಆರ್.ಕೃಷ್ಣ ಮೂರ್ತಿ, ಮಾಜಿ ಶಾಸಕರಾದ ಎ.ನಂಜುಂಡಸ್ವಾಮಿ, ಆರ್.ನರೇಂದ್ರ, ಮಾಜಿ ಸಚಿವಲಿಂಗಯ್ಯ, ಕಾಡಾ ಅಧ್ಯಕ್ಷ ಮರಿಸ್ವಾಮಿ ಉಪಸ್ಥಿತರಿದ್ದರು.

ಯತ್ನಾಳ್ ವಿಚಾರವಾಗಿ ಕಾಲವೇ ಉತ್ತರಿಸಲಿದೆ

ವಿದ್ಯಮಾನಗಳನ್ನು ಗಂಭೀರವಾಗಿ ಪರಿಗಣಿಸಿದ್ದೇವೆ ಎಂದು ಹೇಳಿದರು. ನೋಟಿಸ್‌ಗೆ ಉತ್ತರ ಕೊಟ್ಟಿರುವ ಕುರಿತು ವರದಿಗಾರರು ಕೇಳಿದ ಪ್ರಶ್ನೆಗೆ, ಯತ್ನಾಳ್ ಉತ್ತರ ಕೊಟ್ಟಿರುವುದು ಇನ್ನೂ ನನ್ನ ಗಮನಕ್ಕೆ ಬಂದಿಲ್ಲ ಎಂದು ಪ್ರತಿಕ್ರಿಯಿಸಿದರು.

ಉಪಸಮರ ಸೋಲಿನ ಸತ್ಯ ಶೋಧನೆ: ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, ಕೋರ್ ಕಮಿಟಿ ಸಭೆಯಲ್ಲಿ ಉಪ ಚುನಾವಣೆಯ ಸೋಲಿನ ಬಗ್ಗೆ ಚರ್ಚೆಯಾಗಿದೆ. ಸಂಡೂರು, ಶಿಗ್ಗಾಂವಿಯ ಸೋಲಿನ ಕುರಿತು ಸತ್ಯ ಸಂಶೋಧನೆಗೆ ತೀರ್ಮಾನ ಆಗಿದೆ. ಮಾಜಿ ಸಿಎಂ ಸದಾನಂದಗೌಡ ಹಾಗೂ ಎನ್ ಮಹೇಶ್ ಅವರ ನೇತೃತ್ವದ ಸಮಿತಿ ರಚನೆ ಮಾಡಿದ್ದೇವೆ. ಇವರಿಬ್ಬರು ಕ್ಷೇತ್ರಕ್ಕೆ ಭೇಟಿ ಕೊಟ್ಟು ಸತ್ಯಶೋದನೆ ಮಾಡಲಿದ್ದಾರೆ ಎಂದರು.

ಸಭೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ, ಪ್ರತಿಪಕ್ಷ ನಾಯಕ ಆರ್.ಅಶೋಕ್, ಮಾಜಿ ಸಿಎಂ ಮತ್ತು ಕೇಂದ್ರೀಯ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಮಾಜಿ ಸಿಎಂ ಡಿ.ವಿ.ಸದಾನಂದ ಗೌಡ, ಸಂಸದ ಗೋವಿಂದ ಕಾರಜೋಳ, ಬಿಜೆಪಿ ಘಟಕದ ಮಾಜಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ಮಾಜಿ ಉಪಮುಖ್ಯಮಂತ್ರಿ ಡಾ. ಸಿ.ಎನ್.ಅಶ್ವತ್ಥನಾರಾಯಣ, ನಿಕಟ ಪೂರ್ವ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮತ್ತು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಉಪಸ್ಥಿತರಿದ್ದರು.

ಎಸ್‌ಟಿಎಸ್, ಹೆಬ್ಬಾರ್ ವಿರುದ್ಧ ಕ್ರಮ ಪ್ರಸ್ತಾಪ

ಶಾಸಕರಾದ ಎಸ್.ಟಿ.ಸೋಮಶೇಖರ್ ಹಾಗೂ ಶಿವರಾಮ್ ಹೆಬ್ಬಾರ್ ವಿಚಾರವೂ ಚರ್ಚೆ ಆಗಿದೆ. ಕಾಂಗ್ರೆಸ್ ಜೊತೆ ಅವರಿಬ್ಬರು ಸಕ್ರಿಯವಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಅದಕ್ಕೆ ಇತಿಶ್ರೀ ಹಾಕಬೇಕೆಂದು ತೀರ್ಮಾನವಾಗಿದೆ. ಪಕ್ಷ ವಿರೋಧಿ ಹೇಳಿಕೆಗಳ ಬಗ್ಗೆಯೂ ಚರ್ಚೆಯಾಗಿದೆ. ಇದೆಲ್ಲದಕ್ಕೂ ತಾರ್ಕಿಕ ಅಂತ್ಯ ಹಾಡಲಾಗುವುದು. ಸೋಮಶೇಖರ್ ಮತ್ತು ಹೆಬ್ಬಾರ್ ಅವರನ್ನು ಸಸ್ಪೆಂಡ್ ಮಾಡಬೇಕೋ ಅಥವಾ ಡಿಸ್ಮಿಸ್ ಮಾಡಬೇಕೋ ಎನ್ನೋದನ್ನು ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳುತ್ತದೆ. ಪಕ್ಷದಲ್ಲಿ ಕೆಲವರ ಹೇಳಿಕೆಗಳ ಬಗ್ಗೆ ಚರ್ಚೆ ಆಗಿದೆ. ಇದನ್ನೂ ಹೈಕಮಾಂಡ್ ಗಮನಕ್ಕೆ ತರಬೇಕು ಎಂದು ಚರ್ಚೆ ಆಗಿದೆ. ಈಗಾಗಲೇ ವಿಚಾರ ಹೈಕಮಾಂಡ್ ಗಮನಕ್ಕೆ ಇದೆ. ಹಾದಿಬೀದಿಯಲ್ಲಿ ಮಾತಾಡುವವರು ಯಾರೇ ಇರಲಿ ಕ್ರಮ ಆಗಬೇಕು. ಹೈಕಮಾಂಡ್ ಏನು ತೀರ್ಮಾನ ತೆಗೆದುಕೊಳ್ಳುತ್ತೋ ನೋಡೋಣ. ಚೆಂಡು ಹೈಕಮಾಂಡ್ ಅಂಗಳದಲ್ಲಿದೆ ಎಂದ ವಿಜಯೇಂದ್ರ, ಶಾಸಕ ಯತ್ನಾಳ್ ಕುರಿತು ಕೇಳಲಾದ ಹಲವು ಪ್ರಶ್ನೆಗೆ ಉತ್ತರಿಸದೇ ಹೊರಟು ಹೋದರು.

ಚಳಿಗಾಲದ ಅಧಿವೇಶನ

ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿಗಾದಿಗಾಗಿ ನಡೆಯುತ್ತಿರುವ ಆಂತರಿಕ ಹಾಗೂ ಬಹಿರಂಗ ಕಚ್ಚಾಟಗಳೂ ಪ್ರತಿಪಕ್ಷಗಳ ವಾಗ್ದಾಳಿಗೆ ವೇದಿಕೆ ಸೃಷ್ಟಿಸುವ ಸಾಧ್ಯತೆ ಇದೆ. ಪ್ರತಿಪಕ್ಷಗಳ ಅಸ್ತ್ರಕ್ಕೆ ಪ್ರತ್ಯಾಸ್ತ್ರ ಬಿಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸಹ ತಯಾರಿ ನಡೆಸಿದ್ದಾರೆ. ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಆಡಳಿತಾವಧಿಯಲ್ಲಿ ನಡೆದಿರುವ ಕೋವಿಡ್ ಹಗರಣ, ಬೋವಿ ಮತ್ತು ಇತರ ನಿಗಮಗಳಲ್ಲಿ ನಡೆದಿರುವ ಅವ್ಯವಹಾರಗಳೂ ಸೇರಿದಂತೆ 19 ಆರೋಪಗಳನ್ನು ಪ್ರಸ್ತಾಪಿಸಿ ಪ್ರತಿಪಕ್ಷ ಬಿಜೆಪಿ ಹಾಗೂ ಆ ಪಕ್ಷದ ಶಾಸಕರು ಮತ್ತು ಮುಖಂಡರ ವಿರುದ್ಧ ಹರಿಹಾಯಲು ಸರ್ಕಾರ ಸಿದ್ಧತೆ ಮಾಡಿಕೊಂಡಿದೆ.

ವಕ್ಫ್ ವಿವಾದ ಮುಂದಿಟ್ಟುಕೊಂಡು ಬಿಜೆಪಿ ಬೀದಿಗಿಳಿಯುತ್ತಿದ್ದಂತೆ ಎಚ್ಚೆತ್ತ ಮುಖ್ಯಮಂತ್ರಿಗಳು, ಅಧಿವೇಶನ ನಡೆಯುವ ಒಂದು ತಿಂಗಳು ಮುನ್ನವೇ ಹಿರಿಯ ಸಚಿವರ ಸಭೆ ಕರೆದು ಪ್ರತಿ ಪಕ್ಷವನ್ನು ಹೇಗೆ ಇಕ್ಕಟ್ಟಿಗೆ ಸಿಲುಕಿಸಬೇಕು ಎಂಬ ಪಾಠ ಮಾಡಿದ್ದರು. ಬಿಜೆಪಿ ಆಡಳಿತದ ವೇಳೆ ನಿಮ್ಮ ಇಲಾಖೆಗಳಲ್ಲಿ ನಡೆದಿರುವ ಬ್ರಹ್ಮಾಂಡ ಭ್ರಷ್ಟಾಚಾರಗಳನ್ನು ಕೆದಕಿ, ದಾಖಲೆ ಸಹಿತ ಸದನದಲ್ಲಿ ಧೈರ್ಯವಾಗಿ ಮಂಡಿಸಿ, ಪ್ರತಿಪಕ್ಷಗಳನ್ನು ಎದುರಿಸಬೇಕು ಎಂದಿದ್ದರು.

ಮುಡಾದಿಂದ 23 ನಿವೇಶನ ಮಂಜೂರು

3 ವಾರದ ಅವಧಿಯೊಳಗೆ ಕಾನೂನು ರೀತ್ಯಾ ಸೂಕ್ತ ನಿರ್ಧಾರವನ್ನು ನಿಯಮಾನುಸಾರವಾಗಿ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆಯೇ ಹೊರತು, ಅರ್ಜಿದಾರರಾದ ಭೂ ಮಾಲೀಕರಿಗಾಗಲೀ, ಅವರ ಜಿಪಿಎ ಪ್ರತಿನಿಧಿಯಾದ ಮಂಜುನಾಥ್ ಅವರಿಗಾಗಲೀ, ಪರಿಹಾರವಾಗಿ ನಿವೇಶನ ನೀಡಬೇಕು ಎಂದು ತಿಳಿಸಿಯೇ ಇಲ್ಲ ಎಂದು ವಿಶ್ಲೇಷಿಸಿದ್ದಾರೆ.

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ಭೂ ಸ್ವಾಧಿನಕ್ಕಾಗಿ ಪರಿಹಾರವಾಗಿ ನಿವೇಶನಗಳ ಹಂಚಿಕೆ) ನಿಯಮ 2009ರ ನಿಯಮ 2(ಸಿ)ರಲ್ಲಿ ಭೂ ಮಾಲೀಕ ಎಂದರೆ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪ್ರಾಧಿಕಾರದೊಂದಿಗೆ ಒಪ್ಪಂದಕ್ಕೆ ಬರುವ ದಿನದಂದು ಭೂಮಿಯ ಹಕ್ಕು ಹೊಂದಿರುವನಾಗಿರಬೇಕು ಎಂದು ಇದೆ. ಈ ನಿಯಮದಂತೆ ರಿಯಲ್ ಎಸ್ಟೇಟ್ ಉದ್ಯಮಿ ಎನ್.ಮಂಜುನಾಥ್ ಭೂ ಮಾಲೀಕನೇ ಅಲ್ಲದಿದ್ದರೂ ಅವರಿಗೆ ಪರಿಹಾರವಾಗಿ ನಿವೇಶನ ನೀಡುವುದು ಕಾನೂನು ಬಾಹಿರ ಎಂದು ತಮ್ಮ ದೂರಿನಲ್ಲಿ ತಿಳಿಸಿದ್ದಾರೆ.

ಮಂಜುನಾಥ್ ಮುಡಾ ಬಡಾವಣೆಗಾಗಿ ಜಮೀನು ಕಳೆದುಕೊಳ್ಳದೇ ಇದ್ದರೂ ಅವರ ಹೆಸರಿಗೆ ಪ್ರಾಧಿಕಾರದ ಅಧಿಕಾರಿಗಳು ಕಾನೂನು ಬಾಹಿರವಾಗಿ ನಿವೇಶನಗಳನ್ನು ನೀಡಿದ ವೇಳೆ ಮಂಜೂರಾತಿ ಮತ್ತು ಕ್ರಯ ಪತ್ರ ನೋಂದಾಯಿಸುವಾಗ ಮಂಜುನಾಥ ಜಿಪಿಎ ಪ್ರತಿನಿಧಿ ಎಂಬ ಮಾಹಿತಿಯನ್ನು ಉದ್ದೇಶಪೂರ್ವಕವಾಗಿ ಮರೆಮಾಚಿದ್ದಾರೆ ಎಂದು ಅವರು ಆರೋಪಿಸಿದ್ದಾರೆ.

ಈ ಪ್ರಕರಣದಲ್ಲಿ ಮುಡಾ ಅಧಿಕಾರಿಗಳು ಮಾತ್ರವಲ್ಲದೆ, ಹೆಚ್ಚುವರಿ ಜಿಲ್ಲಾ ಉಪ ನೋಂದಣಾಧಿಕಾರಿ ಕಾವ್ಯಾ ಕೂಡ ಶಾಮೀಲಾಗಿದ್ದು, ನ್ಯಾಯಾಲಯದ ಆದೇಶದಂತೆ ಮಂಜುನಾಥ್ ಭೂ ಮಾಲೀಕನಲ್ಲ. ಕೇವಲ ಜಿಪಿಎ ಪ್ರತಿನಿಧಿ ಎಂದು ತಿಳಿದಿದ್ದರೂ ಕೂಡ ನೋಂದಣಿ ಮಾಡುವಾಗ ಅದನ್ನು ಮರೆಮಾಚಿದ್ದಾರೆ. ಕೋಟ್ಯಾಂತರ ರೂ. ಮೌಲ್ಯದ ನಿವೇಶನಗಳನ್ನು ಕೇವಲ ತಲಾ 3 ಸಾವಿರ ರೂ.ಗಳಿಗೆ ಮುಡಾದಿಂದ ಕ್ರಯ ಪತ್ರ ಮಾಡಿಕೊಟ್ಟಿದ್ದರೂ ಕೂಡ ನೋಂದಣಾಧಿಕಾರಿಗಳು ಸದರಿ ನಿವೇಶನದ ಮೌಲ್ಯವನ್ನಾಧರಿಸಿ ನೋಂದಣಿ ಶುಲ್ಕವನ್ನು ಪಾವತಿಸಿಕೊಳ್ಳಬೇಕು. ಆದರೆ ಕಾವ್ಯಾ ಅವರು ಕೋಟ್ಯಾಂತರ ರೂ. ಮೌಲ್ಯದ ಪ್ರತಿ ನಿವೇಶನಕ್ಕೂ ಕೇವಲ 600 ರೂ. ಶುಲ್ಕ ಪಾವತಿಸಿಕೊಂಡು ಸರ್ಕಾರಕ್ಕೆ ನಷ್ಟ ಉಂಟು ಮಾಡಿದ್ದಾರೆ.

ನಿವೇಶನಗಳ ಕ್ರಯಪತ್ರಗಳಲ್ಲಿ ಎಲ್ಲಿಯೂ ಭೂ ಮಾಲೀಕರ ಹೆಸರು, ಸ್ವಾಧೀನಪಡಿಸಿಕೊಂಡಿರುವ ಜಮೀನಿನ ವಿವರ ನಮೂದಿಸದೇ ಇರುವುದರಿಂದ ಮುಡಾ ಹಿಂದಿನ ಆಯುಕ್ತ ದಿನೇಶ್ ಕುಮಾರ್ ಅವರು ರಿಯಲ್ ಎಸ್ಟೇಟ್ ಉದ್ಯಮಿ ಮಂಜುನಾಥ್ ಅವರಿಗೆ ಯಾವ ಜಮೀನನ್ನು ಮುಡಾ ಬಡಾವಣೆಗಾಗಿ ಕಳೆದುಕೊಂಡಿದ್ದಕ್ಕೆ ಪರಿಹಾರವಾಗಿ ನಿವೇಶನಗಳನ್ನು ನೀಡಿದ್ದಾರೆ ಎಂಬುದೇ ಯಕ್ಷಪ್ರಶ್ನೆಯಾಗಿದೆ. ಕ್ರಯಪತ್ರದಲ್ಲಿರುವ ಅಂಶಗಳನ್ನು ಗಮನಿಸಿದಾಗ ಭೂಮಿಯೇ ಇಲ್ಲದ ಮಂಜುನಾಥ್ ಅವರಿಗೆ ಪರಿಹಾರವಾಗಿ ಕೋಟ್ಯಾಂತರ ರೂ. ಮೌಲ್ಯದ ನಿವೇಶನಗಳನ್ನು ನೀಡಲಾಗಿದೆ ಎಂಬ ಸಂಶಯ ಎದ್ದು ಕಾಣುತ್ತಿದೆ. ಹೀಗಾಗಿ ಇದರ ಬಗ್ಗೆ ಸಂಪೂರ್ಣ ತನಿಖೆ ನಡೆಸಿ ಮುಡಾ ಹಿಂದಿನ ಆಯುಕ್ತ ದಿನೇಶ್ ಕುಮಾರ್, ನಿವೇಶನ ಪಡೆದಿರುವ ರಿಯಲ್ ಎಸ್ಟೇಟ್ ಉದ್ಯಮಿ ಮಂಜುನಾಥ್ ಹಾಗೂ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು 2023ರ ಅ.11 ರಂದು ಸಾಮಾಜಿಕ ಕಾರ್ಯಕರ್ತ ಕೆ.ಕೃಷ್ಣ ಅವರು ಲೋಕಾಯುಕ್ತರಿಗೆ ನೀಡಿರುವ ದೂರನ್ನು ಉಲ್ಲೇಖಿಸಿ ವಕೀಲ ರವಿಕುಮಾರ್ ಪ್ರಧಾನಿ ಮೋದಿಯವರಿಗೆ ಪತ್ರ ರವಾನಿಸಿದ್ದಾರೆ.

ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಜನರಿಗೆ ಅನುಕೂಲ ಕಲ್ಪಿಸಲು ಹೆಚ್ಚುವರಿ ಪ್ರವೇಶ, ನಿರ್ಗಮನ ವ್ಯವಸ್ಥೆ; ಫ್ಲೈಓವರ್ ನಿರ್ಮಾಣ

- ಸಂಸದ ಯದುವೀರ್ ಮಾಹಿತಿ
- ಪ್ರಯಾಣಿಸಿದ ಅಂತರಕ್ಕೆ ಟೋಲ್ ಪಾವತಿಗೆ ವ್ಯವಸ್ಥೆ
- ಶೀಘ್ರದಲ್ಲೇ ಮೈಸೂರು ವಿಮಾನ ನಿಲ್ದಾಣ ರನ್‌ವೇ ವಿಸ್ತರಣೆ ಕಾರ್ಯ ಆರಂಭ

ಮೈಸೂರು,ಡಿ.7(ಎಸ್‌ಪಿಎನ್)- ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ವಾಹನಗಳ ಸುಗಮ ಸಂಚಾರಕ್ಕಾಗಿ ಹೆಚ್ಚುವರಿ ಪ್ರವೇಶ, ನಿರ್ಗಮನ ಪಾಯಿಂಟ್, ಫ್ಲೈ ಓವರ್ ನಿರ್ಮಾಣಕ್ಕೆ ಕೇಂದ್ರ ಸರ್ಕಾರ ಗ್ರೀನ್ ಸಿಗ್ನಲ್ ನೀಡಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾಹಿತಿ ನೀಡಿದರು.



ಸುದ್ದಿಗೋಷ್ಠಿಯಲ್ಲಿ ಸಂಸದ ಯದುವೀರ್ ಮಾತನಾಡುತ್ತಿರುವುದು

ಮೈಸೂರು ಸಂಸದರ (ಕಾಡಾ) ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇ ಆರಂಭದಲ್ಲಿ (ಮಣಿಪಾಲ್ ಆಸ್ಪತ್ರೆ ಜಂಕ್ಷನ್ ಬಳಿ) ದಿನೇದಿನೆ ವಾಹನಗಳ ದಟ್ಟಣೆ ಹೆಚ್ಚಾಗುತ್ತಿದ್ದು, ಈ ಸ್ಥಳದಲ್ಲಿ ಸುಗಮ ಸಂಚಾರಕ್ಕಾಗಿ ಫ್ಲೈ ಓವರ್ ನಿರ್ಮಾಣ ಮಾಡುವಂತೆ ಸಾರ್ವಜನಿಕರಿಂದ ಒತ್ತಾಯ ಕೇಳಿ ಬಂದ ಹಿನ್ನೆಲೆಯಲ್ಲಿ ಕಾಮಗಾರಿ ಸಂಬಂಧ ಟೆಂಡರ್ ಪ್ರಕ್ರಿಯೆ ಆರಂಭಗೊಂಡಿದೆ ಇನ್ನಾರು ತಿಂಗಳಲ್ಲಿ ಕಾಮಗಾರಿ ಪ್ರಾರಂಭವಾಗಲಿದೆ ಎಂದು ಸಂಸದರು ಭರವಸೆ ನೀಡಿದರು.

ಮೈಸೂರು-ಬೆಂಗಳೂರು ಹೆದ್ದಾರಿಯಲ್ಲಿ ಮಂಡ್ಯದ ಗಣಂಗೂರು ಮತ್ತು ರಾಮನಗರದ ಬಿಡದಿ ಬಳಿ ಎರಡು ಟ್ರೋಲ್‌ಗಳಿವೆ. ಇದರ ಮಧ್ಯೆ ವಾಹನಗಳ ಪ್ರವೇಶ ಮತ್ತು ನಿರ್ಗಮನಕ್ಕೆ ಹೊಸದಾಗಿ 28 ಎಂಟ್ರಿ(ಪ್ರವೇಶ) ಹಾಗೂ ಎಕ್ಸಿಟ್ (ನಿರ್ಗಮನ) ಪಾಯಿಂಟ್ ನಿರ್ಮಾಣವಾಗಲಿವೆ. ಆಗ ವಾಹನ ಸವಾರರು ಹೆದ್ದಾರಿಯಲ್ಲಿ ಎಷ್ಟು ಕಿಲೋ ಮೀಟರ್ ಸಂಚರಿಸುತ್ತಾರೋ ಅಷ್ಟಕ್ಕೆ ಮಾತ್ರ ಶುಲ್ಕ ಪಾವತಿಸಬೇಕಾಗುತ್ತದೆ ಎಂದು ತಿಳಿಸಿದರು.

ರೈಲ್ವೆ ಮೇಲ್ಸೇತುವೆ ನಿರ್ಮಾಣ: 711 ಕೋಟಿ ರೂ. ಅನುದಾನದಲ್ಲಿ ಬಿಡದಿ, ಚನ್ನಪಟ್ಟಣ ಮತ್ತು ಮಂಡ್ಯದಲ್ಲಿ ರೈಲ್ವೆ ಮೇಲ್ಸೇತುವೆ ನಿರ್ಮಾಣ ಮಾಡಲು ರೈಲ್ವೆ ಇಲಾಖೆ ಅನುಮತಿ ನೀಡಿದೆ. ಇದರಿಂದ ರೈಲುಗಳ ಸುಗಮ ಸಂಚಾರ ಹಾಗೂ ಗ್ರಾಮೀಣ ಜನರು ರೈಲ್ವೆ ಜಂಕ್ಷನ್‌ಗಳಲ್ಲಿ ತಡೆ ರಹಿತ ಓಡಾಟಕ್ಕೆ ಅನುಕೂಲವಾಗಲಿದೆ ಎಂದರು.

ಶೇ.80 ರಷ್ಟು ಭೂಮಿ ವಶ: ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣ ಅಭಿವೃದ್ಧಿ ಮತ್ತು ಅದರ ರನ್ ವೇ ವಿಸ್ತರಣೆ ಸಂಬಂಧ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಸಂಸದರು, ವಿಮಾನ ನಿಲ್ದಾಣ ರನ್‌ವೇ ವಿಸ್ತರಣೆಗೆ ಶೇ.80 ರಷ್ಟು ಭೂಮಿಯನ್ನು ರೈತರಿಂದ ವಶ ಪಡಿಸಿಕೊಳ್ಳಲಾಗಿದೆ. ಇನ್ನು 46 ಎಕರೆ ಭೂಮಿ ವಶಪಡಿಸಿಕೊಳ್ಳಬೇಕಿದೆ. ಈ ಪ್ರಕ್ರಿಯೆ ಮುಗಿದ ಬಳಿಕ ರನ್ ವೇ ಕಾಮಗಾರಿಗೆ ಚಾಲನೆ ನೀಡಲಾಗುವುದು. ಇದಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಬಂಧಪಟ್ಟ ಇಲಾಖೆಯೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇನೆ ಎಂದು ತಿಳಿಸಿದರು.

ಅಡೆ-ತಡೆ ನಿವಾರಣೆಗೆ ಕ್ರಮ: ರನ್ ವೇ ವಿಸ್ತರಣೆಗೆ ಅಡ್ಡಿಯಾಗಿರುವ ಮೈಸೂರು-ನಂಜನಗೂಡು ಹೆದ್ದಾರಿ ಸ್ಥಳಾಂತರ, ರೈಲ್ವೆ ಹಳಿಯನ್ನು ಅಂಡರ್ ಪಾಸ್‌ಗೆ ಪರಿವರ್ತಿಸುವ ಕುರಿತು ರೈಲ್ವೆ ಇಲಾಖೆ ತಜ್ಞರ ವರದಿಗಾಗಿ ಕಾಯುತ್ತಿದ್ದೇವೆ. ಅಂತೆಯೇ ಈ ಭಾಗದಲ್ಲಿ ಹಾದು ಹೋಗುವ ವಿದ್ಯುತ್ ತಂತಿಯನ್ನು ಭೂಮಿ ಒಳಭಾಗದಲ್ಲಿ ಇಲ್ಲವೇ ಮೇಲ್ಭಾಗದಲ್ಲಿ ಅಳವಡಿಸಬೇಕೇ ಎಂಬುದರ ಕುರಿತು ಕೆಪಿಟಿಸಿಎಲ್ ವತಿಯಿಂದ ಸಮೀಕ್ಷೆ ನಡೆಸುವ ಕುರಿತು ಅಭಿಪ್ರಾಯ ವ್ಯಕ್ತವಾಗಿದೆ. ಉಡಾನ್ ಯೋಜನೆಯಡಿ ಮೈಸೂರು ವಿಮಾನ ನಿಲ್ದಾಣದಿಂದ ವಿವಿಧೆಡೆಗೆ ಹೆಚ್ಚಿನ ವಿಮಾನಗಳ ಹಾರಾಟಕ್ಕೆ ವಿವಿಧ ಏರ್‌ಲೈನ್ ಸಂಸ್ಥೆಗಳೊಂದಿಗೆ ಹಾಗೂ ಇತರೆ ಸಂಬಂಧಿಸಿದ ಇಲಾಖೆಗಳೊಂದಿಗೂ ಮಾತುಕತೆ ನಡೆಯುತ್ತಿದೆ ಎಂದು ಮಾಧ್ಯಮಗಳಿಗೆ ಉತ್ತರಿಸಿದರು.

ಹಗರಣಗಳ ಕುರಿತು ಸಂಸತ್ತಿನಲ್ಲಿ ಚರ್ಚೆ: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮುಡಾ ಹಗರಣ ಮತ್ತು ವಾಲ್ಮೀಕಿ ಹಗರಣಗಳ ಕುರಿತಾಗಿ ಸಂಸತ್‌ನಲ್ಲಿ ಹಿಂದೆ ವಿಚಾರ ಪ್ರಸ್ತಾಪವಾಗಿತ್ತು. ಇದೀಗ ಮತ್ತೊಮ್ಮೆ ಸಂಸತ್ತಿನಲ್ಲಿ ಗಮನ ಸೆಳೆಯುತ್ತೇನೆ ಎಂದರು.

ರಾಜೀನಾಮೆಗೆ ಆಗ್ರಹ: ಬಳ್ಳಾರಿ ಜಿಲ್ಲೆಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಬಾಣಂತಿಯರ ಸಾವು ಪ್ರಕರಣ ಸಂಬಂಧ ಪತ್ರಕರ್ತರ ಪ್ರಶ್ನೆಗೆ ಪ್ರಕ್ರಿಯೆ ನೀಡಿದ ಸಂಸದರು, ರಾಜ್ಯ ಬಿಜೆಪಿ ಘಟಕ ಹಮ್ಮಿಕೊಳ್ಳುವ ಹೋರಾಟದ ಪರವಾಗಿ ನಿಲ್ಲುತ್ತೇನೆ. ಅಲ್ಲದೆ, ಆರೋಗ್ಯ ಇಲಾಖೆಯನ್ನು ಸಮರ್ಥವಾಗಿ ನಿಭಾಯಿಸದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ರೈತರ ಪರವಾಗಿ ಹಲವು ಯೋಜನೆಗಳು: ದೆಹಲಿಯಲ್ಲಿ ರೈತರ ಪ್ರತಿಭಟನೆ ಕುರಿತು ಸಂಸದರ ಗಮನ ಸೆಳೆದಾಗ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 3ನೇ ಬಾರಿಗೆ ಅಧಿಕಾರ ವಹಿಸಿಕೊಂಡು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕಿಸಾನ್ ಸಮ್ಮಾನ್ ಸೇರಿದಂತೆ ಅನೇಕ ಯೋಜನೆಗಳನ್ನು ರೈತರ ಏಳಿಗೆಗೆ ತಂದಿದ್ದಾರೆ. ಮೈಸೂರು-ಕೊಡಗು ಕ್ಷೇತ್ರದ ಕಾಫಿ, ತಂಬಾಕು ಬೆಳೆಗಾರರ ಸಮಸ್ಯೆ ಇತ್ಯರ್ಥಪಡಿಸಲಾಗಿದೆ. ಹಾಗೆಯೇ ದೆಹಲಿ ರೈತರ ಬೇಡಿಕೆಗಳು ಪ್ರಾಮಾಣಿಕವಾಗಿದ್ದರೆ ಪರಿಶೀಲಿಸಲು ಕೇಂದ್ರ ಸರ್ಕಾರ ಸದಾ ಸಿದ್ಧವಿದೆ ಎಂದರು. ಗೋಷ್ಠಿಯಲ್ಲಿ ಶಾಸಕ ಟಿ.ಎಸ್. ಶ್ರೀವತ್ಸ ಇದ್ದರು.

> ಬಂಡೀಪುರದಲ್ಲಿ ರಾತ್ರಿ ವೇಳೆ ವಾಹನ ಸಂಚಾರಕ್ಕೆ ಅವಕಾಶ ನೀಡಬಾರದು ಎಂಬ ಕೂಗು ಪರಿಸರ ಪ್ರಿಯರಿಂದ ಕೇಳಿಬಂದಿದೆ. ಈ ಬಗ್ಗೆ ಹೈಕೋರ್ಟ್ ಕೂಡ ಮಧ್ಯಪ್ರವೇಶಿಸಿ ವಾಹನಗಳ ರಾತ್ರಿ ಸಂಚಾರಕ್ಕೆ ನಿರ್ಬಂಧ ವಿಧಿಸಿದೆ. ಅಲ್ಲದೆ, ಈ ಹಿಂದೆ ಬಿಜೆಪಿ ಸರ್ಕಾರವಿದ್ದಾಗಲೂ ಕೇರಳ ಸರ್ಕಾರದ ಮಾತಿಗೆ ಮನ್ನಣೆ ನೀಡಿರಲಿಲ್ಲ. ಜತೆಗೆ ಆಗ ವಿಪಕ್ಷ ನಾಯಕರಾಗಿದ್ದ ಸಿದ್ದರಾಮಯ್ಯ ಕೂಡ ರಾತ್ರಿ ವಾಹನ ಸಂಚಾರಕ್ಕೆ ವಿರೋಧ ಮಾಡಿದ್ದರು. ಇದೀಗ ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್, ವಾಹನ ಸಂಚಾರಕ್ಕೆ ಮುಕ್ತಗೊಳಿಸುವ ಪರ ಮಾತನಾಡುವುದರ ಮರ್ಮವೇನು ತಿಳಿಯದು.
> - ಯದುವೀರ್, ಸಂಸದರು

ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಬಿಜೆಪಿ ತಯಾರಿ

ನಂಜನಗೂಡು ವಿಧಾನಸಭಾ ನಗರ ಮಂಡಲದ ಬೂತ್ ಅಧ್ಯಕ್ಷರ ಆಯ್ಕೆ

ಮೈಸೂರು, ಡಿ.7(ಎಂಕೆ)- ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಪೂರ್ವ ತಯಾರಿ ನಡೆಸಿರುವ ಬಿಜೆಪಿ ಮೈಸೂರು ಜಿಲ್ಲಾ ಮತ್ತು ಗ್ರಾಮಾಂತರ ವಿಭಾಗದ ವತಿಯಿಂದ ನಂಜನಗೂಡು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬೂತ್ ಮಟ್ಟದ ಅಧ್ಯಕ್ಷರುಗಳ ಆಯ್ಕೆ ಅಭಿಯಾನ ನಡೆಸಲಾಯಿತು.



ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ನೇತೃತ್ವದಲ್ಲಿ ನಂಜನಗೂಡು ನಗರ ಮಂಡಲದ ಬೂತ್‌ಗಳಿಗೆ ಅಧ್ಯಕ್ಷರುಗಳನ್ನು ಆಯ್ಕೆ ಮಾಡಲಾಯಿತು

ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ನೇತೃತ್ವದಲ್ಲಿ ನಂಜನಗೂಡು ನಗರ ಮಂಡಲದ 34, 35, 36, 37, 41 ಹಾಗೂ 42ನೇ ಬೂತ್‌ಗಳಿಗೆ ಅಧ್ಯಕ್ಷರುಗಳನ್ನು ಆಯ್ಕೆ ಮಾಡಲಾಯಿತು. ಬಳಿಕ ಮಾತನಾಡಿದ ಅವರು, ಬಿಜೆಪಿಯಲ್ಲಿ ಆರು ವರ್ಷಕ್ಕೊಮ್ಮೆ ಸದಸ್ಯತ್ವ ನವೀಕರಣ ಮಾಡುವ ಜೊತೆಗೆ ಹೊಸ ಸದಸ್ಯರ ನೋಂದಣಿ ಕಾರ್ಯಕ್ರಮ ನಡೆಯಲಿದೆ ಎಂದರು.

ಮುಂಬರುವ ಸ್ಥಳಿಯ ಸಂಸ್ಥೆಗಳ ಚುನಾವಣೆಯಲ್ಲಿ ಪಕ್ಷದ ಜನ ಪ್ರತಿನಿಧಿಗಳನ್ನು ಎಲ್ಲಾ ಬೂತ್‌ಗಳಲ್ಲಿಯೂ ಗೆಲ್ಲಿಸುವ ಉದ್ದೇಶದಿಂದ 13 ಜನರ ಒಂದು ಬೂತ್ ಸಮಿತಿ ರಚಿಸಿ, ಆ ಸಮಿತಿಗೆ ಅಧ್ಯಕ್ಷರನ್ನು ನೇಮಕ ಮಾಡುವ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಇದರಿಂದ ಪಕ್ಷ ಸಂಘಟನೆಗೂ ಅನುಕೂಲವಾಗಲಿದೆ. ಹಾಗೆಯೇ ಬೂತ್ ಕಾರ್ಯದರ್ಶಿ, ಪೇಜ್ ಪ್ರಮುಖ್, ಮನ್ ಕಿ ಬಾತ್ ಪ್ರಮುಖ್, ಲಾ ಭಾರತಿ ಪ್ರಮುಖರನ್ನು ನೇಮಿಸಲಾಗುವುದು ಎಂದು ತಿಳಿಸಿದರು.


ಸದ್ಯದಲ್ಲಿಯೇ ಎದುರಾಗುವ ಜಿಪಂ ಮತ್ತು ತಾಪಂ ಚುನಾವಣೆಯಲ್ಲಿ ಬಿಜೆಪಿ ಪಕ್ಷದ ಅಭ್ಯರ್ಥಿಗಳು ಗೆಲ್ಲಲೇಬೇಕು. ಈ ನಿಟ್ಟಿನಲ್ಲಿ ಸದಸ್ಯತ್ವ ಅಭಿಯಾನದಲ್ಲಿ ಭಾಗವಹಿಸುವುದು ಮಾತ್ರವಲ್ಲ ಹೆಚ್ಚಿನ ಸಂಖ್ಯೆ ಜನರನ್ನು ಕಾರ್ಯಕರ್ತರನ್ನಾಗಿ ಮಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಇದೆಲ್ಲವೂ ಸಂಘಟನೆಯ ಒಂದು ಭಾಗವಾಗಿದ್ದು, ಅಂತಿಮ ಫಲಿತಾಂಶ ಗೆಲುವಾಗಿರಬೇಕು ಎಂದು ಹೇಳಿದರು.

ಮಾಜಿ ಶಾಸಕ ಹರ್ಷವರ್ಧನ್ ಮಾತನಾಡಿ, ನಂಜನಗೂಡಿನಲ್ಲಿ 251 ಬೂತ್‌ಗಳಿದ್ದು, ವೈಯಕ್ತಿಕವಾಗಿ ಪ್ರತೀ ಬೂತ್‌ಗಳಿಗೂ ಭೇಟಿ ನೀಡಿ ಸಂಘಟನೆಗೆ ಹೆಚ್ಚಿನ ಗಮನ ನೀಡುತ್ತಿದ್ದೇನೆ. ಇನ್ನೂ ಹೆಚ್ಚಿನ ಸಂಘಟನೆ ಮೂಲಕ ಬಿಜೆಪಿಯ ಗೆಲುವು ಬೂತ್ ಮಟ್ಟದಲ್ಲಿಯೇ ಆರಂಭವಾಗಬೇಕು ಎಂದರು.

ಹೆಚ್ಚಿನ ಅನುದಾನ: ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಅವರ ಆಡಳಿತಾವಧಿಯಲ್ಲಿ ನಂಜನಗೂಡು ವಿಧಾನಸಭಾ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡಲಾಗಿದೆ. ಇಡೀ ದೇಶವೇ ಪ್ರಧಾನಿ ನರೇಂದ್ರ ಮೋದಿಯವರ ಆಡಳಿತ ಒಪ್ಪಿಕೊಂಡಿದೆ. ರಾಜ್ಯಾಧ್ಯಕ್ಷ ವಿಜಯೇಂದ್ರ ಅವರ ನೇತೃತ್ವದಲ್ಲಿ ರಾಜ್ಯಾದ್ಯಂತ ಪಕ್ಷ ಸಂಘಟನೆ ಬಿರುಸಿನಿಂದ ಸಾಗಿದ್ದು, ಮುಂದಿನ ದಿನಗಳಲ್ಲಿ ಬಿಜೆಪಿ ಎಲ್ಲಾ ಚುನಾವಣೆಗಳಲ್ಲಿ ಗೆಲುವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಂಘಟನಾ ಪರ್ವ ವಿಭಾಗ ಸಂಚಾಲಕ ಸಚ್ಚಿದಾನಂದ ಮೂರ್ತಿ, ನಂಜನಗೂಡು ನಗರ ಅಧ್ಯಕ್ಷ ಸಿದ್ದರಾಜು, ನಗರಸಭಾ ಸದಸ್ಯ ಮಹದೇವಪ್ರಸಾದ್, ಗ್ರಾಮಾಂತರ ಅಧ್ಯಕ್ಷ ಕೆಂಡಗಣ್ಣಪ್ಪ, ಜಿಲ್ಲಾ ಉಪಾಧ್ಯಕ್ಷರಾದ ಚಿಕ್ಕರಂಗನಾಯಕ, ಕೃಷ್ಣಪ್ಪ ಗೌಡ, ಸಂಘಟನಾ ಪರ್ವ ಸಹಯೋಗಿ ಪರಿಷತ್‌ನ ರಾಜ್ ಅರಸ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಶ್ ಸೇರಿದಂತೆ ಬೂತ್ ಅಧ್ಯಕ್ಷರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಭಾರಿ ಮರದಕೊಂಬೆ ಬಿದ್ದು ಆಂಬುಲೆನ್ಸ್ ಜಖಂ



ಮೈಸೂರು, ಡಿ.7(ಎಂಕೆ)- ಬೃಹತ್ ಮರದ ಕೊಂಬೆ ಬಿದ್ದು ಖಾಸಗಿ ಆಸ್ಪತ್ರೆಯ ಆಂಬುಲೆನ್ಸ್ ಜಖಂಗೊಂಡಿರುವ ಘಟನೆ ಶನಿವಾರ ನಡೆದಿದೆ. ಮೈಸೂರಿನ ಸರಸ್ವತಿಪುರಂ 14ನೇ ಮುಖ್ಯರಸ್ತೆಯಲ್ಲಿರುವ ಖಾಸಗಿ ಆಸ್ಪತ್ರೆಯ ಸಮೀಪದಲ್ಲಿ ಮರದ ಕೊಂಬೆ ಮುರಿದು ಬಿದ್ದಿದ್ದು, ಮರದ ಕೆಳಗೆ ನಿಲ್ಲಿಸಿದ್ದ ಆಸ್ಪತ್ರೆಯ ಆಂಬುಲೆನ್ಸ್ ಸಂಪೂರ್ಣವಾಗಿ ಜಖಂಗೊಂಡಿದೆ.

ಆಂಬುಲೆನ್ಸ್‌ನಲ್ಲಿ ಯಾರೂ ಇಲ್ಲದೆ ಇದ್ದಿದ್ದರಿಂದ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಇದರಿಂದ ಕೆಲಕಾಲ ರಸ್ತೆ ಸಂಚಾರ ಬಂದ್ ಆಯಿತಲ್ಲದೆ, ಸ್ಥಳೀಯ ನಿವಾಸಿಗಳಲ್ಲಿ ಆತಂಕವೂ ಕಂಡುಬಂದಿತು. ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ನಗರ ಪಾಲಿಕೆ ಅಭಯ-2 ತಂಡದ ಶಿವು, ಆನಂದ, ರಘು, ಪ್ರಸನ್ನ ಮತ್ತು ಇಂದ್ರ ಮುರಿದು ಬಿದ್ದಿದ್ದ ಮರದ ಕೊಂಬೆಯನ್ನು ತೆರವುಗೊಳಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಹಾಲಿನ ಖರೀದಿ ದರ 5 ರೂ. ಏರಿಕೆ ಪ್ರಸ್ತಾವ

ಬೆಂಗಳೂರು: ಹಾಲಿನ ಖರೀದಿ ದರವನ್ನು ಲೀಟರ್‌ಗೆ ರೂ. 5ರಂತೆ ಹೆಚ್ಚಿಸಬೇಕು ಎಂಬ ರೈತರ ಬೇಡಿಕೆಯನ್ನು ಮುಖ್ಯಮಂತ್ರಿ ಎದುರು ಶೀಘ್ರದಲ್ಲೇ ಮಂಡಿಸಲಾಗುವುದು ಎಂದು ಕರ್ನಾಟಕ ಹಾಲು ಮಹಾಮಂಡಳದ (ಕೆಎಂಎಫ್) ಅಧ್ಯಕ್ಷ ಭೀಮಾನಾಯ್ಕ್ ತಿಳಿಸಿದರು.

ಹಿಂದೆ ರಾಮನಗರ ಜಿಲ್ಲೆ ಮಾಗಡಿಯಲ್ಲಿ ಹಾಲಿನ ಖರೀದಿ ದರ ಹೆಚ್ಚಿಸುವಂತೆ ಮುಖ್ಯಮಂತ್ರಿ ಅವರಿಗೆ ರೈತರು ಮನವಿ ಮಾಡಿದ್ದರು. ಆಗ ಸಿ.ಎಂ, ಎಲ್ಲ ಹಾಲು ಮಹಾ ಮಂಡಳ ಒಕ್ಕೂಟಗಳ ಅಧ್ಯಕ್ಷರ ಸಭೆ ಕರೆದು, ಚರ್ಚಿಸಿ ಈ ಬಗ್ಗೆ ತೀರ್ಮಾನಿಸುವುದಾಗಿ ಭರವಸೆ ನೀಡಿದ್ದರು ಎಂದು ಹೇಳಿದರು.

'ರಾಜಮಾತೆ ಕೆಂಪನಂಜಮ್ಮಣ್ಣಿ-ಮಾದರಿ ಮೈಸೂರಿನ ತಾಯಿಬೇರು' ಕೃತಿ ಬಿಡುಗಡೆ

ಕೆಂಪನಂಜಮ್ಮಣ್ಣಿಯವರ ಕೊಡುಗೆ ಸ್ಮರಿಸುವ ಕಾರ್ಯವಾಗಬೇಕು

ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸಲಹೆ

ಮೈಸೂರು,ಡಿ.7(ಪಿಎಂ)- ಮೈಸೂರಿನಲ್ಲಿ ರಾಜಮಾತೆ ಕೆಂಪನಂಜಮ್ಮಣ್ಣಿ ವಾಣಿವಿಲಾಸ ಸನ್ನಿಧಾನ ಅವರ ಪ್ರತಿಮೆ ಸ್ಥಾಪಿಸುವ ಮೂಲಕ ಅವರ ಅಪಾರ ಕೊಡುಗೆ ಸ್ಮರಿಸುವ ಕೆಲಸವಾಗಬೇಕಿದೆ ಎಂದು ಮೈಸೂರು-ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಶ್ರೀ ಜಯಚಾಮರಾಜ ಅರಸು ಎಜುಕೇಷನ್ ಟ್ರಸ್ಟ್, ಅರಸು ಮಂಡಳಿ ಸಂಘ ಮೈಸೂರು ಹಾಗೂ ಅರಸು ಅಸೋಸಿಯೇಷನ್ ಬೆಂಗಳೂರು ಸಂಯುಕ್ತಾಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಡಾ.ಗಜಾನನ ಶರ್ಮ ಅವರ 'ರಾಜಮಾತೆ ಕೆಂಪನಂಜಮ್ಮಣ್ಣಿ-ಮಾದರಿ ಮೈಸೂರಿನ ತಾಯಿ ಬೇರು' ಪುಸ್ತಕ (ಕಾದಂಬರಿ)ಬಿಡುಗಡೆ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ರಾಜಮಾತೆ ಕೆಂಪನಂಜಮ್ಮಣ್ಣಿ-ಮಾದರಿ ಮೈಸೂರಿನ ತಾಯಿಬೇರು' ಪುಸ್ತಕ (ಕಾದಂಬರಿ) ಬಿಡುಗಡೆ ಮಾಡಲಾಯಿತು.

ಕೆಂಪನಂಜಮ್ಮಣ್ಣಿಯವರು ಮಹಿಳಾ ಶಿಕ್ಷಣಕ್ಕೆ ನೀಡಿದ ಕೊಡುಗೆ ಸೇರಿದಂತೆ ಅವರು ಅನುಷ್ಠಾನಗೊಳಿಸಿದ ಹತ್ತು ಹಲವು ಯೋಜನೆಗಳು ಇಂದಿಗೂ ರಾಜ್ಯಕ್ಕೆ ಪ್ರಯೋಜನಕಾರಿಯಾಗಿವೆ. ಹಾಗಾಗಿ ಅವರು ನಿಜಕ್ಕೂ ಸ್ಮರಣೀಯರು. ಮೈಸೂರಿನಲ್ಲಿ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್, ಚಾಮರಾಜ ಒಡೆಯರ್, ಜಯಚಾಮರಾಜ ಒಡೆಯರ್ ಅವರ ಪ್ರತಿಮೆಗಳು ಇವೆ. ಅಂತೆಯೇ ಮೈಸೂರಿನಲ್ಲಿ ವಾಣಿವಿಲಾಸ ಸನ್ನಿಧಾನ ಎಂದೇ ಖ್ಯಾತನಾಮರಾಗಿರುವ ಕೆಂಪನಂಜಮ್ಮಣ್ಣಿಯವರ ಪ್ರತಿಮೆಯೂ ಸ್ಥಾಪನೆಯಾಗಬೇಕಿದೆ. ಇದಕ್ಕಾಗಿ ನಾವೆಲ್ಲರೂ ಕೈಜೋಡಿಸಿ ಅವರ ಪ್ರತಿಮೆ ಸ್ಥಾಪನೆ ಮೂಲಕ ಅವರ ಕೊಡುಗೆ ಸ್ಮರಣೆ ಮಾಡಬೇಕಿದೆ ಎಂದರು.

ರಾಜಮಾತೆಯರ ಕೊಡುಗೆ ಅಪಾರ: ನಮ್ಮ ರಾಜವಂಶ ಇಂದಿಗೂ ಉಳಿದಿದ್ದರೆ ಅದರಲ್ಲಿ ನಮ್ಮ ರಾಜಮಾತೆಯರ ಕೊಡುಗೆ ಅಪಾರವಾಗಿದೆ. ಹೈದರ್, ಟಿಪ್ಪು ಸುಲ್ತಾನ್ ಅವರ ಕೈಯಲ್ಲಿ ಆಳ್ವಿಕೆಯಿದ್ದ ಸಂದರ್ಭವದು. ರಾಜಮಾತೆ ಲಕ್ಷ್ಮಮ್ಮಣ್ಣಿಯವರು ತಿರುಮಲ ಅಯ್ಯಂಗಾರ್ ಹಾಗೂ ಅಯ್ಯಂಗಾರ್ ಸಮುದಾಯದ ಪ್ರಮುಖರ ಸಹಾಯದೊಂದಿಗೆ ಬ್ರಿಟಿಷರ ಸಂಪರ್ಕ ಸಾಧಿಸಿ, ಟಿಪ್ಪು ವಿರುದ್ಧ ನಿಂತರು. ಆ ಮೂಲಕ ಬ್ರಿಟಿಷರ ಸಹಾಯದೊಂದಿಗೆ ಪುನಃ ಆಳ್ವಿಕೆ ನಮ್ಮ ಕೈಗೆ ಬರಲು ಪ್ರಮುಖ ಪಾತ್ರ ವಹಿಸಿದರು. ಹಾಗಾಗಿ ಅವರನ್ನು ಸ್ಮರಿಸಲೇಬೇಕು ಎಂದು ಹೇಳಿದರು.

ಅಲ್ಲದೆ, ದೇವರಾಜಮ್ಮಣ್ಣಿ ಮತ್ತು ಲಿಂಗರಾಜಮ್ಮಣ್ಣಿ ಅವರ ಕೊಡುಗೆಯೂ ಸ್ಮರಣೀಯ. ಲಿಂಗಂಬುದಿ ಕೆರೆ ಮತ್ತು ದೇವಂಬುದ್ಧಿ ಕೆರೆ ಅವರ ಕೊಡುಗೆಗಳಿಗೆ ಇರುವ ನಿದರ್ಶನ. ಇಷ್ಟು ಮಾತ್ರವಲ್ಲದೆ, ಅನೇಕ ಸಮಾಜ ಸೇವೆ ಕಾರ್ಯದಲ್ಲಿ ಅವರ ಕೊಡುಗೆ ಇದೆ. ತ್ರಿಪುರ ಸುಂದರಿ ಅಮ್ಮಣ್ಣಿ ಅವರನ್ನೂ ಸ್ಮರಿಸಬೇಕು. ದೇಶದಲ್ಲಿ ರಾಜರಿಗೆ ಇದ್ದ ಹಕ್ಕುಗಳನ್ನು ರದ್ದು ಮಾಡಿದ ಸಂದರ್ಭದಲ್ಲಿ ರಾಜಮನೆತನದ ಪರಂಪರೆಯ ವಿಧಿವಿಧಾನಗಳು ಮುಂದುವರೆಯಬೇಕೇ ಎಂಬ ಪ್ರಶ್ನೆಗಳು ಹುಟ್ಟಿಕೊಂಡಿದ್ದವು. ಇಂತಹ ಸಂದರ್ಭದಲ್ಲಿ ನಮ್ಮ ಪರಂಪರೆ ಮುಂದುವರೆಯಲೇಬೇಕು. ಮೈಸೂರಲ್ಲಿ ಸಾರ್ವಜನಿಕವಾಗಿ ಮೆರವಣಿಗೆ ಇಲ್ಲದೆ ಇದ್ದರೂ ಅರಮನೆಯಲ್ಲಿ ಪೂಜಾ ವಿಧಿವಿಧಾನ ಸೇರಿದಂತೆ ನವರಾತ್ರಿ ಆಚರಣೆಗಳು ನಡೆಯಲೇಬೇಕು ಎಂದು ತ್ರಿಪುರ ಸುಂದರಿ ಅಮ್ಮಣ್ಣಿ ಗಟ್ಟಿ ತೀರ್ಮಾನ ಮಾಡಿದರು. ಹಾಗಾಗಿ ಇಂದು ಮೈಸೂರು ಪರಂಪರೆ ಉಳಿದಿದ್ದು, ಆ ಕೀರ್ತಿ ಅವರಿಗೆ ಸಲ್ಲಬೇಕು ಎಂದು ಹೇಳಿದರು.

ನಮ್ಮ ತಾಯಿ ಪ್ರಮೋದಾದೇವಿ ಒಡೆಯರ್ ಕೂಡ ಈ ಆಧುನಿಕ ಕಾಲದಲ್ಲೂ ನಮ್ಮ ಪರಂಪರೆಯನ್ನು ಉಳಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ. ನನ್ನನ್ನು ದತ್ತು ಪಡೆದು ನಮ್ಮ ಪರಂಪರೆ ಮುಂದುವರೆಸುತ್ತಿದ್ದಾರೆ. ಆಧುನಿಕ ಕಾಲಕ್ಕೆ ತಕ್ಕಂತೆ ವ್ಯವಸ್ಥೆಗಳು ಬದಲಾಗಬಹುದು. ಆದರೆ ಭಾರತ ಮತ್ತು ಕರ್ನಾಟಕದಲ್ಲಿ ನಮ್ಮ ಪರಂಪರೆಯನ್ನು ನಾವು ಉಳಿಸಿಕೊಂಡೇ ಬಂದಿದ್ದೇವೆ. ನಮ್ಮ ಋಷಿಮುನಿಗಳು ನೀಡಿದ ವೇದಗಳ ಸಮಯದಿಂದ ಈವರೆಗೆ ಭಾರತೀಯ ಧರ್ಮ ಮತ್ತು ಪರಂಪರೆ ಉಳಿದಿರುವುದಕ್ಕೆ ಕಾರಣ ಈ ನೆಲದ ತಾಯಿಯಂದಿರ ಕೊಡುಗೆ ಎಂದು ತಿಳಿಸಿದರು.

ಟಿಪ್ಪು ಮತ್ತು ಹೈದರ್ ತಮ್ಮ ಆಡಳಿತದಲ್ಲಿ ದೇವಸ್ಥಾನಗಳನ್ನು ಬಹಳಷ್ಟು ಕಡೆ ನೆಲಸಮಗೊಳಿಸಿದ್ದನ್ನು ಉಲ್ಲೇಖಿಸಿ, ನಮ್ಮ ಕರ್ನಾಟಕ ಪರಂಪರೆಯನ್ನು ಪುನರ್ ನಿರ್ಮಾಣ ಮಾಡಿ ರಕ್ಷಣೆ ಮಾಡಬೇಕೆಂಬ ಸಂದೇಶವನ್ನು ರಾಜಮಾತೆ ಲಕ್ಷ್ಮಮ್ಮಣ್ಣಿಯವರು ತಮ್ಮ ಪುತ್ರನಿಗೆ ನೀಡಿದ್ದರು. ಅಂತೆಯೇ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೂ ಅವರ ತಾಯಿಯಾದ ಕೆಂಪನಂಜಮ್ಮಣ್ಣಿ ಅವರು ಭಾರತೀಯ ಪರಂಪರೆ ತಿಳುವಳಿಕೆಯೊಂದಿಗೆ ಉತ್ತಮ ಸಂಸ್ಕಾರದ ತಿಳುವಳಿಕೆ ಕೊಟ್ಟಿದ್ದರು. ಮೈಸೂರು ಸಂಸ್ಥಾನವು ಭಾರತೀಯ ಪರಂಪರೆ ಹಾಗೂ ಕನ್ನಡಿಗರ ಪರಂಪರೆಯ ಆಧಾರದ ಮೇಲೆ ನಿರ್ಮಾಣವಾಗಿದೆ ಎಂದರು.

ಪುಸ್ತಕ ಬಿಡುಗಡೆ ಮಾಡಿದ ಟ್ರಸ್ಟ್‌ನ ಮಹಾಪೋಷಕರೂ ಆದ ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಮಾತನಾಡಿ, ಅರಮನೆಯಲ್ಲಿ ಇಂದಿಗೂ, ಮುಂದಕ್ಕೂ ವಾಣಿವಿಲಾಸ ಸನ್ನಿಧಾನ ಅವರ ಪ್ರಭಾವ ಇದ್ದೇ ಇರುತ್ತದೆ. ಅರಮನೆಯ ದೇವರ ಮನೆಗೆ ವಾಣಿವಿಲಾಸ ದೇವರ ಮನೆ ಎಂದೇ ಕರೆಯುತ್ತೇವೆ. ನವರಾತ್ರಿ ಸೇರಿದಂತೆ ಎಲ್ಲಾ ವಿಶೇಷ ಪೂಜೆಗಳನ್ನು ನಾವು ವಾಣಿವಿಲಾಸ ದೇವರ ಮನೆಯಲ್ಲಿ ಮಾಡುತ್ತೇವೆ. ರಾಜಮನೆತನದ ಮಹಿಳಾ ಸಮುದಾಯದ ಕಲಾ ಚಟುವಟಿಕೆಗಳಿಗೆ ಉತ್ತೇಜನ ನೀಡುವ ಸಲುವಾಗಿ 1922ರಲ್ಲಿ ವಾಣಿವಿಲಾಸ ಲೇಡಿಸ್ ಕ್ಲಬ್ ಸ್ಥಾಪನೆಯಾಯಿತು. ಇಂದಿಗೂ ಕೂಡ ಆ ಕ್ಲಬ್ ಮುಂದುವರೆದಿದೆ. ಕ್ಲಬ್‌ನ 100 ವರ್ಷದಲ್ಲಿ ನಡೆದ ಚುನಾವಣೆಗಳಲ್ಲಿ ಶೇ.98ರಷ್ಟು ಅವಿರೋಧ ಆಯ್ಕೆಗಳೇ ಆಗುತ್ತಿವೆ ಎಂದು ಹೇಳಿದರು.

ಶ್ರೀ ಕಪ್ಪಡಿ ಕ್ಷೇತ್ರದ ಪೀಠಾಧಿಪತಿಗಳಾದ ಶ್ರೀ ಎಂ.ಎಲ್.ವರ್ಚಸ್ವಿ ಶ್ರೀಕಂಠ ಸಿದ್ದಲಿಂಗ ರಾಜೇ ಅರಸ್, ವಿಭಾಗೀಯ ದಾಖಲೆಗಳ ಕಚೇರಿಯ ನಿವೃತ್ತ ಉಪನಿರ್ದೇಶಕಿ ಡಾ.ಜೆ.ವಿ.ಗಾಯತ್ರಿ, ಮಹಾರಾಣಿ ಮಹಿಳಾ ಕಲಾ ಕಾಲೇಜು ನಿವೃತ್ತ ಪ್ರಾಧ್ಯಾಪಕಿ ಡಾ.ಬಿ.ವಿ.ಸುಧಾಮಣಿ, ಕೃತಿ ಕರ್ತೃ ಡಾ.ಗಜಾನನ ಶರ್ಮ, ಟ್ರಸ್ಟ್‌ನ ಉಪಾಧ್ಯಕ್ಷೆ ಡಾ.ಭಾರತೀ ಶ್ರೀಧರ್ ರಾಜ್ ಅರಸ್, ಕಾರ್ಯದರ್ಶಿ ಮಹೇಶ್ ಎನ್.ಅರಸ್ ಮತ್ತಿತರರು ಹಾಜರಿದ್ದರು.

ಶೇ. 50:50ರ ನಿವೇಶನ ಹಂಚಿಕೆ ಹಗರಣ

ಇಡಿ ವಿರುದ್ಧವೇ ಮುಡಾ ಮಾಜಿ ಆಯುಕ್ತ ಡಾ.ಡಿ.ಬಿ.ನಟೇಶ್ ಕೋರ್ಟ್‌ಗೆ ಅರ್ಜಿ



ಡಾ.ನಟೇಶ್



ಮೈಸೂರು, ಡಿ.7(ಆರ್‌ಕೆ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ನಡೆದಿರುವ ಶೇ. 50:50ರ ಅನುಪಾತದ ನಿವೇಶನ ಹಂಚಿಕೆ ಹಗರಣದ ಸಂಬಂಧ ತಮ್ಮ ವಿರುದ್ಧ ತನಿಖೆ ಪ್ರಶ್ನಿಸಿ, ಜಾರಿ ನಿರ್ದೇಶನಾಲಯ (ಇಡಿ)ದ ವಿರುದ್ಧವೇ ಮುಡಾ ಮಾಜಿ ಆಯುಕ್ತ ಡಾ.ಡಿ.ಬಿ.ನಟೇಶ್ ರಾಜ್ಯ ಹೈಕೋರ್ಟ್ ಮೊರೆ ಹೋಗಿದ್ದಾರೆ.

ಡಾ.ನಟೇಶ್ ಸಲ್ಲಿಸಿದ ಅರ್ಜಿ ವಿಚಾರಣೆ ಕೈಗೆತ್ತಿಕೊಂಡಿರುವ ನ್ಯಾಯಮೂರ್ತಿ ಹೇಮಂತ್ ಚಂದನ್ ಗೌಡರ್ ಪೀಠವು ಪ್ರತಿವಾದಿಯಾದ ಬೆಂಗಳೂರಿನ ಇಡಿ ಪ್ರಾದೇಶಿಕ ಅಧಿಕಾರಿಗೆ ನೋಟಿಸ್ ಜಾರಿ ಮಾಡಿದೆ. ನಿನ್ನೆ (ಡಿ.6) ನಡೆದ ವಿಚಾರಣೆ ವೇಳೆ ಡಾ.ನಟೇಶ್ ಪರ ವಾದ ಮಂಡಿಸಿದ ವಕೀಲ ಸಂದೇಶ್ ಜೆ.ಚೌಟ, ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು ತಮ್ಮ ಕಕ್ಷಿದಾರರ ಮನವಿಯಲ್ಲಿ ಶೋಧ ನಡೆಸಿ ಕೆಲ ದಾಖಲೆಗಳನ್ನು ವಶಪಡಿಸಿಕೊಂಡಿರುವುದು ಹಾಗೂ ನೋಟಿಸ್ ಜಾರಿ ಮಾಡಿ ಹೇಳಿಕೆ ಪಡೆದಿರುವುದು ಕಾನೂನುಬಾಹಿರ ಎಂದರು.

ಯಾವ ನಿಯಮದಡಿ ಇಡಿ ಅಧಿಕಾರಿಗಳು ನಟೇಶ್ ಅವರ ವಿರುದ್ಧ ತನಿಖೆ ಕೈಗೊಂಡಿದ್ದಾರೆ ಎಂಬುದರ ಬಗ್ಗೆ ಸ್ಪಷ್ಟಪಡಿಸಬೇಕು ಎಂದು ವಕೀಲರು ಮನವಿ ಮಾಡಿದ್ದಾರೆ. ವಾದ ಆಲಿಸಿದ ನ್ಯಾಯಮೂರ್ತಿಗಳು, ಅರ್ಜಿ ಮೇಲ್ವಿಚಾರಣೆಯನ್ನು ಡಿ.9ಕ್ಕೆ ಮುಂದೂಡಿದ್ದಾರೆ. ಡಾ.ನಟೇಶ್ ಅವರು ಇತ್ತೀಚೆಗಷ್ಟೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ಮಂಜೂರಾಗಿದ್ದ 14 ನಿವೇಶನಗಳ ಸಂಬಂಧ ತನಿಖೆ ನಡೆಸುತ್ತಿರುವ ಮೈಸೂರಿನ ಕರ್ನಾಟಕ ಲೋಕಾಯುಕ್ತ ಎಸ್‌ಪಿ ಟಿ.ಜೆ.ಉದೇಶ್ ಮುಂದೆ ವಿಚಾರಣೆಗೆ ಹಾಜರಾಗಿ ಹೇಳಿಕೆ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಕ್ಷಯರೋಗಗಳ ಬಗ್ಗೆ ಮಾಹಿತಿ ನೀಡಿದವರಿಗೆ 500 ರೂ. ಪ್ರೋತ್ಸಾಹ ಧನ!

ಮೈಸೂರು ಜಿಲ್ಲೆಯನ್ನು ಕ್ಷಯ ಮುಕ್ತವಾಗಿಸಲು ಸಹಕರಿಸಿ: ಸಾರ್ವಜನಿಕರಲ್ಲಿ ಮೈಸೂರು ಜಿಪಂ ಸಿಇಓ ಕೆ.ಎಂ.ಗಾಯತ್ರಿ ಮನವಿ

ಮೈಸೂರು, ಡಿ.7 (ಆರ್‌ಕೆ)–ಮೈಸೂರು ಜಿಲ್ಲೆಯನ್ನು ಕ್ಷಯರೋಗ ಮುಕ್ತವಾಗಿಸಲು ಅಧಿಕಾರಿಗಳು ಹಾಗೂ ಸಿಬ್ಬಂದಿ ಸಹಕರಿಸಬೇಕೆಂದು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ಇಂದಿಲ್ಲಿ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕ್ಷಯರೋಗ ನಿಯಂತ್ರಣಾ ಕೇಂದ್ರದ ಸಹಯೋಗದಲ್ಲಿ ಮೈಸೂರಿನ ಜಿಲ್ಲಾ ಪಂಚಾಯತಿ ಕಚೇರಿಯ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಇಂದು ಏರ್ಪಡಿಸಿದ್ದ ಟಿಬಿ ಮುಕ್ತ ಭಾರತ ಅಭಿಯಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರು ಜಿಲ್ಲೆಯನ್ನು ಕ್ಷಯರೋಗ ಮುಕ್ತ ಮಾಡಲು ಮೂರು ದಿನಗಳ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, ನಿಕ್ಷಯ ಪೋರ್ಟಲ್‌ನಲ್ಲಿ ಕ್ಷಯರೋಗಿಗಳನ್ನು ಪತ್ತೆ ಮಾಡಿ ಅವರಿಗೆ ಔಷಧಿ ನೀಡುವಂತೆ ಸಲಹೆ ನೀಡಿದರು.



ಮೈಸೂರಿನ ಜಿಲ್ಲಾ ಪಂಚಾಯತಿ ಕಚೇರಿಯ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಏರ್ಪಡಿಸಿದ್ದ ಟಿಬಿ ಮುಕ್ತ ಭಾರತ ಅಭಿಯಾನ ಕಾರ್ಯಕ್ರಮವನ್ನು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ಉದ್ಘಾಟಿಸಿದರು.

ಕ್ಷಯರೋಗ ಒಬ್ಬರಿಂದ ಒಬ್ಬರಿಗೆ ಹರಡುವುದರಿಂದ ಆರಂಭದಲ್ಲೇ ಪತ್ತೆ ಮಾಡಿ ಚಿಕಿತ್ಸೆ ನೀಡಬೇಕಾಗಿದೆ. ನಿರಂತರವಾಗಿ ಎರಡು ವಾರ ಕೆಮ್ಮು ಇದ್ದರೆ ಅದು ಟಿಬಿ ಆಗಿರಬಹುದು. ಅಂತಹ ಲಕ್ಷಣಗಳು ಕಂಡುಬಂದ ತಕ್ಷಣ ಅಂತಹವರನ್ನು ಪರೀಕ್ಷಿಸಿ ಚಿಕಿತ್ಸೆ ನೀಡಬೇಕಾಗಿದೆ. ಟಿಬಿ ರೋಗಿಗಳನ್ನು ಪತ್ತೆ ಮಾಡುವವರಿಗೆ ಈಗಾಗಲೇ ಸರ್ಕಾರದಿಂದ 500 ರೂ. ಪ್ರೋತ್ಸಾಹಧನ ನೀಡಲು ತೀರ್ಮಾನಿಸಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಅರಿವು ಹಾಗೂ ಪರೀಕ್ಷೆಗಳನ್ನು ನಡೆಸಬೇಕು. ಆರೋಗ್ಯ ಇಲಾಖೆ ಅಧಿಕಾರಿಗಳು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು, ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಈ ಕಾರ್ಯದಲ್ಲಿ ನಿರತರಾಗಬೇಕು ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ಕ್ಷಯರೋಗ ಸುಲಭವಾಗಿ ಹರಡುವುದರಿಂದ ಅದನ್ನು ತಡೆಗಟ್ಟಲು ಆರೋಗ್ಯ ಇಲಾಖೆ ಸಿಬ್ಬಂದಿ ನಿರಂತರ ಕೆಲಸ ಮಾಡುತ್ತಿರುವುದು ಶ್ಲಾಘನೀಯ. ವೈದ್ಯರು ಹಾಗೂ ಸೈನಿಕರು ತಮ್ಮ ಪ್ರಾಣವನ್ನು ಪಣಕ್ಕಿಟ್ಟು ತಮ್ಮ ವೃತ್ತಿಯಲ್ಲಿ ಪ್ರಾಮಾಣಿಕತೆ ಪ್ರದರ್ಶಿಸುತ್ತಿರುವುದರಿಂದ ಅವರಿಗೆ ಸಮಾಜವು ಗೌರವ ಸಲ್ಲಿಸಬೇಕು ಎಂದು ತಿಳಿಸಿದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ. ಕುಮಾರಸ್ವಾಮಿ ಮಾತನಾಡಿ, ಇಂದಿನಿಂದ 100 ದಿನಗಳ ಕಾಲ ಟಿಬಿ ಮುಕ್ತ ಅಭಿಯಾನ ಕಾರ್ಯಕ್ರಮ ಆರಂಭವಾಗಿದ್ದು, 2006ರಿಂದ ಆರ್‌ಎಂಪಿಟಿಸಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿರುವುದರಿಂದ ಕ್ಷಯರೋಗ ನಿಯಂತ್ರಣದಲ್ಲಿದೆ. ಅದನ್ನು ಸಂಪೂರ್ಣ ತೊಲಗಿಸಬೇಕೆಂಬುದೇ ಸರ್ಕಾರ ಮತ್ತು ಇಲಾಖೆ ಉದ್ದೇಶವಾಗಿದೆ. ಅಧಿಕಾರಿಗಳು ಹಾಗೂ ಸಿಬ್ಬಂದಿ ಜಿಲ್ಲೆಯ ಎಲ್ಲಾ ಗ್ರಾಮಗಳಿಗೆ ಭೇಟಿ ನೀಡಿ, ಸರ್ವೆ ನಡೆಸಿ ಕ್ಷಯರೋಗಿಗಳನ್ನು ಪತ್ತೆ ಮಾಡಿ ಚಿಕಿತ್ಸೆ ನೀಡಬೇಕು ಎಂದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವಿಭಾಗೀಯ ಸಹ ನಿರ್ದೇಶಕ ಡಾ.ಕೆ.ಹೆಚ್.ಪ್ರಸಾದ್, ಜಿಲ್ಲಾ ಕ್ಷಯ ರೋಗ ನಿರ್ಮೂಲನಾಧಿಕಾರಿ ಡಾ.ಎಂ.ಎಸ್.ಜಯಂತ್, ಕಾರ್ಯಕ್ರಮ ಅನುಷ್ಠಾನಾಧಿಕಾರಿ ಡಾ.ಬೃಂದಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಕುರುಬ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರಕ್ಕೆ ಅರ್ಜಿ

ಮೈಸೂರು,ಡಿ.7(ಎಂಟಿವೈ)– ದಾಸ ಶ್ರೇಷ್ಠ ಭಕ್ತ ಕನಕದಾಸರ 537ನೇ ಜಯಂತಿ ಮಹೋತ್ಸವದ ಅಂಗವಾಗಿ ಶ್ರೀ ಕನಕ ನೌಕರರ ಕ್ಷೇಮಾಭಿವೃದ್ಧಿ ಸಂಘ ಕುರುಬ ಸಮುದಾಯ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಿದೆ.

2023–24ನೇ ಸಾಲಿನಲ್ಲಿ ಕುರುಬ ಸಮುದಾಯದ ಎಸ್‌ಎಸ್‌ಎಲ್‌ಸಿ, ಪಿಯುಸಿ, ನೀಟ್ ಪರೀಕ್ಷೆಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಪಡೆದು ಉತ್ತೀರ್ಣರಾದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಹಾಗೂ ಎಂಬಿಬಿಎಸ್‌ಗೆ ದಾಖಲಾಗಿರುವ ಪ್ರಥಮ ವರ್ಷದ ನಂಜನಗೂಡು ತಾಲೂಕಿನ ಸಮುದಾಯದ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲು ಉದ್ದೇಶಿಸಲಾಗಿದ್ದು, ಡಿ.25ರಂದು ನಡೆಯುವ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಪುರಸ್ಕಾರ ನೀಡಲಾಗುತ್ತದೆ. ಅರ್ಹ ವಿದ್ಯಾರ್ಥಿಗಳು ಡಿ.18ರೊಳಗೆ ಅಂಕಪಟ್ಟಿ, ಜಾತಿ ಪ್ರಮಾಣ ಪತ್ರ, ಟಿಸಿ ನಕಲು ಪ್ರತಿ ಹಾಗೂ ಪಾಸ್‌ಪೋರ್ಟ್ ಅಳತೆಯ ಫೋಟೋವನ್ನು ನಂಜನಗೂಡು ಬಸ್‌ನಿಲ್ದಾಣದ ಪಕ್ಕದಲ್ಲಿರುವ ಶ್ರೀ ಕನಕ ನೌಕರರ ಕ್ಷೇಮಾಭಿವೃದ್ಧಿ ಸಂಘಕ್ಕೆ ಸಲ್ಲಿಸುವಂತೆ ಕೋರಲಾಗಿದೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ 9980530368, 9740970352, 9945927046 ಮೊ.ಸಂಖ್ಯೆಯನ್ನು ಸಂಪರ್ಕಿಸಬಹುದಾಗಿದೆ.

ಹಾರೋಹಳ್ಳಿ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷ ರೇವಣ್ಣಗೆ ಅಭಿನಂದನೆ...



ಮೈಸೂರು ತಾಲೂಕು ಜಯಪುರ ಹೋಬಳಿಯ ಹಾರೋಹಳ್ಳಿ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ರೇವಣ್ಣ ಅವರನ್ನು ಚುನಾವಣಾಧಿಕಾರಿ ದೇವೇಂದ್ರಪ್ಪ, ಹಾರೋಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಹಾಲಿ ಅಧ್ಯಕ್ಷ, ಮೈಸೂರು ತಾಪಂ ಮಾಜಿ ಸದಸ್ಯ ಎಚ್.ಆರ್.ಸುರೇಶ್‌ಕುಮಾರ್, ಮಾಜಿ ಅಧ್ಯಕ್ಷ ಜಯಪ್ಪ, ಗ್ರಾಪಂ ಸದಸ್ಯರು ಅಭಿನಂದಿಸಿದರು. ಈ ವೇಳೆ ಹಾರೋಹಳ್ಳಿ ಗ್ರಾಪಂ ವ್ಯಾಪ್ತಿಯ ಕಾಂಗ್ರೆಸ್ ಮುಖಂಡರು ಉಪಸ್ಥಿತರಿದ್ದರು.

ನಾಳೆಯಿಂದ ಮೈಸೂರಲ್ಲಿ ಯೂಸಫ್ ಹಮೀದ್ ರಸಾಯನ ಶಾಸ್ತ್ರ ಶಿಬಿರ

ಮೈಸೂರು, ಡಿ.7(ಜಿಎ)–ರಾಯಲ್ ಸೊಸೈಟಿ ಆಫ್ ಕೆಮಿಸ್ಟ್ರಿ ಇಂಡಿಯಾ ಹಾಗೂ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಗಳ ಸಂಯುಕ್ತಾಶ್ರಯದಲ್ಲಿ ಡಿ.9ರಿಂದ 11 ರವರೆಗೆ ನಗರದ ಜೆಎಸ್‌ಎಸ್ ಔಷಧ ವಿಜ್ಞಾನ ಕಾಲೇಜು ಸಭಾಂಗಣದಲ್ಲಿ ಯೂಸಫ್ ಹಮೀದ್ ರಸಾಯನಶಾಸ್ತ್ರ ಶಿಬಿರ ಆಯೋಜಿಸಲಾಗಿದೆ ಎಂದು ಪ್ರಾಚಾರ್ಯ ಡಾ.ಟಿ.ಎಂ. ಪ್ರಮೋದ್‌ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದ ಮುಖ್ಯ ಉದ್ದೇಶವು ರಾಜ್ಯದ 9ನೇ ತರಗತಿಯ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ರಸಾಯನಶಾಸ್ತ್ರದ ಬಗ್ಗೆ ಆಸಕ್ತಿ, ಕುತೂಹಲ ಪ್ರೇರೇಪಿಸುವುದು ಮತ್ತು ಉತ್ತೇಜಿಸುವುದು ಆಗಿದೆ. ಈ ಶಿಬಿರದಲ್ಲಿ ಮೈಸೂರು (ಗ್ರಾಮೀಣ ಮತ್ತು ನಗರ), ಬೆಳಗಾವಿ, ಗದಗ, ಧಾರವಾಡ, ಹಾವೇರಿ ಮತ್ತು ಚಿಕ್ಕೋಡಿ ಜಿಲ್ಲೆಗಳ ವಿವಿಧ ಸರ್ಕಾರಿ ಶಾಲೆಗಳ 9ನೇ ತರಗತಿಯ 93 ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದಾರೆ ಎಂದರು.

ಶಿಬಿರವು ವಿದ್ಯಾರ್ಥಿಗಳಿಗೆ ರಸಾಯನ ಶಾಸ್ತ್ರದ ಪ್ರಯೋಗಗಳಲ್ಲಿ ಪಾಲ್ಗೊಳ್ಳಲು ಅವಕಾಶ ಮಾಡಿಕೊಟ್ಟು, ವಿಷಯದ ಬಗ್ಗೆ ಜಾಗೃತಿ ಮತ್ತು ದೀರ್ಘಕಾಲಿಕ ಆಸಕ್ತಿ ಬೆಳೆಸಲು ಪ್ರೇರೇಪಿಸುತ್ತದೆ. ಅಲ್ಲದೆ, ಕಾರ್ಯಕ್ರಮವು ವಿಶ್ವವಿದ್ಯಾಲಯದ – ಪ್ರಯೋಗಾಲಯಗಳಲ್ಲಿ ಕೈಗೊಳ್ಳಬಹುದಾದ ಪ್ರಾಯೋಗಿಕ ಚಟುವಟಿಕೆಗಳು, ಆಸಕ್ತಿಯ ರಾಸಾಯನಿಕ ಪ್ರದರ್ಶನಗಳು, ಸಮಾನ ಮನಸ್ಸಿನ ವಿದ್ಯಾರ್ಥಿಗಳನ್ನು ಭೇಟಿಯಾಗುವ ಅವಕಾಶ ನೀಡುತ್ತದೆ. ಡಿ.9ರಂದು ಬೆಳಗ್ಗೆ 10:30ಕ್ಕೆ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣ, ಉಪಕುಲಪತಿ ಡಾ.ಹೆಚ್.ಬಸವನಗೌಡಪ್ಪ ಉದ್ಘಾಟಿಸುವರು. ಇನ್ನಿತರ ಗಣ್ಯರು ಭಾಗವಹಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಶಿಬಿರ ಸಂಯೋಜಕರಾದ ಡಾ.ಬಿ.ಎಂ.ಗುರುಪಾದಯ್ಯ, ಮೆಲ್ಲಿಸಾ, ಡಾ.ಜಿ.ವಿ.ಪೂಜಾರ್, ಬಿ.ಆರ್. ಪ್ರಶಾಂತ್‌ಕುಮಾರ್ ಉಪಸ್ಥಿತರಿದ್ದರು.

ನಾಳೆಯಿಂದ ಕಾಶ್ಮೀರಿ ಯುವಜನ ವಿನಿಮಯ ಕಾರ್ಯಕ್ರಮ

ಕಾಶ್ಮೀರದ ಸಂತ್ರಸ್ತ ಭಾಗದ 120 ಯುವಜನರು ಭಾಗಿ

ಮೈಸೂರು, ಡಿ.7(ಜಿಎ)–ಕೇಂದ್ರ ಯುವಜನ ವ್ಯವಹಾರ, ಕ್ರೀಡಾ ಸಚಿವಾಲಯ, ಜಿಲ್ಲಾ ನೆಹರು ಯುವ ಕೇಂದ್ರಗಳ ಸಹಯೋಗದಲ್ಲಿ ಡಿ.9ರಿಂದ 14 ರವರೆಗೆ ಮೈಸೂರಿನ ರಾಜ್ಯ ಮುಕ್ತ ವಿವಿಯ ಕಾವೇರಿ ಸಭಾಂಗಣದಲ್ಲಿ ಕಾಶ್ಮೀರಿ ಯುವಜನ ವಿನಿಮಯ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಯುವಜನ ಅಧಿಕಾರಿ ಅಭಿಷೇಕ್ ಎಸ್. ಚವರೆ ಈ ವಿಷಯ ತಿಳಿಸಿ, ಡಿ.10ರಂದು ಬೆಳಗ್ಗೆ 11ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಘನ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಉದ್ಘಾಟಿಸುವರು. ಇನ್ನಿತರ ಗಣ್ಯರು ಹಾಜರಿರುವರು. ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸುವರು. ಸಂಸದ ಯದುವೀರ್ ಒಡೆಯರ್ ಇನ್ನಿತರರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ಹೇಳಿದರು.

ವಿನಿಮಯ ಕಾರ್ಯಕ್ರಮದಲ್ಲಿ ಕಾಶ್ಮೀರದ ಸಂತ್ರಸ್ತ ಭಾಗಗಳ ಸುಮಾರು 120 ಯುವಜನರು 12 ಜನ ಉಸ್ತುವಾರಿ ಅಧಿಕಾರಿಗಳು ಭಾಗವಹಿಸುತ್ತಿದ್ದಾರೆ. ಡಿ.14ರಂದು ಶಿಬಿರ ಸಮಾರೋಪಗೊಳ್ಳಲಿದೆ. ಕಾಶ್ಮೀರಿ ಯುವಜನರಿಗಾಗಿ ಬೇರೆ ಬೇರೆ ರಾಜ್ಯಗಳ ಸಂಸ್ಕೃತಿ, ಕಲೆ, ಆಹಾರ ಪದ್ಧತಿ, ಆಚಾರ ವಿಚಾರ, ಉಡುಗೆ ತೊಡುಗೆ, ಸ್ಥಳ ಪರಿಚಯ, ಭಾಷಾ ಕಲಿಕೆ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಪರಿಚಯ ಮಾಡಿಕೊಡುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದು ತಿಳಿಸಿದರು.

ಈ ನಡುವೆ ಇವರನ್ನು ಮೈಸೂರಿನ ಅರಮನೆ, ಚಾಮುಂಡಿವಿಹಾರ ಕ್ರೀಡಾಂಗಣ, ದರಿಯಾ ದೌಲತ್, ಬೃಂದಾವನ ಗಾರ್ಡನ್ (ಕೆ.ಆರ್.ಎಸ್), ಮೈಸೂರಿನ ಚಾಮರಾಜೇಂದ್ರ ಮೃಗಾಲಯ, ರೈಲ್ವೆ ವರ್ಕ್‌ಶಾಪ್ ಮತ್ತು ರೇಷ್ಮೆ ಕಾರ್ಖಾನೆಗೆ ಕರೆದೊಯ್ಯಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅಧಿಕಾರಿ ಸತೀಶ್ ಪಡೋಡೆ ಉಪಸ್ಥಿತರಿದ್ದರು.

ಡ್ರೋನ್ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು, ಡಿ.7–ಆಯವ್ಯಯ ಭಾಷಣದಂತೆ ಡ್ರೋನ್ ಆಧಾರಿತ ಫೋಟೋಗ್ರಫಿ ಮತ್ತು ವಿಡಿಯೋಗ್ರಫಿ ಮೂಲಕ ಸಾಮಾಜಿಕ ಜಾಲತಾಣಗಳಲ್ಲಿ ಉದ್ಯೋಗ ಪಡೆಯಲು ಪರಿಶಿಷ್ಟ ಪಂಗಡದ ಯುವಕ/ಯುವತಿಯರಿಗೆ ಡ್ರೋನ್ ತರಬೇತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಹುಣಸೂರು ತಾಲೂಕಿನ ವ್ಯಾಪ್ತಿಯಲ್ಲಿರುವ ಅರ್ಹ ಪರಿಶಿಷ್ಟ ಪಂಗಡದ ಯುವಕ/ಯುವತಿಯರಿಂದ ಡ್ರೋನ್ ಆಧಾರಿತ ಫೋಟೋಗ್ರಫಿ, ವಿಡಿಯೋಗ್ರಫಿ ಮೂಲಕ ಡ್ರೋನ್ ತರಬೇತಿ ಪಡೆಯಲು ಎಸ್.ಎಸ್.ಎಲ್.ಸಿ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ಅರ್ಜಿಯನ್ನು ಡಿಸೆಂಬರ್ 12ರೊಳಗೆ ಸಲ್ಲಿಸುವುದು. ಮಾಹಿತಿಗೆ ದೂ.ಸಂಖ್ಯೆ 08222–252812 ಅನ್ನು ಸಂಪರ್ಕಿಸಬಹುದು.

ಡಾ.ಬಿ.ಆರ್.ಅಂಬೇಡ್ಕರ್ 68ನೇ ಪರಿನಿರ್ವಾಣ ದಿನ



ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 68ನೇ ಪರಿನಿರ್ವಾಣ ದಿನವನ್ನು ಅಶೋಕಪುರಂ ಪಾರ್ಕ್‌ನಲ್ಲಿರುವ ಡಾ.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಆಚರಿಸಲಾಯಿತು. ಈ ವೇಳೆ ಪ್ರೊ.ಶಿವರಾಜಪ್ಪ, ಮೈಸೂರು ವಿವಿ ಸಮಾಜ ಕಾರ್ಯ ಅಧ್ಯಯನ ವಿಭಾಗದ ನಿರ್ದೇಶಕರಾದ ಪ್ರೊ ಹೆಚ್.ಪಿ.ಜ್ಯೋತಿ, ಜಿ.ಪಂ ಮಾಜಿ ಸದಸ್ಯ ಬೀರಿಹುಂಡಿ ಬಸವಣ್ಣ, ಕಾಂಗ್ರೆಸ್ ಮುಖಂಡ ವಿ.ರಾಮಸ್ವಾಮಿ, ಪುರುಷೋತ್ತಮ್, ಮೈ ವಿವಿ ನಿವೃತ್ತ ನೌಕರರು ವಿಶ್ವಮಾನವ ಮೈಸೂರು ವಿವಿ ನೌಕರರ ವೇದಿಕೆ ಅಧ್ಯಕ್ಷ ಆರ್.ವಾಸುದೇವ್, ಉಪಾಧ್ಯಕ್ಷ ಭಾಸ್ಕರ್, ನಿರ್ದೇಶಕರಾದ ಡಾ.ನವೀನ್, ಚಿದಾನಂದ ಇನ್ನಿತರರು ಪಾಲ್ಗೊಂಡಿದ್ದರು.

ಸಿರಿಯಾದಲ್ಲಿ ಭುಗಿಲೆದ್ದ ಅಂತರ್ಯುದ್ಧ: ಜಾಗ ಖಾಲಿ ಮಾಡುವಂತೆ ಭಾರತೀಯರಿಗೆ ಸೂಚನೆ

ನವದೆಹಲಿ: ಸಿರಿಯಾದಲ್ಲಿ ಅಂತರ್ಯುದ್ಧ ನಡೆದು ಅಲೆಪ್ಪೊ ನಗರದ ಬಹುತೇಕ ಭಾಗಗಳನ್ನು ಬಂಡುಕೋರರು ವಶಪಡಿಸಿಕೊಂಡ ಬೆನ್ನಲ್ಲೇ ಇದೀಗ ಭಾರತ ತನ್ನ ಪ್ರಜೆಗಳಿಗೆ ಮಹತ್ವದ ಸಂದೇಶವನ್ನು ರವಾನಿಸಿದೆ.

ಸಿರಿಯಾದಲ್ಲಿ ಹಿಂಸಾಚಾರ ಮತ್ತು ಅಶಾಂತಿ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸಿರಿಯಾಕ್ಕೆ ಪ್ರಯಾಣಿಸುವುದನ್ನು ತಪ್ಪಿಸುವಂತೆ ಭಾರತ ಸರ್ಕಾರ ತನ್ನ ಎಲ್ಲಾ ನಾಗರಿಕರಿಗೆ ಸಲಹೆ ನೀಡಿದ್ದು, ಸಿರಿಯಾದಲ್ಲಿನ ಸದ್ಯದ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಮುಂದಿನ ಅಧಿಸೂಚನೆ ತನಕ ಸಿರಿಯಾಕ್ಕೆ ಎಲ್ಲಾ ಪ್ರಯಾಣವನ್ನು ತಪ್ಪಿಸಲು ಭಾರತೀಯ ಪ್ರಜೆಗಳಿಗೆ ಸೂಚಿಸಲಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಸಲಹೆಯಲ್ಲಿ ತಿಳಿಸಿದೆ.

ಇದರ ಜೊತೆಗೆ ಸಿರಿಯಾದಲ್ಲಿರುವ ಭಾರತದ ನಾಗರಿಕರಿಗೆ ಎಚ್ಚರಿಕೆಯನ್ನು ವಹಿಸುವಂತೆ ಮತ್ತು ಸುರಕ್ಷತಾ ಆಶ್ರಯಗಳ ಹತ್ತಿರ ಇರುವಂತೆ ವಿದೇಶಾಂಗ ವ್ಯವಹಾರಗಳ ಸಚಿವಾಲಯ ತನ್ನ ನಾಗರಿಕರನ್ನು ಕೇಳಿಕೊಂಡಿದೆ. ಸಂಕಷ್ಟದಲ್ಲಿರುವ ಭಾರತೀಯರು ಕೂಡಲೇ ಲಭ್ಯವಿರುವ ಆರಂಭಿಕ ವಾಣಿಜ್ಯ ವಿಮಾನಗಳ ಮೂಲಕ ಹೊರಡುವಂತೆ ಸಚಿವಾಲಯ ಒತ್ತಾಯಿಸಿದೆ.

ಷಷ್ಠಿ: ಹುತ್ತಗಳಿಗೆ ತನಿ, ನಾಗರ ಕಲ್ಲುಗಳಿಗೆ ಹಾಲೆರೆದು ಪೂಜೆ

ಮೈಸೂರು,ಡಿ.7(ಎಂಟಿವೈ)– ಮೈಸೂರಿನ ವಿವಿಧೆಡೆ ಷಷ್ಠಿ ಹಿನ್ನೆಲೆ ಹುತ್ತಗಳಿಗೆ ತನಿ ಎರೆದು, ಅಶ್ವತ್ಥ್ ಕಟ್ಟೆಯಲ್ಲಿದ್ದ ನಾಗರಕಲ್ಲುಗಳಿಗೆ ಹಾಲೆರೆದು ಪೂಜೆ ಸಲ್ಲಿಸಲಾಯಿತು.

ಶುದ್ಧ ಷಷ್ಠಿ ದಿನವಾದ ಇಂದು ವಿವಿಧೆಡೆಯಿರುವ ಸುಬ್ರಹ್ಮಣ್ಯೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ಜರುಗಿದವು. ಬನ್ನಿಮಂಟಪ, ಹಳೆ ಜಿಲ್ಲಾಧಿಕಾರಿ ಕಚೇರಿ ಸಮೀಪವಿರುವ ಸುಬ್ರಹ್ಮಣ್ಯ ಹಾಗೂ ಕಾಡು ಮಲ್ಲೇಶ್ವರ ದೇವಾಲಯ, ಅಮೃತೇಶ್ವರ ದೇವಾಲಯ, ಬೃಂದಾವನ ಬಡಾವಣೆ, ಕೆಆರ್‌ಎಸ್ ರಸ್ತೆಯ ಸ್ನೇಕ್ ಶಾಮ್ ನಿರ್ಮಿಸಿರುವ ದೇವಾಲಯ ಸೇರಿದಂತೆ ವಿವಿಧೆಡೆ ಇರುವ ದೇವಾಲಯಗಳಲ್ಲಿ ಅಪಾರ ಸಂಖ್ಯೆಯ ಭಕ್ತರು ವಿಶೇಷ ಪೂಜೆ ಸಲ್ಲಿಸಿ, ಪ್ರಾರ್ಥಿಸಿದರು.

ಅಲ್ಲದೆ, ದೇವಾಲಯ ಮಾತ್ರವಲ್ಲದೆ, ಅಶ್ವಥ್‌ಕಟ್ಟೆಗಳಲ್ಲೂ ಷಷ್ಠಿ ಸಂಭ್ರಮ ಮನೆ ಮಾಡಿತ್ತು. ಹುತ್ತಗಳಿಲ್ಲದ ಬಡಾವಣೆಗಳಲ್ಲಿ ಅಶ್ವಥ್‌ಕಟ್ಟೆಯಲ್ಲಿ ಪ್ರತಿಷ್ಠಾಪಿಸಿರುವ ನಾಗರ ಕಲ್ಲುಗಳಿಗೆ ಹಾಲೆರೆದು ಪೂಜೆ ಸಲ್ಲಿಸುತ್ತಿದ್ದ ದೃಶ್ಯ ಕಂಡು ಬಂದಿತು. ಮಹಿಳೆಯರು, ಯುವತಿಯರೇ ಹೆಚ್ಚಿನ ಸಂಖ್ಯೆಯಲ್ಲಿ ಷಷ್ಠಿ ಪೂಜಾ ಮಹೋತ್ಸವದಲ್ಲಿ ಭಾಗಿಯಾಗಿದ್ದು ವಿಶೇಷ. ಕೆಲವರು ತನಿ ಎರೆದ ನಂತರ ಮನೆಯಿಂದಲೇ ಮಾಡಿಕೊಂಡು ಬಂದಿದ್ದ ನೈವೇದ್ಯ, ಹಣ್ಣನ್ನು ಜನರಿಗೆ ವಿತರಿಸಿ, ಭಕ್ತಿ ಪ್ರದರ್ಶಿಸಿದರು.



ಮೈಸೂರಿನ ಸುಬ್ರಹ್ಮಣ್ಯೇಶ್ವರ ದೇವಾಲಯದ ರಥೋತ್ಸವಕ್ಕೆ ಶಾಸಕ ಕೆ.ಹರೀಶ್‌ಗೌಡ ಚಾಲನೆ ನೀಡಿದರು.

23ನೇ ವಾರ್ಡ್‌ನಲ್ಲಿ ರಥೋತ್ಸವ: ಮೈಸೂರು ಮಹಾನಗರಪಾಲಿಕೆಯ 23ನೇ ವಾರ್ಡ್ ವ್ಯಾಪ್ತಿಯಲ್ಲಿರುವ ಸುಬ್ಬರಾಯನ ಕೆರೆಯಲ್ಲಿರುವ ಪುರಾತನ ಸುಬ್ರಮಣ್ಯ ದೇವಾಲಯದಲ್ಲಿ ಷಷ್ಠಿ ಅಂಗವಾಗಿ ಸಂಪ್ರದಾಯದಂತೆ ರಥೋತ್ಸವ ಆಯೋಜಿಸಲಾಗಿತ್ತು. ಶಾಸಕ ಕೆ.ಹರೀಶ್ ಗೌಡ ರಥ ಎಳೆದು ಚಾಲನೆ ನೀಡಿದರು. ರಥೋತ್ಸವದ ವೇಳೆ ಸುತ್ತಮುತ್ತಲಿನ ನಿವಾಸಿಗಳು ಪಾಲ್ಗೊಂಡು ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಪಾಲಿಕೆ ಮಾಜಿ ಸದಸ್ಯ ಜೆ.ಗೋಪಿ, ಮುಖಂಡರಾದ ಭಗತ್ ಸಿಂಗ್ ಕುಮಾರ್, ವಿಜಯ್, ಜೋಗಿ ಮಂಜು, ನಾಗಣ್ಣ, ಮಂಜುನಾಥ್, ನವೀನ್, ರಾಜೇಶ್ ಉಪಸ್ಥಿತರಿದ್ದರು.

ಗ್ರಾಮೀಣ ಪ್ರದೇಶದಲ್ಲೂ ಷಷ್ಠಿ ಸಂಭ್ರಮ: ಜಿಲ್ಲೆಯ ಬಹುತೇಕ ಎಲ್ಲಾ ಗ್ರಾಮಗಳಲ್ಲಿ ಷಷ್ಠಿ ಸಂಭ್ರಮ ಮನೆ ಮಾಡಿತ್ತು. ಹುತ್ತಗಳಿಗೆ ತನಿ ಎರೆದು ಜನ ಪೂಜೆ ಸಲ್ಲಿಸುವ ಮೂಲಕ ನಾಗದೋಷ ಪರಿಹಾರಕ್ಕಾಗಿ ಪ್ರಾರ್ಥಿಸಿದರು. ಹಬ್ಬದ ಅಂಗವಾಗಿ ಕೆಲವೆಡೆ ಅನ್ನದಾಸೋಹದ ವ್ಯವಸ್ಥೆ ಮಾಡಲಾಗಿತ್ತು.

ದೇಶ - ವಿದೇಶ

1984ರ ಸಿಖ್ ವಿರೋಧಿ ದಂಗೆ 'ನರಮೇಧ' ಪ್ರಸ್ತಾವನೆ ತಿರಸ್ಕರಿಸಿದ ಕೆನಡಾ ಸಂಸತ್ತು



ಕೆನಡಾ: ಚಂದ್ರ ಆರ್ಯರಂತಹ ಸಂಸದರ ತೀವ್ರ ವಿರೋಧದ ನಡುವೆಯೂ 1984ರ ಸಿಖ್ ವಿರೋಧಿ ದಂಗೆಯನ್ನು ನರಮೇಧ ಎಂದು ಘೋಷಿಸುವ ಪ್ರಸ್ತಾವನೆಯನ್ನು ಕೆನಡಾ ಸಂಸತ್ತು ತಿರಸ್ಕರಿಸಿದೆ.

ಈ ಪ್ರಸ್ತಾಪವನ್ನು ವಿರೋಧಿಸಿದ್ದಕ್ಕಾಗಿ ಸಂಸತ್ತಿನ ಕಟ್ಟಡದೊಳಗೆ ಬೆದರಿಕೆಗಳನ್ನು ಎದುರಿಸಬೇಕಾಯಿತು ಎಂದು ಚಂದ್ರ ಆರ್ಯ ಹೇಳಿದ್ದು, ಇದು ರಾಜಕೀಯವಾಗಿ ಪ್ರಬಲವಾದ ಖಲಿಸ್ತಾನಿ ಲಾಬಿಯಿಂದ ಪ್ರಭಾವಿತವಾಗಿದೆ ಎಂದು ಆರೋಪಿಸಿದ್ದಾರೆ. ಹಿಂದೂ ಕೆನಡಿಯನ್ನರು ತಮ್ಮ ಸ್ಥಳೀಯ ಸಂಸತ್ ಸಂಸದರೊಂದಿಗೆ ಅಂತಹ ಪ್ರಸ್ತಾವನೆಯನ್ನು ತಮ್ಮ ಬದ್ಧತೆ ತೋರಿಸಬೇಕೆಂದು ಒತ್ತಾಯಿಸಿದ್ದಾರೆ. ನ್ಯೂ ಡೆಮಾಕ್ರಟಿಕ್ ಪಾರ್ಟಿ ಸಂಸದ ಸುಖ್ ಧಲಿವಾಲ್ ಅವರು ವಿದೇಶಾಂಗ ವ್ಯವಹಾರಗಳು ಮತ್ತು ಅಂತರರಾಷ್ಟ್ರೀಯ ಅಭಿವೃದ್ಧಿಯ ಹೌಸ್ ಆಫ್ ಕಾಮನ್ಸ್ ಸ್ಥಾಯಿ ಸಮಿತಿ ಮುಂದೆ ಈ ಪ್ರಸ್ತಾಪವನ್ನು ಮಂಡಿಸಿದ್ದರು. ಈ ಕ್ರಮವನ್ನು ವಿರೋಧಿಸಿದ ಭಾರತೀಯ ಮೂಲದ ಸಂಸದ ಚಂದ್ರ ಆರ್ಯ ಸಂಸತ್ತಿನ ಹೌಸ್ ಆಫ್ ಕಾಮನ್ಸ್‌ನಲ್ಲಿ ಈ ಮಸೂದೆಯನ್ನು ವಿರೋಧಿಸಿದ ಏಕೈಕ ಸಂಸದರಾಗಿದ್ದಾರೆ.

ಮಹಾರಾಷ್ಟ್ರದ ನೂತನ ಡಿಸಿಎಂ ಅಜಿತ್ ಪವಾರ್ ಎಲ್ಲಾ ಕೇಸ್‌ಗಳು ವಜಾ



ಮುಂಬೈ: ಬಿಜೆಪಿ ನೇತೃತ್ವದ ಮಹಾರಾಷ್ಟ್ರದ ನೂತನ ಮಹಾಯುತಿ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಿ 6ನೇ ಬಾರಿಗೆ ಅಧಿಕಾರ ಸ್ವೀಕರಿಸಿದ ಎನ್‌ಸಿಪಿ ನಾಯಕ ಅಜಿತ್ ಪವಾರ್ ಅವರಿಗೆ ನ್ಯಾಯಾಲಯದಿಂದ ಬಿಗ್ ರಿಲೀಫ್ ಸಿಕ್ಕಿದ್ದು, ಅವರಿಗೆ ಸಂಬಂಧಿಸಿದ 1,000 ಕೋಟಿ ರೂಪಾಯಿಗೂ ಹೆಚ್ಚು ಮೌಲ್ಯದ ಆಸ್ತಿಗಳನ್ನು ಐಟಿ ಇಲಾಖೆ ಬಿಡುಗಡೆ ಮಾಡಿದೆ.

ಮಹಾರಾಷ್ಟ್ರದ ಬೇನಾಮಿ ಆಸ್ತಿ ವಹಿವಾಟು ತಡೆ ಮೇಲ್ಮನವಿ ನ್ಯಾಯಾಧೀಕರಣವು ಅಜಿತ್ ಪವಾರ್ ಮತ್ತು ಅವರ ಕುಟುಂಬಕ್ಕೆ ಸಂಬಂಧಿಸಿದ ಆರೋಪಗಳನ್ನು ವಜಾಗೊಳಿಸಿ ಪ್ರಮಾಣ ವಚನ ಸ್ವೀಕರಿಸಿದ ಮರುದಿನವೇ ಆದೇಶ ಹೊರಡಿಸಿದೆ. ನ್ಯಾಯಾಲಯದ ಆದೇಶದ ನಂತರ, ಆದಾಯ ತೆರಿಗೆ ಇಲಾಖೆಯು 2021ರಲ್ಲಿ ವಶಪಡಿಸಿಕೊಂಡಿತ್ತು. ಅಜಿತ್ ಪವಾರ್ ಬೇನಾಮಿ ಆಸ್ತಿ ಹೊಂದಿದ್ದರ ವಿರುದ್ಧ ಯಾವುದೇ ಮಹತ್ವದ ಸಾಕ್ಷ್ಯಾಧಾರ ಸಿಕ್ಕಿಲ್ಲ ಎಂದು ನ್ಯಾಯಪೀಠ ಹೇಳಿದೆ. ಸಂಬಂಧಪಟ್ಟ ಆಸ್ತಿಗಳಿಗೆ ಸಂಬಂಧಿಸಿದ ಎಲ್ಲಾ ಹಣಕಾಸಿನ ವಹಿವಾಟುಗಳನ್ನು ಬ್ಯಾಂಕ್ ವರ್ಗಾವಣೆ ಅಥವಾ ಇತರ ಕಾನೂನು ಮಾಧ್ಯಮಗಳನ್ನು ಬಳಸಿ ಕೊಂಡು ಕಾನೂನುಬದ್ಧ ಮಾರ್ಗಗಳ ಮೂಲಕ ಮಾಡಲಾಗಿದೆ ಎಂದು ನ್ಯಾಯಾಧೀಕರಣ ಹೇಳಿದೆ.

ಬಾಂಗ್ಲಾದೇಶದಲ್ಲಿ ಮತ್ತೊಂದು ಇಸ್ಕಾನ್ ದೇಗುಲದ ವಿಗ್ರಹಗಳಿಗೆ ಹಾನಿ



ಢಾಕಾ: ಬಾಂಗ್ಲಾದೇಶದಲ್ಲಿ ಹಿಂದೂಗಳು ಸೇರಿದಂತೆ ಅಲ್ಪಸಂಖ್ಯಾತರ ಮೇಲೆ ನಿರಂತರವಾಗಿ ದೌರ್ಜನ್ಯಗಳು ಹೆಚ್ಚುತ್ತಿದ್ದು, ಇದೀಗ ಮತ್ತೊಂದು ಇಸ್ಕಾನ್ ದೇವಸ್ಥಾನದ ಮೇಲೆ ದುರುಳರು ದಾಳಿ ನಡೆಸಿದ್ದಾರೆ. ಡಿ.6ರಂದು ಇಸ್ಕಾನ್ ದೇಗುಲದ ಮೇಲೆ ದಾಳಿ ನಡೆಸಿದ ದುಷ್ಕರ್ಮಿಗಳು, ಭಗವಾನ್ ರಾಧಾ ಕೃಷ್ಣನ ವಿಗ್ರಹವನ್ನು ವಿರೂಪಗೊಳಿಸಿ ಬೆಂಕಿ ಹಚ್ಚಿದ್ದಾರೆ. ಮೂಲಗಳ ಪ್ರಕಾರ, ದುಷ್ಕರ್ಮಿಗಳಿಂದ ದಾಳಿಗೊಳಗಾದ ನಮಹಟ್ಟ ಮಂದಿರದ ಶ್ರೀಕೃಷ್ಣನ ದೇಗುಲವನ್ನು ಇಸ್ಕಾನ್ ಸಂಸ್ಥೆ ನಡೆಸುತ್ತಿತ್ತು. ಆದರೆ ಈ ಘಟನೆಯಲ್ಲಿ ಯಾರಿಗೂ ಗಾಯಗಳು ಆದ ಬಗ್ಗೆ ವರದಿಯಾಗಿಲ್ಲ.

ಬಾಂಗ್ಲಾದೇಶದಲ್ಲಿ ನಡೆದಿದೆ ಎನ್ನಲಾದ ಈ ಘಟನೆಯನ್ನು ಕೋಲ್ಕತ್ತಾ ಇಸ್ಕಾನ್ ವಿಪಿ ರಾಧಾರಾಮ್ ದಾಸ್ ತಮ್ಮ ಎಕ್ಸ್ ಖಾತೆಯಲ್ಲಿ ಖಚಿತಪಡಿಸಿದ್ದು, ದೇವಾಲಯದ ಒಳಗಿದ್ದ ದೇವತೆಗಳ ವಿಗ್ರಹಗಳು ಮತ್ತು ಇತರ ವಸ್ತುಗಳನ್ನು ಸಂಪೂರ್ಣವಾಗಿ ಸುಟ್ಟು ಹಾಕಲಾಗಿದೆ. ಧ್ವಂಸಗೊಂಡ ಧಾರ್ಮಿಕ ಕೇಂದ್ರವು ತುರಾಗ್ ಪೊಲೀಸ್ ಠಾಣೆ ವ್ಯಾಪ್ತಿಯ ಢಾಕಾದಲ್ಲಿದೆ. ದೇವಸ್ಥಾನದ ಹಿಂಭಾಗದಲ್ಲಿರುವ ತಗಡಿನ ಮೇಲ್ಛಾವಣಿ ಎತ್ತಿ ಪೆಟ್ರೋಲ್ ಅಥವಾ ಆಕ್ಟೇನ್ ಬಳಸಿ ಧಾರ್ಮಿಕ ಕೇಂದ್ರಕ್ಕೆ ಬೆಂಕಿ ಹಚ್ಚಲಾಗಿದೆ.

ಚೀನಾ ಜೊತೆ ಬಿಆರ್‌ಐ ಯೋಜನೆಗೆ ಭಾರತ ಆಕ್ಷೇಪವೆತ್ತಬಾರದು; ನೇಪಾಳ

ಕಠ್ಮಂಡು: ನೇಪಾಳ ಮತ್ತು ಚೀನಾ ಒಪ್ಪಂದ ಮಾಡಿಕೊಂಡಿರುವ 'ಬೆಲ್ಟ್ ಅಂಡ್ ರೋಡ್ ಇನಿಷಿಯೇಟಿವ್' (ಬಿಆರ್‌ಐ) ಬಗ್ಗೆ ಭಾರತ ಆಕ್ಷೇಪವೆತ್ತಬಾರದು. ಈ ಸಂಪರ್ಕ ಯೋಜನೆಯಿಂದ ಭಾರತವೂ ಪ್ರಯೋಜನ ಪಡೆಯಬಹುದು ಎಂದು ನೇಪಾಳ ಸಚಿವ ರಘುವೀರ್ ಮಹಾಸೇತ್ ಹೇಳಿದ್ದಾರೆ. ನೇಪಾಳದ ಮಾಜಿ ಉಪ ಪ್ರಧಾನಿ ಹಾಗೂ ವಿದೇಶಾಂಗ ಇಲಾಖೆ ಮಾಜಿ ಸಚಿವರೂ ಆಗಿರುವ ರಘುವೀರ್ ಮಹಾಸೇತ್, ನೇಪಾಳ ಮತ್ತು ಚೀನಾ ನಡುವೆ ರೈಲು ಮತ್ತು ರಸ್ತೆ ಮಾರ್ಗಗಳಂತಹ ಮೂಲ ಸೌಕರ್ಯ ಅಭಿವೃದ್ಧಿಯಾದರೆ, ಅದನ್ನು ಭಾರತವೂ ಬಳಸಿಕೊಳ್ಳಬಹುದು. ಹಾಗಾಗಿ, ಈ ಒಪ್ಪಂದದ ಬಗ್ಗೆ ಭಾರತ ಕಳವಳಪಡುವ ಅಗತ್ಯವಿಲ್ಲ ಎಂದು ಪ್ರತಿಪಾದಿಸಿದ್ದಾರೆ.

ಜಾಗತಿಕ ಮಟ್ಟದಲ್ಲಿ ಚೀನಾದ ಪ್ರಭಾವವನ್ನು ವಿಸ್ತರಿಸುವ ನಿಟ್ಟಿನಲ್ಲಿ ಆ ದೇಶದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರ ಮಹಾತ್ವಕಾಂಕ್ಷಿಯ ಯೋಜನೆಯಾಗಿರುವ ಬಿಆರ್‌ಐ ವಿರುದ್ಧ ಧ್ವನಿ ಎತ್ತಿದ ಮೊದಲ ರಾಷ್ಟ್ರ ಭಾರತ. ಭಾರತದ ಸಾರ್ವಭೌಮತೆ ಹಾಗೂ ಸಮಗ್ರತೆಯನ್ನು ನಿರ್ಲಕ್ಷಿಸಿ ಈ ಯೋಜನೆಯನ್ನು ಕಾರ್ಯಗತಗೊಳಿಸಲು ಚೀನಾ ಮುಂದಾಗಿದೆ. ಈ ಯೋಜನೆಯನ್ನು ವಿರೋಧಿಸುವ ಭಾರತದ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಈ ಹಿಂದೆ ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಇತ್ತೀಚೆಗೆ ಹೇಳಿದ್ದಾರೆ.

ಹೊಟ್ಟೆಗೆ ಗುಂಡು ಹೊಕ್ಕಿದ್ದರೂ ಪ್ರಯಾಣಿಕರ ಸುರಕ್ಷತೆಗಾಗಿ ವಾಹನ ಚಲಾಯಿಸಿದ ಚಾಲಕ!

ಅರಾ: ಬಿಹಾರದ ಭೋಜ್‌ಪುರ ಜಿಲ್ಲೆಯಲ್ಲಿ ಜೀಪ್ ಚಾಲಕ ಸಂತೋಷ್ ಸಿಂಗ್ ಅವರು ತಮ್ಮ ಹೊಟ್ಟೆಗೆ ಗುಂಡು ಹೊಕ್ಕಿದ್ದರೂ ಕೆಲವು ಕಿಲೋಮೀಟರ್‌ಗಳವರೆಗೆ ವಾಹನವನ್ನು ಚಲಾಯಿಸುವ ಮೂಲಕ ಪ್ರಯಾಣಿಕರನ್ನು ಸುರಕ್ಷಿತವಾಗಿ ರಕ್ಷಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸಿಂಗ್ ತನ್ನ ಜೀಪಿನಲ್ಲಿ 14–15 ಜನರೊಂದಿಗೆ 'ತಿಲಕ್' ಸಮಾರಂಭದಿಂದ ಹಿಂದಿರುಗುತ್ತಿದ್ದಾಗ, ಬೈಕ್‌ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು ಜೌನ್ ಗ್ರಾಮದ ಬಳಿ ವಾಹನವನ್ನು ಹಿಂಬಾಲಿಸಿ, ಗುಂಡಿನ ದಾಳಿ ನಡೆಸಿದ್ದಾರೆ. ಈ ವೇಳೆ ಚಾಲಕ ಸಂತೋಷ್ ಸಿಂಗ್ ಅವರ ಹೊಟ್ಟೆಗೆ ಗುಂಡು ತಗುಲಿದೆ. ಸಿಂಗ್ ದಾಳಿಯಲ್ಲಿ ಗಾಯಗೊಂಡಿದ್ದರೂ ವಾಹನವನ್ನು ನಿಲ್ಲಿಸದೇ ನೋವಿನಲ್ಲೇ ಪ್ರಯಾಣಿಕರ ಸುರಕ್ಷತೆ ಖಾತ್ರಿಪಡಿಸಿಕೊಳ್ಳಲು ಕೆಲವು ಕಿಲೋಮೀಟರ್‌ಗಳಷ್ಟು ದೂರ ವಾಹನ ಓಡಿಸುತ್ತಲೇ ಇದ್ದರು. ಅಂತಿಮವಾಗಿ ಸಿಂಗ್ ವಾಹನವನ್ನು ಸುರಕ್ಷಿತ ಸ್ಥಳದಲ್ಲಿ ನಿಲ್ಲಿಸಿದರು ಎಂದು ಪೊಲೀಸರು ಹೇಳಿದ್ದಾರೆ. ನಂತರ ಜೀಪಿನಲ್ಲಿದ್ದ ಇತರೆ ಪ್ರಯಾಣಿಕರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಪೊಲೀಸರು ತಕ್ಷಣ ಸ್ಥಳಕ್ಕೆ ಧಾವಿಸಿ ಸಿಂಗ್ ಅವರನ್ನು ಹತ್ತಿರದ ಆಸ್ಪತ್ರೆಗೆ ಕರೆದೊಯ್ದರು. ಬುಧವಾರ ಮತ್ತು ಗುರುವಾರ ಮಧ್ಯರಾತ್ರಿ ಈ ಘಟನೆ ನಡೆದಿದೆ. ಅರಾದಲ್ಲಿರುವ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ನಂತರ ಸಿಂಗ್ ಅವರ ಹೊಟ್ಟೆ ಹೊಕ್ಕಿದ್ದ ಬುಲೆಟ್ ಅನ್ನು ಹೊರತೆಗೆಯಲಾಗಿದೆ.

ಜಿಲ್ಲೆಯಾದ್ಯಂತ ಷಷ್ಠಿ ಹಬ್ಬ ಆಚರಣೆ

ಬ್ರಹ್ಮ ರಥೋತ್ಸವ, ಉತ್ಸವ, ನಾಗಪ್ಪನಿಗೆ ಹಾಲಾಭಿಷೇಕ, ಮಹಾಪೂಜೆ, ಅನ್ನಸಂತರ್ಪಣೆ


ಕೂಡಿಗೆಯಲ್ಲಿರುವ ಉದ್ಭವ ಸುಬ್ರಮಣ್ಯ ಸ್ವಾಮಿ ರಥೋತ್ಸವ ಶನಿವಾರ ಶ್ರದ್ಧಾಭಕ್ತಿಯಿಂದ ನೆರವೇರಿತು.


ವಿರಾಜಪೇಟೆ ಶಿವಕೇರಿಯಲ್ಲಿರುವ ಶ್ರೀ ದುರ್ಗಿ ವಿಷ್ಣುಮೂರ್ತಿ ನಾಗ ದೇವ ಸ್ಥಾನದಲ್ಲಿ ನಾಗದೇವರಿಗೆ ಹಾಲು ಎರೆದು ಅಭಿಷೇಕ, ಪೂಜೆ ನಡೆಯಿತು.

ಮಡಿಕೇರಿ, ಡಿ.7– ಜಿಲ್ಲೆಯಾದ್ಯಂತ ಶನಿವಾರ ಸುಬ್ರಹ್ಮಣ್ಯ ಸ್ವಾಮಿ ಷಷ್ಠಿಯನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು.

ಕುಶಾಲನಗರ: ಷಷ್ಠಿ ಹಬ್ಬದ ಹಾರಂಗಿ ಹಾಗೂ ಕಾವೇರಿ ನದಿಗಳ ಸಂಗಮ ಕ್ಷೇತ್ರ ಕೂಡಿಗೆಯಲ್ಲಿರುವ ಉದ್ಭವ ಸುಬ್ರಮಣ್ಯ ಸ್ವಾಮಿ ರಥೋತ್ಸವ ಶನಿವಾರ ಶ್ರದ್ಧಾಭಕ್ತಿಯಿಂದ ನೆರವೇರಿತು.

ಬೆಳಗ್ಗೆಯಿಂದಲೇ ದೇವಾಲಯದಲ್ಲಿ ವಿಶೇಷ ಪೂಜೆ, ಹೋಮ ಹವನಗಳು ಸೇರಿದಂತೆ ವಿವಿಧ ಧಾರ್ಮಿಕ ಪೂಜಾ ವಿಧಿಗಳು ಜರುಗಿದವು. ಬಳಿಕ 12–45ರ ಅಭಿಜಿನ್ ಲಗ್ನದಲ್ಲಿ ಸುಬ್ರಮಣ್ಯ ಸ್ವಾಮಿ ದೇವರ ಉತ್ಸವ ಮೂರ್ತಿಯನ್ನು ಪುಷ್ಪಾಲಂಕೃತ ರಥದಲ್ಲಿ ಪ್ರತಿಷ್ಠಾಪಿಸಲಾಯಿತು. ನಂತರ ರಥವು ದೇವಾಲಯದ ಕಿರಿದಾದ ರಸ್ತೆಯ ಮೂಲಕ ಸಾಗಿ ಬಂದು ರಾಜ್ಯ ಹೆದ್ದಾರಿಯನ್ನು ಸೇರಿದಾಗ ಹೆದ್ದಾರಿಯ ಇಕ್ಕೆಲಗಳಲ್ಲಿ ಸೇರಿದ್ದ ಭಕ್ತ ಸಮೂಹ ರಥದಲ್ಲಿನ ದೇವರನ್ನು ಕಣ್ತುಂಬಿಕೊಂಡು ಪುನೀತರಾದರು.

ಈ ಸಂದರ್ಭ ಟಾಟಾ ಕಾಫಿ ಸಂಸ್ಥೆ ವ್ಯವಸ್ಥಾಪಕರೂ ಆದ ದೇವಸ್ಥಾನ ಸಮಿತಿ ಅಧ್ಯಕ್ಷ ಕೆ.ಯು. ಸೋಮಯ್ಯ ಸೀನಿಯರ್ ಮ್ಯಾನೇಜರ್ ನವೀನ್, ಸತ್ಯನಾರಾಯಣ ವಸ್ತ್ರಹಾರಣ ಸಮಿತಿ ಅಧ್ಯಕ್ಷ ಪೊನ್ನಪ್ಪ, ಕಾರ್ಯದರ್ಶಿ ಶಿವಕುಮಾರ್, ಹನುಮ ಸೇನಾ ಸಮಿತಿ ಅಧ್ಯಕ್ಷ ಶಿವಕುಮಾರ್ ಇತರರಿದ್ದರು.

ಸಿದ್ದಾಪುರ: ಇತಿಹಾಸ ಪ್ರಸಿದ್ಧ ಬೈರಂಬಾಡದ ಸುಬ್ರಮಣ್ಯ ದೇವಸ್ಥಾನದಲ್ಲಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ಶ್ರದ್ಧಾಭಕ್ತಿಯೊಂದಿಗೆ ಷಷ್ಠಿ ಹಬ್ಬದ ಉತ್ಸವ ವಿಜೃಂಭಣೆಯಿಂದ ನಡೆಯಿತು.

ದೇವಾಲಯದ ಪ್ರಧಾನ ಅರ್ಚಕರ ಸಮ್ಮುಖದಲ್ಲಿ ಪೂಜಾ ಕೈಂಕರ್ಯಗಳೊಂದಿಗೆ ನಡೆಯಿತು. ಮೂರ್ನಾಡು, ನಾಪೋಕ್ಲು, ವಿರಾಜಪೇಟೆ, ಸಿದ್ದಾಪುರ, ಅಮ್ಮತ್ತಿ, ಪಾಲಿಬೆಟ್ಟ, ಒಂಟಿಯಂಗಡಿ, ಮರಗೋಡು, ಹಾಕತ್ತೂರು ಸೇರಿದಂತೆ ಜಿಲ್ಲೆಯ ನಾನಾ ಭಾಗಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದ ಭಕ್ತರು ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿ ತೀರ್ಥ ಪ್ರಸಾದ ಸ್ವೀಕರಿಸಿದರು. ತಂಡೋಪತಂಡವಾಗಿ ಬಂದು ಪೂಜೆ ಸಲ್ಲಿಸಿ ದೇವರ ದರ್ಶನ ಪಡೆದರು.

ವಿರಾಜಪೇಟೆ: ಶ್ರೀ ಸುಬ್ರಹ್ಮಣ್ಯ ಷಷ್ಠಿ ಅಂಗವಾಗಿ ಪಟ್ಟಣದ ಶಿವಕೇರಿಯಲ್ಲಿರುವ ಶ್ರೀ ದುರ್ಗಿ ವಿಷ್ಣುಮೂರ್ತಿ ನಾಗ ದೇವಸ್ಥಾನದಲ್ಲಿ ನಾಗ ದೇವರಿಗೆ ಹಾಲು ಎರೆದು ಅಭಿಷೇಕ, ಪೂಜೆ ನಡೆಯಿತು. ಮಧ್ಯಾಹ್ನ 1 ಗಂಟೆಗೆ ಮಹಾಪೂಜೆ ಬಳಿಕ ಶ್ರೀ ದುರ್ಗಿ ವಿಷ್ಣುಮೂರ್ತಿ ದೇವರ ಉತ್ಸವ ಮೂರ್ತಿ ದೇವಾಸ್ಥನದ ಆವರಣದಲ್ಲಿ ನೃತ್ಯ ಪ್ರದರ್ಶನ ನಡೆಯಿತು. ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ನಂತರ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ಈ ವೇಳೆ ದೇವಸ್ಥಾನದ ಅಧ್ಯಕ್ಷರಾದ ಚಂದ್ರಶೇಖರ್ ಮತ್ತು ಸಮಿತಿ ಸದಸ್ಯರುಗಳು ಹಾಜರಿದ್ದರು.

ನಾಪೋಕ್ಲು: ಸಮೀಪದ ಪಾಲೂರು ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ಶನಿವಾರ ಷಷ್ಠಿ ಹಬ್ಬದ ಪ್ರಯುಕ್ತ ನಾಗ ಪೂಜೆಯೊಂದಿಗೆ ಶ್ರದ್ಧಾ ಭಕ್ತಿಯಿಂದ ಜರುಗಿತು.

ನಾಗನಕಟ್ಟೆಯಲ್ಲಿ ನಾಗನ ಪ್ರತಿಕೃತಿಗಳಿಗೆ ಹಾಲು, ಎಳೆನೀರು ಅಭಿಷೇಕದೊಂದಿಗೆ ವಿಶೇಷ ಪೂಜಾ ನೆರವೇರಿಸಲಾಯಿತು. ಆ ಬಳಿಕ ದೇವಾಲಯದಲ್ಲಿ ಮಹಾಪೂಜೆ ತೀರ್ಥ ಪ್ರಸಾದ ವಿತರಣೆಯ ನಂತರ ಭಕ್ತಾದಿಗಳಿಗೆ ಅನ್ನದಾನ ನೆರವೇರಿತು. ಪೂಜಾ ವಿಧಿವಿಧಾನವನ್ನು ದೇವಾಲಯದ ಮುಖ್ಯ ಅರ್ಚಕ ದೇವಿ ಪ್ರಸಾದ ನೆರವೇರಿಸಿದರು. ಈ ಸಂದರ್ಭ ದೇವಾಲಯದ ಪಾರುಪತ್ತೆಗಾರ ಮನು ಟಿ.ಕೆ ಹಾಗೂ ಗಗನ್ ಮುತ್ತಪ್ಪ, ನಿರನ್ ಸೇರಿದಂತೆ ಊರ ಮತ್ತು ಪರ ಊರಿನ ಭಕ್ತಾದಿಗಳು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ ವಿವಿಧ ಪೂಜಾ ಕಾರ್ಯಗಳನ್ನು ನೆರವೇರಿಸಿ ಹರಕೆ ಕಾಣಿಕೆ ಒಪ್ಪಿಸಿ ಭಕ್ತಿ ಪರವಶರಾದರು.

ಕಕ್ಕುಂದಕಾಡು: ನಾಪೋಕ್ಲು ಸಮೀಪದ ಕಕ್ಕುಂದಕಾಡು ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ವರ್ಷಂಪ್ರತಿಯಂತೆ ಈ ವರ್ಷವೂ ಸುಬ್ರಹ್ಮಣ್ಯ ಷಷ್ಠಿ ಹಬ್ಬವನ್ನು ಶನಿವಾರ ಶ್ರದ್ಧಾ ಭಕ್ತಿಯಿಂದ ಸಂಪನ್ನಗೊಂಡಿತ್ತು.

ಷಷ್ಠಿ ಅಂಗವಾಗಿ ಬೆಳಗ್ಗೆಯಿಂದಲೇ ದೇವಾಲಯದಲ್ಲಿ ಪಂಚಾಮೃತ ಅಭಿಷೇಕ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ನೆರವೇರಿಸಲಾಯಿತು. ಈ ಸಂದರ್ಭ ಭಕ್ತಾದಿಗಳು ತಮ್ಮ ಇಷ್ಟಾರ್ಥ ಸಿದ್ದಿಗೆ ವಿವಿಧ ಪೂಜಾ ಕಾರ್ಯಗಳನ್ನು ನೆರವೇರಿಸಿಕೊಂಡ ಪುನೀತ ಭಾವವನ್ನು ಹೊಂದಿದರು.

ಮಧ್ಯಾಹ್ನ ಶ್ರೀ ವೆಂಕಟೇಶ್ವರನಿಗೆ ಗಂಟೆ ಜಾಗಟೆ ವೇದ ಘೋಷಗಳೊಂದಿಗೆ ವಿಶೇಷ ಮಹಾ ಪೂಜೆ ನೆರವೇರಿಸಿ ಮಹಾ ಮಂಗಳಾರತಿಯ ತೀರ್ಥ ಪ್ರಸಾದ ವಿತರಿಸಿದರು.

ಮನೆಯ ಅಂಗಳದಲ್ಲಿ ಕೊಳಕುಮಂಡಲ ಹಾವು

ಮಡಿಕೇರಿ: ವಿರಾಜಪೇಟೆ ಪಟ್ಟಣದ ಮೀನುಪೇಟೆಯ ಮನೆಯೊಂದರ



ಆವರಣದಲ್ಲಿ ವಿಷಪೂರಿತ ಕೊಳಕು ಮಂಡಲ ಹಾವು ಕಾಣಿಸಿಕೊಂಡು ಮನೆ ಮಂದಿಯಲ್ಲಿ ಆತಂಕ ಸೃಷ್ಟಿಸಿತ್ತು. ಮನೆಯ ಅಂಗಳದಲ್ಲಿ ಎರಡು ದಿನಗಳಿಂದ ಬೀಡು ಬಿಟ್ಟಿದ್ದ ಕೊಳಕು ಮಂಡಲ ಹಾವನ್ನು ಕಂಡ ಸ್ಥಳೀಯರು ಆಟೋ ಸ್ನೇಕ್ ಸತೀಶ್ ಅವರಿಗೆ ಮಾಹಿತಿ ನೀಡಿದ ಮೇರೆಗೆ ಸ್ಥಳಕ್ಕೆ ಆಗಮಿಸಿದ ಆಟೋ ಸ್ನೇಕ್ ಸತೀಶ್ ಹಾವನ್ನು ಸುರಕ್ಷಿತವಾಗಿ ಸೆರೆ ಹಿಡಿಯುವಲ್ಲಿ ಯಶಸ್ವಿಯಾದರು ಬಳಿಕ ಹಾವನ್ನು ಸಮೀಪದ ಅರಣ್ಯಕ್ಕೆ ಸುರಕ್ಷಿತವಾಗಿ ಬಿಡಲಾಯಿತು.


ಪಾಲೂರು ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ಶನಿವಾರ ಷಷ್ಠಿ ಹಬ್ಬದ ಪ್ರಯುಕ್ತ ನಾಗ ಪೂಜೆಯೊಂದಿಗೆ ಶ್ರದ್ಧಾ ಭಕ್ತಿಯಿಂದ ಜರುಗಿತು.

ಮಂಡ್ಯದಲ್ಲಿ ಮನೆಗಳ ಮೇಲೆ ಕನ್ನಡ ಬಾವುಟ ಹಾರಾಡಲಿ

ಮಂಡ್ಯ,ಡಿ.7– ಜಿಲ್ಲೆಯ ಎಲ್ಲಾ ಮನೆ ಮನೆಗಳ ಮೇಲೂ ಕನ್ನಡದ ಬಾವುಟ ಹಾರಿಸುವ ಮೂಲಕ ಜಿಲ್ಲೆಯ ಜನತೆ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಸ್ವಾಗತಿಸುವುದರ ಜೊತೆಗೆ ಸಮ್ಮೇಳನದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮತ್ತು 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷ ಚಲುವರಾಯ ಸ್ವಾಮಿ ಅವರು ಕರೆ ನೀಡಿದ್ದಾರೆ.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಸಾಹಿತ್ಯ ಸಮ್ಮೇಳನದ ನಗರ ಅಲಂಕಾರ ಸಮಿತಿ ವತಿಯಿಂದ ಸ್ವರ್ಣಸಂದ್ರದಲ್ಲಿ ಆಯೋಜಿಸಿದ್ದ ಮನೆ ಮನೆಗಳಲ್ಲಿ ಕನ್ನಡ ಬಾವುಟ ಕಾರ್ಯಕ್ರಮಕ್ಕೆ ಬಾವುಟ ಹಾರಿಸುವ ಮೂಲಕ ಸಾಂಕೇತಿಕವಾಗಿ ಚಾಲನೆ ನೀಡಿ ಮಾತನಾಡಿದರು.

ಮನೆಮನೆಗಳ ಮೇಲೆ ಕನ್ನಡ ಬಾವುಟ ಕಟ್ಟುವ ಕಾರ್ಯಕ್ರಮ ಕೇವಲ ಮಂಡ್ಯ ನಗರಕ್ಕೆ ಸೀಮಿತವಾಗದೇ ಜಿಲ್ಲೆಯ ಎಲ್ಲರ ಮನೆಮನೆಗಳ ಮೇಲೂ ಕನ್ನಡ ಬಾವುಟ ಹಾರಾಡಬೇಕು. ತಾಲೂಕು ಕೇಂದ್ರ, ಗ್ರಾಮ ಪಂಚಾಯತಿ ಕಚೇರಿಗಳ ಮೇಲೂ ಕನ್ನಡ ಬಾವುಟ ಹಾರಿಸಿ ಕನ್ನಡದ ಹಬ್ಬವನ್ನು ಮನೆಯ ಹಬ್ಬದ ರೀತಿಯಲ್ಲಿ ಆಚರಿಸಬೇಕು ಎಂದು ಹೇಳಿದರು.

ಸಾಹಿತ್ಯ ಸಮ್ಮೇಳನದ ಅಂಗವಾಗಿ ಡಿ.15 ರಂದು ಕನ್ನಡಕ್ಕಾಗಿ ಓಟ ಎಂಬ ಘೋಷ ವಾಕ್ಯದಡಿ ಹಮ್ಮಿಕೊಂಡಿರುವ ಮ್ಯಾರಥಾನ್‌ನಲ್ಲಿ ನಗರದ ಪ್ರತಿ ಮನೆಯಿಂದ ಕನಿಷ್ಠ ಒಬ್ಬ ಸದಸ್ಯರಾದರೂ ಪಾಲ್ಗೊಳ್ಳಬೇಕು ಎಂದರು.

ಶಾಸಕ ರವಿಕುಮಾರ್ ಮಾತನಾಡಿ, ಮೂವತ್ತು ವರ್ಷಗಳ ಬಳಿಕ ಮಂಡ್ಯದಲ್ಲಿ ನೆರವೇರುತ್ತಿರುವ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರತಿ ಪ್ರಜೆ ಭಾಗವಹಿಸಬೇಕು. ಇನ್ನೊಂದು ವಾರದಲ್ಲಿ ನಗರದ ಎಲ್ಲಾ ಮನೆಗಳ ಮೇಲೆ ಕನ್ನಡ ಬಾವುಟ ಹಾರಾಡಲಿದೆ ಎಂದು ಹೇಳಿದರು.

ಕಸಾಪ ಅಧ್ಯಕ್ಷ ನಾಡೋಜ ಮಹೇಶ್ ಜೋಶಿ ಮಾತನಾಡಿ, ಎಲ್ಲರ ಮನೆ ಮೇಲೆ ಕನ್ನಡ ಬಾವುಟ ಹಾರಿದಾಗ ಮನೆಮನದಲ್ಲಿ ಕನ್ನಡ ಕಂಪು ಮೂಡಲಿದೆ. ಬಾವುಟ ಹಾರಟ ನಮ್ಮ ಏಕತೆ, ಐಕ್ಯತೆ ಅಸ್ಮಿತೆಯ ಸಂಕೇತ. ಇದು ಕನ್ನಡದ ಹಿರಿಮೆ. ಕನ್ನಡದ ಅಭಿಮಾನದ ಕುರುಹು ಎಂದರು.

ಶಾಸಕರಾದ ಎ.ಬಿ.ರಮೇಶ್‌ಬಾಬು ಬಂಡೀ ಸಿದ್ದೇಗೌಡ, ದಿನೇಶ್ ಗೂಳಿಗೌಡರು, ಕಸಾಪ ಅಧ್ಯಕ್ಷರಾದ ನಾಡೋಜ ಮಹೇಶ್ ಜೋಶಿ, ಡಿಸಿ ಡಾ.ಕುಮಾರ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಜಿಪಂ ಸಿಇಓ ಶೇಖ್ ತನ್ವೀರ್ ಆಸೀಫ್, ನಗರಸಭಾ ಅಧ್ಯಕ್ಷ ಪ್ರಕಾಶ್, ಮುಡಾ ಅಧ್ಯಕ್ಷ ನಹೀಮ್, ಕಸಾಪ ಜಿಲ್ಲಾ ಸಂಚಾಲಕಿ ಮೀರಾ ಶಿವಲಿಂಗಯ್ಯ ಸೇರಿದಂತೆ ನಗರಸಭಾ ಸದಸ್ಯರು, ಕನ್ನಡಪರ ಸಂಘಟನೆಗಳ ಮುಖಂಡರು ಸೇರಿದಂತೆ ಹಲವರು ಉಪಸ್ಥಿತರಿದ್ದರು.


ಮನೆ ಮನೆಗಳಲ್ಲಿ ಕನ್ನಡ ಬಾವುಟ ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ.

ಡಿ.17ರಂದು ಕನ್ನಡಕ್ಕಾಗಿ ಓಟ

ಮಂಡ್ಯ: 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಜಿಲ್ಲೆಯ ಪ್ರತಿಯೊಬ್ಬರೂ ತೊಡಗಿಕೊಳ್ಳುವ ಉದ್ದೇಶದಿಂದ ಡಿ.17ರಂದು ಕನ್ನಡಕ್ಕಾಗಿ ಓಟ ಎಂಬ ಘೋಷವಾಕ್ಯದಡಿ ಮ್ಯಾರಥಾನ್ ಹಮ್ಮಿಕೊಳ್ಳಲಾಗಿದೆ ಎಂದು ಶಾಸಕ ಹಾಗೂ ಸಾಹಿತ್ಯ ಸಮ್ಮೇಳನದ ನಗರ ಅಲಂಕಾರ ಸಮಿತಿ ಅಧ್ಯಕ್ಷ ಪಿ.ರವಿಕುಮಾರ್ ಗಣಿಗ ತಿಳಿಸಿದರು.

ಶನಿವಾರ ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಕನ್ನಡಕ್ಕಾಗಿ ಓಟ ಮ್ಯಾರಥಾನ್ ಸ್ಪರ್ಧೆಯನ್ನು ಆಯೋಜಿಸುವ ಸಂಬಂಧ ಪೂರ್ವಭಾವಿ ಸಭೆ ನಡೆಸಿ ಮಾತನಾಡಿದ ಅವರು, ಜಿಲ್ಲೆಯ ನಗರ ಪ್ರದೇಶದಲ್ಲಿ ಸುಮಾರು 1.50–2ಲಕ್ಷ ಜನಸಂಖ್ಯೆಯಿದ್ದು, ಅವರೆಲ್ಲರೂ ಕನ್ನಡ ಸಾಹಿತ್ಯ ಸಮ್ಮೇಳನದ ಆಚರಣೆಯಲ್ಲಿ ತೊಡಗಬೇಕೆಂಬ ಉದ್ದೇಶದಿಂದ ಮ್ಯಾರಥಾನ್ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದೆ. ಡಿ.17ರಂದು ಜಿಲ್ಲಾ ಕ್ರೀಡಾಂಗಣದಿಂದ ಬೆಳಿಗ್ಗೆ 6 ಗಂಟೆಗೆ ಪ್ರಾರಂಭವಾಗಿ ಸಂಜಯ ವೃತ್ತ ಬೆಂಗಳೂರು– ಮೈಸೂರು ಹೆದ್ದಾರಿ ಮಾರ್ಗವಾಗಿ ಸ್ಯಾಂಜೊ ಆಸ್ಪತ್ರೆಯ ಹಿಂಭಾಗದವರೆಗೆ ಸಮ್ಮೇಳನ ನಡೆಯುವ ಸ್ಥಳದವರೆಗೆ ನಡೆಯಲಿದೆ ಎಂದರು. ಸ್ಪರ್ಧೆಯಲ್ಲಿ ಎಲ್ಲರ ಬೆಂಬಲ ಅಗತ್ಯವಾಗಿದ್ದು, ಜಿಲ್ಲೆಯ ಎಲ್ಲಾ ವಯೋಮಾನದವರು ಭಾಗವಹಿಸಿ ಸ್ಪರ್ಧೆಯನ್ನು ಯಶಸ್ವಿಗೊಳಿಸಬೇಕು. ಕನ್ನಡ ಸಾಹಿತ್ಯ ಸಮ್ಮೇಳನದ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಡಿ.10 ರಿಂದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಂಬಂಧಿಸಿರುವ ಫ್ಲೆಕ್ಸ್, ಬ್ಯಾನರ್‌ಗಳನ್ನು ಬಿಟ್ಟು ಬೇರೆ ಯಾವುದೇ ರೀತಿಯ ಬ್ಯಾನರ್‌ಗಳನ್ನು ಅಳವಡಿಸಬಾರದು ಎಂದು ಹೇಳಿದರು.

ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, ಜಿಲ್ಲೆಯಲ್ಲಿ ಡಿ.20, 21, 22ರಂದು 3 ದಿನಗಳ ಕಾಲ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಬಹಳ ವಿಶೇಷ ಹಾಗೂ ವಿನೂತನ ರೀತಿಯಲ್ಲಿ ಏರ್ಪಡಿಸಲು ಕನ್ನಡಕ್ಕಾಗಿ ಓಟ ಎಂಬ ಮ್ಯಾರಥಾನ್ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಸಭೆಯಲ್ಲಿ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಎಡಿಸಿ ಶಿವಾನಂದಮೂರ್ತಿ, ಮೀರಾ ಶಿವಲಿಂಗಯ್ಯ, ಮಂಜುನಾಥ್ ಇತರರಿದ್ದರು.

ವಿದ್ಯುತ್ ತಂತಿ ತಗುಲಿ ಹೆಣ್ಣಾನೆ ಸಾವು



ಮಳವಳ್ಳಿ: ವಿದ್ಯುತ್ ತಂತಿ ತಗುಲಿ ಕಾಡಾನೆಯೊಂದು ಸಾವನ್ನಪ್ಪಿರುವ ಘಟನೆಯೊಂದು ಮಳವಳ್ಳಿ ತಾಲೂಕಿನ ಬೊಪ್ಪೇಗೌಡನಪುರ ಹೋಬಳಿಯ ಮಲ್ಲಿಕ್ಯಾತನಹಳ್ಳಿ ಗ್ರಾಮದ ಬಳಿ ನಡೆದಿದೆ.

ಮಲ್ಲಿಕ್ಯಾತನಹಳ್ಳಿ ಗ್ರಾಮದ ಹೊರವಲಯದ ಕಾಡಂಚಿನ ಬಳಿಯ ಜಿಬಿಎಲ್ ರಸ್ತೆಯ ಜಮೀನೊಂದರ ಬಳಿ ವಿದ್ಯುತ್ ತಂತಿ ತಗುಲಿ ಹೆಣ್ಣು ಆನೆಯೊಂದು ಮೃತಪಟ್ಟಿದೆ. ಆನೆ ಸತ್ತಿರುವ ಸ್ಥಳದ ಮೇಲ್ಭಾಗದಲ್ಲಿ ಹಾದು ಹೋಗಿದ್ದ 66 ಕೆವಿ ಮಾರ್ಗದ ವಿದ್ಯುತ್ ತಂತಿಯೊಂದು ತುಂಡಾಗಿ ಬಿದ್ದಿರುವ ಪರಿಣಾಮ ಸುಮಾರು 7ರಿಂದ 8 ವರ್ಷದ ಆನೆ ಸತ್ತಿದೆ ಎನ್ನಲಾಗಿದೆ.

ಕಳೆದ ಎಂಟು–ಹತ್ತು ದಿನಗಳ ಹಿಂದೆಯೇ ಆನೆ ಸಾವನ್ನಪ್ಪಿರುವ ಸಾಧ್ಯತೆ ಇದೆ. ಇದರಿಂದ ಆನೆಯ ದೇಹ ಸಂಪೂರ್ಣ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ. ಘಟನಾ ಸ್ಥಳಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿ ರಾಜು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮಹದೇವಸ್ವಾಮಿ, ಪ್ರಭಾರ ವಲಯ ಅರಣ್ಯಾಧಿಕಾರಿ ಗವಿಯಪ್ಪ ಸಹಾಯಕ ವಲಯ ಅರಣ್ಯಾಧಿಕಾರಿ ಶಿವರಾಜು ಹಾಗೂ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸ್ಥಳದಲ್ಲೇ ಮರಣೋತ್ತರ ಪರೀಕ್ಷೆ ನಡೆಸಿ ಅಂತ್ಯಸಂಸ್ಕಾರ ನಡೆಸಲಾಯಿತು.

ಬಡವರ ಸಂಕಷ್ಟಕ್ಕೆ ಸ್ಪಂದಿಸಿದ ರಾಜೇಂದ್ರ ಶ್ರೀಗಳು ಮಹಾನ್ ಸಂತ

ರಾಜೇಂದ್ರ ಮಹಾಸ್ವಾಮಿಗಳ ಜಯಂತಿಯಲ್ಲಿ ಸಿಎಂ ಸಿದ್ದರಾಮಯ್ಯ ಬಣ್ಣನೆ


ಕೊಳ್ಳೇಗಾಲದ ನ್ಯಾಷನಲ್ ಸರ್ಕಾರಿ ಶಾಲಾ ಆವರಣದಲ್ಲಿ ವಿವಿಧ ಸಂಘಟನೆಗಳ ಸಹಕಾರದೊಂದಿಗೆ ಶನಿವಾರ ಏರ್ಪಡಿಸಲಾಗಿದ್ದ ರಾಜೇಂದ್ರ ಮಹಾಸ್ವಾಮಿಗಳವರ 109ನೇ ಜಯಂತಿ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

ಕೊಳ್ಳೇಗಾಲ, ಡಿ.7– ಜೆಎಸ್‌ಎಸ್ ವಿದ್ಯಾ ಸಂಸ್ಥೆ ದೊಡ್ಡ ಹೆಮ್ಮರವಾಗಲು, ವಿದೇಶದಲ್ಲೂ ಬೇರೂರಲು ಭದ್ರ ಬುನಾದಿ ಹಾಕಿದ್ದೆ ರಾಜೇಂದ್ರ ಮಹಾಸ್ವಾಮಿಗಳು, ಅವರ ಜಯಂತಿಯನ್ನು ಇಂದು ನಾನು ಸಂತಸದಿಂದ ಉದ್ಘಾಟಿಸಿರುವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಪಟ್ಟಣದ ನ್ಯಾಷನಲ್ ಸರ್ಕಾರಿ ಶಾಲಾ ಆವರಣದಲ್ಲಿ ವಿವಿಧ ಸಂಘಟನೆಗಳ ಸಹಕಾರದೊಂದಿಗೆ ಶನಿವಾರ ಏರ್ಪಡಿಸಲಾಗಿದ್ದ ರಾಜೇಂದ್ರ ಮಹಾಸ್ವಾಮಿಗಳವರ 109ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸುತ್ತೂರು ಶ್ರೀಕ್ಷೇತ್ರ ಹೆಮ್ಮರವಾಗಲು, ಬೃಹತ್ತಾಗಿ ಆಗಿ ದೇಶಾದ್ಯಂತ ಮಾತ್ರವಲ್ಲ ವಿದೇಶದಲ್ಲೂ ಬೆಳೆಯಲು ಶ್ರೀಗಳ ಪಾತ್ರ ಅಗಾಧವಾದುದು, ಶ್ರೀಗಳ ಸ್ಮರಿಸುವ ಈ ಕಾರ್ಯಕ್ರಮ ನಿಜಕ್ಕೂ ಶ್ಲಾಘನಿಯ, ಅವರೊಬ್ಬರು ಮಹಾನ್ ಸಂತರು, ಹಳ್ಳಿಯಿಂದ ಬಂದ ಶ್ರೀಗಳು ಬಡಜನರ ಸಂಕಷ್ಟ ಅರಿತು ಜನರ ಬದುಕಿಗೆ ಸ್ಪಂದಿಸುವ ಮೂಲಕ ನೆರವಾದರು ಎಂದರು.

ಮನುಷ್ಯ ಮನುಷ್ಯನನ್ನು ಪ್ರೀತಿಸಬೇಕು ಎಂಬುದೇ ಮಾನವ ಧರ್ಮ, ಇದನ್ನೆ ಸಾಧು, ಸಂತರೂ, ಸೂಫಿಗಳು, ಗಣ್ಯರು ಹೇಳಿದ್ದಾರೆ. ಶ್ರೀಗಳು ಸಹಾ ಮಾನವ ಜನ್ಮಸಾರ್ಥಕತೆಗೆ ಶಿಕ್ಷಣ ಮುಖ್ಯ ಎಂಬುದನ್ನ ಮನಗಂಡು ಶಿಕ್ಷಣ ಸಂಸ್ಥೆ ಪ್ರಾರಂಭಿಸಿ ಲಕ್ಷಾಂತರ ಜನರ ಬದುಕಿಗೆ ದಾರಿ ದೀಪವಾದರು ಎಂದರು.

ಸಚಿವ ವೆಂಕಟೇಶ್ ಮಾತನಾಡಿ, ಸುತ್ತೂರು ಮಠ ಮೈಸೂರು ಜಿಲ್ಲೆಯಲ್ಲಿರುವುದು ಹೆಮ್ಮೆಯ ವಿಚಾರ. ಶ್ರೀ ಕ್ಷೇತ್ರ ಜನಪರ, ಸಮಾಜಪರ ಕೆಲಸ ಮಾಡುತ್ತಿದ್ದು ಇಂತಹ ಕೆಲಸ ಇನ್ನಷ್ಟು ಸಾಗಲಿ, ಆ ಮೂಲಕ ಸುತ್ತೂರು ಮಠ ಬೃಹತ್ ಎತ್ತರಕ್ಕೆ ಬೆಳೆದು ಜನ ಸಾಮಾನ್ಯರ ಪರ ಹೆಚ್ಚಿನ ಕೆಲಸ ಮಾಡುವಂತಾಗಲಿ ಎಂದರು.

ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ಈ ಭಾಗದ ಬಡ ಜನರ ಆರೋಗ್ಯ ಸೇವೆಗಾಗಿ ಕೊಳ್ಳೇಗಾಲ ಸರ್ಕಾರಿ ಆಸ್ಪತ್ರೆಯನ್ನು ಮಾದರಿಯನ್ನಾಗಿಸಬೇಕು ಎಂದರು. ಆಸ್ಪತ್ರೆಯಲ್ಲಿ ಮೂಲಕ ಹೆಚ್ಚಿನ ರೀತಿಯಲ್ಲಿ ರಕ್ತನಿಧಿ ಘಟಕ, ಹೃದಯರೋಗ ತಪಾಸಣಾ ವಿಭಾಗ ತೆರೆಯುವ ನಿಟ್ಟಿನಲ್ಲಿ ಮುಖ್ಯಮಂತ್ರಿಗಳು ಸಹಕರಿಸಬೇಕು. ರಾಜೇಂದ್ರ ಮಹಾಸ್ವಾಮಿಗಳವರ 109ನೇ ಜಯಂತಿ ಕಾರ್ಯಕ್ರಮ ಆಚರಣಾ ಸಮಿತಿಗೆ ನನ್ನನ್ನು ಅಧ್ಯಕ್ಷನನ್ನಾಗಿ ಮಾಡಿದ್ದು ಸಂತಸದ ವಿಚಾರ ಎಂದರಲ್ಲದೆ, ಬ್ಲಡ್ ಬ್ಯಾಂಕ್ ತೆರೆಯಲು, ಹೃದಯ ಘಟಕ ಇನ್ನಿತರೆ ಯೋಜನೆಗಳಿಗೆ ಮುಂದಿನ ಬಜೆಟ್‌ನಲ್ಲಿ ಘೋಷಣೆ ಮಾಡುವ ಮೂಲಕ ಆದ್ಯತೆ ನೀಡಬೇಕು ಎಂದರು.


ಕೊಳ್ಳೇಗಾಲ ವ್ಯಾಪ್ತಿ ಮಾತ್ರವಲ್ಲ ಬಹುತೇಕ ಕಡೆ ಇ ಸ್ವತ್ತು ವಿತರಣೆಯಲ್ಲಿ ಸಾಕಷ್ಟು ಸಮಸ್ಯೆಗಳಿದ್ದು ಮುಖ್ಯಮಂತ್ರಿಗಳು ಈ ಸಂಬಂಧ ಪರಿಶೀಲಿಸಿ ಎ ಖಾತೆ ಮತ್ತು ಬಿ ಖಾತೆ ನೀಡಲು ಅವಕಾಶ ಕಲ್ಪಿಸುವ ಮೂಲಕ ಸಾರ್ವಜನಿಕರಿಗೆ ಅವಕಾಶ ಮಾಡಿಕೊಡಬೇಕು, ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಮಹದೇಶ್ವರ ಬೆಟ್ಟದಲ್ಲಿ ಮುಖ್ಯಮಂತ್ರಿಗಳು ಶೀಘ್ರದಲ್ಲೆ ಸಂಪುಟ ಸಭೆ ನಡೆಸಲಿದ್ದು ಜಿಲ್ಲೆಯ ಸಮಗ್ರ ಅಭಿವೃದ್ದಿ ಮತ್ತು ಕೊಳ್ಳೇಗಾಲ ಕ್ಷೇತ್ರದ ಅನೇಕ ಸಮಸ್ಯೆಗಳಿಗೆ ಸ್ಪಂದಿಸಬೇಕು, ಅರಣ್ಯ ಭೂಮಿಯಲ್ಲಿ ವಾಸಿಸುವ ಕಂದಾಯದಾರರಿಗೆ ಹಕ್ಕು ಪತ್ರ ನೀಡುವ ನಿಟ್ಟಿನಲ್ಲಿ ಸರ್ಕಾರ ಸ್ಪಂದಿಸಬೇಕು ಎಂದರು.

ಹನೂರು ವಿಧಾನಸಭಾ ಕ್ಷೇತ್ರದ ಯುವ ನಾಯಕ, ಉದ್ಯಮಿ ನಿಶಾಂತ್ ಮಾತನಾಡಿ, ರಾಜೇಂದ್ರ ಶ್ರೀಗಳವರ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕಿರು ಸೇವಾ ಕಾರ್ಯ ಕೈಗೊಳ್ಳಲು ನನಗೆ ಶ್ರೀಮಠ ಜವಾಬ್ದಾರಿ ವಹಿಸಿದ್ದು ನನ್ನ ಸೌಭಾಗ್ಯ, ರಾಜೇಂದ್ರ ಮಹಾಸ್ವಾಮಿಗಳು ಹೆಣ್ಣು ಮಕ್ಕಳ ಕಲಿಕೆಗೆ ಹೆಚ್ಚಿನ ಪ್ರೋತ್ಸಾಹ ನೀಡಿದ ಸಂತರು, ವಿದ್ಯೆಯಷ್ಟೆ ದಾಸೋಹಕ್ಕೂ ಆದ್ಯತೆ ನೀಡುವ ಜೊತೆಗೆ ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಸಂಸ್ಥೆ ಮನ್ನಣೆಗೆ ಶ್ರೀಗಳ ಪ್ರೋತ್ಸಾಹ ಹೆಚ್ಚಿನ ಕಾರಣ ಎಂದರು.

ಸಾಲೂರು ಮಠಾಧ್ಯಕ್ಷರಾದ ಡಾ. ಶಾಂತ ಮಲ್ಲಿಕಾರ್ಜುನ ಸ್ವಾಮಿಜಿ, ಸಚಿವರಾದ ಎಚ್.ಸಿ.ಮಹದೇವಪ್ಪ, ಮಧು ಬಂಗಾರಪ್ಪ, ಶಾಸಕರುಗಳಾದ ಪುಟ್ಟರಂಗಶೆಟ್ಟಿ, ಗಣೇಶ ಪ್ರಸಾದ್, ಎಂ.ಆರ್. ಮಂಜುನಾಥ್, ಕಾಡಾ ಅಧ್ಯಕ್ಷ ಮರಿಸ್ವಾಮಿ, ಮಾಜಿ ಶಾಸಕ ಎಸ್. ಬಾಲರಾಜು, ಆರ್. ನರೇಂದ್ರ, ಜಿ.ಎನ್. ನಂಜುಂಡಸ್ವಾಮಿ, ಯುವ ಉದ್ಯಮಿ ನಿಶಾಂತ್, ಚಾಮುಲ್ ಅಧ್ಯಕ್ಷ ನಾಗೇಂದ್ರ, ಡಾ. ದತ್ತೇಶ್ ಕುಮಾರ್, ಅಧ್ಯಕ್ಷೆ ರೇಖಾ ರಮೇಶ್, ಎ.ಪಿ. ಶಂಕರ್, ಜಿಪಂ ಸಿಇಓ ಮೋನಾ ರೋತ್, ಎಸ್ಪಿ ಕವಿತ, ಜಿಲ್ಲಾಧಿಕಾರಿ ಶಿಲ್ಪಾನಾಗ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ವೀರಶೈವ ಮಹಾಸಭೆಯ ತಿಮ್ಮರಾಜಿಪುರ ಪುಟ್ಟಣ್ಣ, ರಾಜು, ವೀರಭದ್ರಸ್ವಾಮಿ ಮಹದೇವಸ್ವಾಮಿ ಇದ್ದರು.

ಷಷ್ಠಿ ದಿನವೇ ಮನೆಯಲ್ಲಿ ನಾಗರಹಾವು ಪ್ರತ್ಯಕ್ಷ

ಚಾಮರಾಜನಗರ, ಡಿ.7– ಷಷ್ಠಿ ಹಬ್ಬದ ದಿನವೇ ಮನೆಯಲ್ಲಿ ನಾಗರಹಾವೊಂದು



ನಗರದ ಹೊರವಲಯದ ಕಾಳನಹುಂಡಿಯ ರಸ್ತೆಯಲ್ಲಿರುವ ಮನೆಯೊಂದರಲ್ಲಿ ಕಾಣಿಸಿಕೊಂಡಿದೆ.

ಹೇಮಂತ್ ಎಂಬುವರ ಮನೆಯಲ್ಲಿ ಹಾವು ಕಾಣಿಸಿಕೊಂಡಿದೆ. ಹಾವನ್ನು ನೋಡಿ ಗಾಬರಿಗೊಂಡ ಮನೆಯವರು ಕೂಡಲೇ ಉರಗಪ್ರಿಯ ಸ್ನೇಕ್ ಅಶೋಕ್ ಅವರಿಗೆ ಕರೆ ಮಾಡಿ ಮಾಹಿತಿ ತಿಳಿಸಿದ್ದಾರೆ. ವಿಚಾರ ತಿಳಿದು ಮನೆಗೆ ಬಂದ ಅವರು ಹಾವನ್ನು ಹಿಡಿದು ಸುರಕ್ಷಿತ ಸ್ಥಳಕ್ಕೆ ಬಿಟ್ಟಿದ್ದಾರೆ.

ಹಾವಿಗೆ ಪೂಜೆ ಸಲ್ಲಿಸಿದ ಕುಟುಂಬದವರು: ನಾಡಿನೆಲ್ಲೆಡೆ ಶನಿವಾರ ಸುಬ್ರಹ್ಮಣ್ಯ ಷಷ್ಠಿ ಹಬ್ಬವನ್ನು ಸಂಭ್ರಮ ಆಚರಣೆ ಮಾಡಲಾಗುತ್ತಿದೆ. ಹುತ್ತಕ್ಕೆ ಹಾಲೆರೆದು ಪೂಜಿಸಲಾಗುತ್ತಿದೆ. ಈ ದಿನವೇ ಮನೆಯಲ್ಲಿ ನಾಗರಹಾವು ಕಾಣಿಸಿಕೊಂಡಿರುವುದು ಶುಭ ಸೂಚಕವಾಗಿದೆ ಎಂದು ಕುಟುಂಬದವರು ಹಾವಿಗೆ ನಮಿಸಿದ್ದಾರೆ.

ನಾವು ಆಗಷ್ಟೆ ಹುತ್ತಕ್ಕೆ ಹಾಲೆರೆದು ಬಂದಿದ್ದೇವು. ಮನೆಯಲ್ಲಿ ಹಾವು ಕಂಡು ಭಯ ಹಾಗೂ ಆಶ್ಚರ್ಯವಾಯಿತು. ನಂತರ ನಾವು ಉರಗಪ್ರಿಯ ಸ್ನೇಕ್ ಅಶೋಕ್ ಅವರಿಗೆ ಮಾಹಿತಿ ನೀಡಿ ಅವರು ಬಂದು ಹಾವನ್ನು ಹಿಡಿದ ಬಳಿಕ ಅದಕ್ಕೆ ನಮಿಸಿ, ಪೂಜೆ ಸಲ್ಲಿಸಿದೆವು. ಅನಂತರ ಅವರು ಹಾವನ್ನು ಸುರಕ್ಷಿತ ಸ್ಥಳದಲ್ಲಿ ಬಿಡುವುದಾಗಿ ಹೇಳಿ ತೆಗೆದುಕೊಂಡು ಹೋದರು ಎಂದು ಕುಟುಂಬದವರು ತಿಳಿಸಿದರು.

ಬೇಗೂರು ಗ್ರಾಪಂಗೆ ಉಪಾಧ್ಯಕ್ಷರ ಆಯ್ಕೆ

ಬೇಗೂರು(ಗುಂಡ್ಲುಪೇಟೆ): ಗ್ರಾಮ ಪಂಚಾಯತಿಯ ಉಪಾಧ್ಯಕ್ಷರ ಸ್ಥಾನಕ್ಕೆ ಬಿಜೆಪಿ ಬೆಂಬಲಿತ ಅಭ್ಯರ್ಥಿ ಗುರುಸ್ವಾಮಿ ಆಯ್ಕೆಯಾಗಿದ್ದಾರೆ.

ಗ್ರಾಮ ಪಂಚಾಯತಿಯ ಉಪಾಧ್ಯಕ್ಷ ಬಿ.ಆರ್. ಮಹದೇವಸ್ವಾಮಿ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಪುನೀತ್ ಕುಮಾರ್ ಮತ್ತು ಬಿಜೆಪಿಯಿಂದ ಗುರುಸ್ವಾಮಿ ನಾಮಪತ್ರ ಸಲ್ಲಿಸಿದರು. ಬಿಜೆಪಿ ಅಭ್ಯರ್ಥಿ ಗುರುಸ್ವಾಮಿ ಎಂಟು ಮತಗಳನ್ನು ಪಡೆಯುವ ಮೂಲಕ ಜಯಶೀಲರಾದರು.

ಕೆರೆಗೆ ಬಿದ್ದ ಯುವತಿ ಪ್ರಾಣ ರಕ್ಷಿಸಿದ ಹೋಂಗಾರ್ಡ್

ಕೊಳ್ಳೇಗಾಲ: ಮಾನಸಿಕ ಖಿನ್ನತೆಗೆ ಒಳಗಾಗಿ ಚಿಕ್ಕರಂಗನಾಥನ ಕೆರೆಗೆ ಬಿದ್ದ ವಿದ್ಯಾರ್ಥಿನಿಯನ್ನು ತನ್ನ ಪ್ರಾಣವನ್ನು ಲೆಕ್ಕಿಸದೆ ಪ್ರಾಣ ಉಳಿಸುವ ಮೂಲಕ ಹೋಂಗಾರ್ಡ್ ಕೃಷ್ಣಮೂರ್ತಿ ಮಾನವೀಯತೆ ಮೆರೆದಿದ್ದಾರೆ.


ಕೃಷ್ಣಮೂರ್ತಿ

ಖಾಸಗಿ ಕಾಲೇಜಿನ ಪ್ರಥಮ ಪಿಯುಸಿ ವಿದ್ಯಾರ್ಥಿನಿಯಾದ ಕಣ್ಣೂರು ಗ್ರಾಮದ ರಾಜಮ್ಮ(17) ಕೆರೆಗೆ ಬಿದ್ದ ವಿಚಾರ ತಿಳಿದ ಸ್ಥಳೀಯರು ವೇಲ್ ಕಟ್ಟಿ ಬಿಟ್ಟು ಕಾಪಾಡಲು ಯತ್ನಿಸಿದರು. ಆದರೆ ಅದು ಸಾಧ್ಯವಾಗಲಿಲ್ಲ. ತಕ್ಷಣ ಅಲ್ಲಿಯೇ ಇದ್ದ ಚಾಮರಾಜನಗರ ನಗರ ಯುನಿಟ್ ಗೃಹರಕ್ಷಕ ಸಿಬ್ಬಂದಿ ಕೃಷ್ಣಮೂರ್ತಿ ತಕ್ಷಣ ಕೆರೆಗೆ ಹಾರಿ ಪ್ರಾಣದ ಹಂಗು ತೊರೆದು ಆಕೆಯನ್ನು ರಕ್ಷಿಸಿದ್ದಾರೆ. ತಕ್ಷಣ ಸ್ಥಳಕ್ಕೆ ಆಗಮಿಸಿದ ಬಿಜೆಪಿ ನಾಯಕ ನಿಶಾಂತ್, ವೀರಶೈವ ಮಹಾಸಭೆ ಅಧ್ಯಕ್ಷ ಪುಟ್ಟಣ್ಣ ಇನ್ನಿತರರು ತಮ್ಮ ವಾಹನದಲ್ಲಿ ಆಸ್ಪತ್ರೆ ಸೇರಿಸಿ ಸೂಕ್ತ ಚಿಕಿತ್ಸೆ ಕೊಡಿಸಿದ್ದು ವೈದ್ಯರು ಸಹಾ ಯಾವುದೆ ಪ್ರಾಣಾಪಾಯವಿಲ್ಲ ಎಂದು ದೃಡಿಪಡಿಸಿದ್ದಾರೆ. ಯುವತಿ ಕೆರೆಗೆ ಬೀಳಲು ಮಾನಸಿಕ ಖಿನ್ನತೆ ಕಾರಣ ಎನ್ನಲಾಗುತ್ತಿದೆ.

ಮಾನಸಿಕ ಖಿನ್ನತೆಗೊಳಗಾಗಿರುವ ಈ ವಿದ್ಯಾರ್ಥಿನಿ ಈ ಹಿಂದೆಯೇ ಕಾಲೇಜಿನ ಕಾಂಪೌಂಡ್ ಹಾರಿ ಆತ್ಮಹತ್ಯೆಗೆ ಯತ್ನಿಸಿದ್ದರು. ಆಗ ಕಾಲೇಜು ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಮನವೊಲಿಸಿ ಆಕೆಯನ್ನು ಕಾಪಾಡಿದ್ದರು. ಇದೀಗ ಮತ್ತೊಮ್ಮೆ ಇದೇ ರೀತಿ ಆತ್ಮಹತ್ಯೆಗೆ ಯತ್ನಿಸಿರಬಹುದು ಎಂದು ಮೂಲಗಳು ತಿಳಿಸಿವೆ.

ಓದಿದ ಶಾಲೆಗಳ ಅಭಿವೃದ್ಧಿಗೆ ಕೈ ಜೋಡಿಸಬೇಕು

ಸತ್ತೇಗಾಲದಲ್ಲಿ ಶಾಲಾ ಕಟ್ಟಡ ನಿರ್ಮಿಸಿರುವ ಮರಿಸ್ವಾಮಿಯನ್ನು ಹಾಡಿ ಹೊಗಳಿದ ಸಿಎಂ

ಚಾಮರಾಜನಗರ, ಡಿ.7– ಪ್ರತಿಯೊಬ್ಬರು ತಾವು ಓದಿದ ಶಾಲೆಗಳ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಸತ್ತೇಗಾಲದಲ್ಲಿ ಹಿರಿಯ ಅಧಿಕಾರಿ ಮರಿಸ್ವಾಮಿ ಲಕ್ಷ್ಮಮ್ಮ, ಸೋಸಯ್ಯನ ಸಿದ್ದಯ್ಯ ಅವರ ಹೆಸರಿನಲ್ಲಿ ನಿರ್ಮಿಸಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿದರು.

ಸರ್ಕಾರವೇ ಎಲ್ಲವನ್ನು ಮಾಡಬೇಕು ಎಂದು ಕಾದು ಕೂರುವ ಬದಲು ಪ್ರತಿಯೊಬ್ಬರು ತಾವುಗಳು ಓದಿದ ಶಾಲೆ ಹಾಗೂ ಗ್ರಾಮಗಳ ಅಭಿವೃದ್ಧಿಗೆ ಮುಂದಾಗಬೇಕು. ಸತ್ತೇಗಾಲದಲ್ಲಿ ಮರಿಸ್ವಾಮಿ ಹಾಗೂ ಸಂಗಡಿಗರು ಒಗ್ಗೂಡಿ ಸುಮಾರು 2 ಕೋಟಿ ವೆಚ್ಚದಲ್ಲಿ ನೂತನ ಶಾಲಾ ಕಟ್ಟಡ ನಿರ್ಮಿಸಿರುವುದು ಎಲ್ಲರಿಗೂ ಮಾದರಿಯಾಗಿದೆ. ಅವರನ್ನು ನಾನು ಅಭಿನಂದಿಸುತ್ತೇನೆ ಎಂದು ತಿಳಿಸಿದರು. ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವರಾದ ಮಧು ಬಂಗಾರಪ್ಪ ಮಾತನಾಡಿ, ಸತ್ತೇಗಾಲ ಗ್ರಾಮದ ಶಾಲೆಯಲ್ಲಿ ಪ್ರಸ್ತುತ 217 ವಿದ್ಯಾರ್ಥಿಗಳು ಮಾತ್ರ ವ್ಯಾಸಂಗ ಮಾಡುತ್ತಿದ್ದು, ಮುಂದಿನ ಶೈಕ್ಷಣಿಕ ವರ್ಷದಲ್ಲಿ ಸುಮಾರು 400 ವಿದ್ಯಾರ್ಥಿಗಳನ್ನು ದಾಖಲಾತಿ ಮಾಡುವ ನಿಟ್ಟಿನಲ್ಲಿ ಜಿಲ್ಲೆಯ ಶಿಕ್ಷಣ ಇಲಾಖೆ ಜವಾಬ್ದಾರಿ ವಹಿಸಬೇಕು ಎಂದು ತಿಳಿಸಿದರು.

ನಿವೃತ್ತ ಪೊಲೀಸ್ ಮಹಾನಿರ್ದೇಶಕರಾದ ಮರಿಸ್ವಾಮಿ ಅವರು ಹಾಗೂ ಶಾಲೆಯ ಹಳೆ ವಿದ್ಯಾರ್ಥಿಗಳು ಸೇರಿ ನಿರ್ಮಿಸಿರುವ ಈ ಶಾಲೆಯನ್ನು ಉಳಿಸಿಕೊಂಡು ಮತ್ತಷ್ಟು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಶಿಕ್ಷಣ ಇಲಾಖೆ ಮಾಡಲಿದೆ ಎಂದು ಭರವಸೆ ನೀಡಿದರು.

ನಂತರ ಶಾಸಕರಾದ ಎಂ.ಆರ್. ಮಂಜುನಾಥ್ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸರ್ಕಾರ ಹಲವು ಜನಪರ ಯೋಜನೆಗಳನ್ನು ಜಾರಿಗೊಳಿಸಿ ಜನರಿಗೆ ಅನುಕೂಲ ಕಲ್ಪಿಸುತ್ತಿದೆ. ಹನೂರು ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಗೂ ಆದ್ಯತೆ ನೀಡಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ಶಾಲಾ ನಿರ್ಮಾಣದ ರೂವಾರಿಯಾದ ನಿವೃತ್ತ ಪೊಲೀಸ್ ಮಹಾನಿರ್ದೇಶರಾದ ಮರಿಸ್ವಾಮಿ ಹಾಗೂ ದಾನಿಗಳನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಸಚಿವರಾದ ಕೆ.ವೆಂಕಟೇಶ್, ಡಾ.ಎಚ್.ಸಿ.ಮಹದೇವಪ್ಪ, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಎ.ಆರ್.ಕೃಷ್ಣ ಮೂರ್ತಿ, ಎಚ್.ಎಂ.ಗಣೇಶ ಪ್ರಸಾದ್, ಕಾಡಾ ಅಧ್ಯಕ್ಷ ಮರಿಸ್ವಾಮಿ, ಮಾಜಿ ಶಾಸಕರಾದ ಆರ್.ನರೇಂದ್ರ, ಜಿ.ಎನ್.ನಂಜುಂಡಸ್ವಾಮಿ, ಜಿಲ್ಲಾಧಿಕಾರಿ ಶಿಲ್ಪಾನಾಗ್, ಎಸ್ಪಿ ಡಾ.ಬಿ.ಟಿ. ಕವಿತಾ, ಸಿಇಒ ಮೋನಾರೋತ್, ಸತ್ತೇಗಾಲ ಗ್ರಾಪಂ ಉಪಾಧ್ಯಕ್ಷರಾದ ಸುವರ್ಣ ಸೇರಿದಂತೆ ಇನ್ನಿತರರು ಇದ್ದರು.


ಸತ್ತೇಗಾಲದಲ್ಲಿ ನೂತನವಾಗಿ ನಿರ್ಮಿಸಿರುವ ಲಕ್ಷ್ಮಮ್ಮ, ಸೋಸಯ್ಯನ ಸಿದ್ದಯ್ಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನೂತನ ಕಟ್ಟಡವನ್ನು ಸಿಎಂ ಸಿದ್ದರಾಮಯ್ಯ ಉದ್ಘಾಟಿಸಿದರು.

ಸತ್ತೇಗಾಲ ಪಪಂ ರಚನೆಗೆ ಸಿಎಂ ಭರವಸೆ

ನಮ್ಮ ಬಜೆಟ್ 3 ಲಕ್ಷದ 71 ಸಾವಿರ ಕೋಟಿ. ಅದರಲ್ಲಿ 1.20 ಲಕ್ಷ ಕೋಟಿ ರೂ.ಗಳನ್ನು ಅಭಿವೃದ್ಧಿಗಾಗಿ ಮೀಸಲಿಡಲಾಗಿದೆ. ಸತ್ತೇಗಾಲದಲ್ಲಿ 18 ಸಾವಿರ ಜನಸಂಖ್ಯೆಯಿದ್ದು, 14 ಮತಗಟ್ಟೆಗಳಿವೆ. ಹೀಗಾಗಿ ಗ್ರಾಮದ ಅಭಿವೃದ್ಧಿಗೆ ಸತ್ತೇಗಾಲವನ್ನು ಪಟ್ಟಣ ಪಂಚಾಯಿತಿ ಮಾಡಲು ಮನವಿ ಸಲ್ಲಿಸಿದ್ದಾರೆ. ಇದನ್ನು ಮಾಡಿಕೊಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಧನಗೆರೆ ಜಾಗೀರ್‌ದಾರ್ ಅಣೆಕಟ್ಟೆಗೆ ನೀರು ಒದಗಿಸುವ ಜೊತೆಗೆ ಬೇಸಿಗೆ ಬೆಳೆಗೆ ನೀರು ಕೊಡಬೇಕೆಂದು ಮನವಿ ಮಾಡಿದ್ದಾರೆ. ಈ ಬಗ್ಗೆ ಪರಿಶೀಲಿಸಿ ನೀಡಿದ್ದರೆ ಮಾಡಿಕೊಡುವ ಭರವಸೆ ನೀಡಿದರು.

ಈ ಬಾರಿ ರಾಜ್ಯದಲ್ಲಿ ಉತ್ತಮ ಮಳೆ ಆಗಿದ್ದು ಎಲ್ಲೆಡೆ ಬಿತ್ತನೆಯಾಗಿದೆ. ರೈತರ ಮುಖದಲ್ಲಿ ಮಂದಹಾಸ ಕಾಣುತ್ತಿದೆ. ಪ್ರತಿ ವರ್ಷ ಮಳೆ ಉತ್ತಮವಾಗಿ ಆಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂದು ತಿಳಿಸಿದರು.

ಹಿರಿಯ ಕೆಎಎಸ್ ಅಧಿಕಾರಿ

ಡಾ.ಹೆಚ್.ಎಲ್.ನಾಗರಾಜ್ ಸದ್ಯದಲ್ಲೇ

ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಜಗದ್ಗುರು

ಶ್ರೀ ನಿಶ್ಚಲಾನಂದನಾಥ ಮಹಾಸ್ವಾಮಿ

ಹಿಂದೊಮ್ಮೆ ಸನ್ಯಾಸತ್ವ ಸ್ವೀಕರಿಸಿ ವಾಪಸ್ಸಾದವರು...!





ಡಾ. ಹೆಚ್.ಎಲ್.ನಾಗರಾಜು

"ಬಿಟ್ಟರೂ ಬಿಡದೆನ್ನ...' ಎಂಬಂತೆ ಒಮ್ಮೆ ಸನ್ಯಾಸ ದೀಕ್ಷೆ ಪಡೆದು ಮತ್ತೆ ಕೌಟುಂಬಿಕ ಜೀವನಕ್ಕೆ ಮರಳಿದ್ದರೂ ಮತ್ತೆ ಮನಸ್ಥಿತಿ–ಪರಿಸ್ಥಿತಿ ಬಿಟ್ಟು ಬಿಡದೆ ಅವರನ್ನು ಸನ್ಯಾಸ ದೀಕ್ಷೆ ಪಡೆಯುವಂತೆ ಮಾಡಿದೆ. ಅದೂ ಸರ್ಕಾರಿ ಉನ್ನತ ಹುದ್ದೆಯನ್ನು ತೊರೆದು! ತಾವು ಸೇವೆ ಸಲ್ಲಿಸಿದ್ದಲ್ಲೆಲ್ಲಾ ದಕ್ಷ, ಪ್ರಾಮಾಣಿಕ ಅಧಿಕಾರಿಯೆಂದೇ ಹೆಸರುವಾಸಿಯಾಗಿದ್ದ ಹಿರಿಯ ಕೆಎಎಸ್ ಅಧಿಕಾರಿ ಇನ್ನೇನು ಐಎಎಸ್ ಹೊಸ್ತಿಲಲ್ಲಿದ್ದ, ಇತ್ತೀಚೆಗಷ್ಟೇ ಮಂಡ್ಯ ಅಪರ ಜಿಲ್ಲಾಧಿಕಾರಿ ಸ್ಥಾನದಿಂದ ವರ್ಗಾವಣೆಗೊಂಡಿದ್ದ ಡಾ. ಹೆಚ್.ಎಲ್.ನಾಗರಾಜು, ಸರ್ಕಾರಿ ಉನ್ನತ ಹುದ್ದೆಯನ್ನು ತೊರೆದು ಬೆಂಗಳೂರಿನ ಕೆಂಗೇರಿಯಲ್ಲಿರುವ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಚಂದ್ರಶೇಖರನಾಥ ಸ್ವಾಮೀಜಿಯವರ ಉತ್ತರಾಧಿಕಾರಿಗಳಾಗುತ್ತಿದ್ದಾರೆ. ವಿಶ್ವ ಒಕ್ಕಲಿಗರ ಸಂಸ್ಥಾನ ಮಠದ ಹಾಲಿ ಜಗದ್ಗುರು ಶ್ರೀ ಕುಮಾರ ಚಂದ್ರಶೇಖರನಾಥ ಸ್ವಾಮೀಜಿಯವರು, ಡಾ. ಎಚ್.ಎಲ್.ನಾಗರಾಜು ಅವರಿಗೆ ಶ್ರೀಮಠದಲ್ಲಿ ಡಿ.14 ಮತ್ತು 15ರಂದು ಹರಗುರು ಚರಮೂರ್ತಿಗಳು ಹಾಗೂ ಭಕ್ತ ವೃಂದದ ಸಮ್ಮುಖದಲ್ಲಿ 'ಜಗದ್ಗುರು ಶ್ರೀ ನಿಶ್ಚಲಾನಂದನಾಥ ಮಹಾಸ್ವಾಮಿಗಳು' ಹೆಸರಿನಿಂದ ಪೀಠಾರೋಹಣಕ್ಕೆ ಅಣಿ ಮಾಡಿದ್ದಾರೆ.

ಅಂದ ಹಾಗೆ ಡಾ.ಹೆಚ್.ಎಲ್. ನಾಗರಾಜು ಅವರು ಚಿಕ್ಕ ವಯಸ್ಸಿನಿಂದಲೇ ಸನ್ಯಾಸತ್ವದೆಡೆಗೆ ಸೆಳೆಯಲ್ಪಟ್ಟವರು. ಕೆಎಎಸ್ ಅಧಿಕಾರಿಯಾದರೂ ಬಿಡದ ಆ ಸೆಳೆತದಿಂದಾಗಿ ಕೆ.ಆರ್.ಪೇಟೆಯಲ್ಲಿ ತಹಸೀಲ್ದಾರ್‌ರಾಗಿದ್ದ ವೇಳೆ 2011ರಲ್ಲಿ ಆದಿಚುಂಚನಗಿರಿ ಮಠದ ಅಂದಿನ ಜಗದ್ಗುರುಗಳಾದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರಿಂದ ಸನ್ಯಾಸ ದೀಕ್ಷೆ ಪಡೆದಿದ್ದರು. ಆಗಲೇ ಬಾಲಗಂಗಾಧರನಾಥ ಸ್ವಾಮೀಜಿ ಅವರು ಇವರಿಗೆ '**ಶ್ರೀ ನಿಶ್ಚಲಾನಂದನಾಥ ಮಹಾ ಸ್ವಾಮೀಜಿ**' ಎಂದು ನಾಮಕರಣ ಮಾಡಿದ್ದರು. ತಮ್ಮ ನೆಚ್ಚಿನ ಜಗದ್ಗುರುಗಳು ನಾಮಕರಣ ಮಾಡಿದ್ದ ಅದೇ ಹೆಸರಿನಲ್ಲಿ ಈಗ ಡಾ.ಹೆಚ್.ಎಲ್. ನಾಗರಾಜು ಅವರು ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಮಠಾಧೀಶರಾಗುತ್ತಿದ್ದಾರೆ ಎಂಬುದು ವಿಶೇಷ.

ಮಂಡ್ಯ, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಸೇವೆ ಸಲ್ಲಿಸಿದ್ದ ಡಾ. ಹೆಚ್.ಎಲ್.ನಾಗರಾಜು, ಎಲ್ಲೆಡೆಯೂ ಜನರಿಂದ ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿ ಎಂದು ಹೆಸರು ಪಡೆದಿದ್ದರು. 2011ರಲ್ಲಿ ಇವರು ಸನ್ಯಾಸತ್ವ ಸ್ವೀಕರಿಸಿ, ಆದಿಚುಂಚನಗಿರಿ ಗುರು ಮಠ ಸೇರಿದ್ದರು. ಆಗ ಇವರು ಸೇವೆ ಸಲ್ಲಿಸಿದ್ದ ಎಲ್ಲಾ ಸ್ಥಳಗಳಿಂದಲೂ ಮಠಕ್ಕೆ ಆಗಮಿಸಿದ್ದ ಅಪಾರ ಜನರು ಡಾ. ಹೆಚ್.ಎಲ್. ನಾಗರಾಜ್ ಅವರು ಸರ್ಕಾರಿ ಅಧಿಕಾರಿಯಾಗಿ ಮತ್ತಷ್ಟು ಕಾಲ ಸೇವೆ ಸಲ್ಲಿಸಬೇಕು ಎಂದು ಶ್ರೀಗಳಿಗೆ ಆಗ್ರಹಪೂರ್ವಕವಾಗಿ ಮನವಿ ಮಾಡಿದ್ದರು. ಆ ಸಂದರ್ಭದಲ್ಲಿ ಬಾಲಗಂಗಾಧರನಾಥ ಸ್ವಾಮೀಜಿಗಳು ಇವರನ್ನು ಸರ್ಕಾರಿ ಸೇವೆಯಲ್ಲಿ ಮುಂದುವರೆಯುವಂತೆ ಮಾರ್ಗದರ್ಶನ ಹಾಗೂ ಆಶೀರ್ವಾದ ಮಾಡಿ ಮಠದಿಂದ ಕಳುಹಿಸಿಕೊಟ್ಟಿದ್ದರು.

> ### ಆದಿಚುಂಚನಗಿರಿ ಮಠಾಧೀಶರ ಮಾರ್ಗದರ್ಶನ, ಆಶೀರ್ವಾದದಿಂದ ಸಮಾಜ ಕಟ್ಟುವ ಕಾರ್ಯ
>
> ಈ ಮಠವು ಆದಿಚುಂಚನಗಿರಿ ಮಠಕ್ಕೆ ಪರ್ಯಾಯವಲ್ಲ. ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಗಳ ಮಾರ್ಗದರ್ಶನ ಹಾಗೂ ಆಶೀರ್ವಾದದಿಂದ ಸಮಾಜ ಕಟ್ಟುವ ಕಾರ್ಯವನ್ನು ಮಾಡಲು ಬಯಸುತ್ತೇನೆ. ಅವರು ನನ್ನನ್ನು ಜೊತೆಗಿರಿಸಿಕೊಂಡು ಸಮಾಜ ಕಟ್ಟಲು ಬಳಸಿಕೊಳ್ಳುತ್ತಾರೆ ಎಂಬ ವಿಶ್ವಾಸವಿದೆ. ಅವರ ಪ್ರೀತಿ–ವಿಶ್ವಾಸ ನನ್ನ ಮೇಲಿರಲಿ ಎಂದು ಭಗವಂತನನ್ನು ಪ್ರಾರ್ಥಿಸುತ್ತೇನೆ.
>
> –ಡಾ.ಹೆಚ್.ಎಲ್.ನಾಗರಾಜು, ನಿಯೋಜಿತ ಪೀಠಾಧಿಪತಿ, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ

ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಶ್ರೀ ಕುಮಾರ ಚಂದ್ರಶೇಖರನಾಥ ಸ್ವಾಮೀಜಿಗಳು ವಯೋವೃದ್ಧರಾಗಿದ್ದು, ಈ ಮಠವನ್ನು ಸಮರ್ಥವಾಗಿ ನಡೆಸಿಕೊಂಡು ಹೋಗಲು ಉತ್ತರಾಧಿಕಾರಿ ಅವಶ್ಯಕತೆ ಇದ್ದ ಕಾರಣ ಡಾ. ಹೆಚ್.ಎಲ್.ನಾಗರಾಜು ಅವರನ್ನು ಉತ್ತರಾಧಿಕಾರಿಯಾಗಿ ಆಯ್ಕೆ ಮಾಡಲಾಗಿದೆ. ವಿಶೇಷವೆಂದರೆ ಒಕ್ಕಲಿಗರ ಮಠವೇ ಆದ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಹಾಲಿ ಶ್ರೀಗಳಾದ ನಿರ್ಮಲಾನಂದನಾಥ ಸ್ವಾಮೀಜಿಗಳು ಎಂ.ಟೆಕ್. ಪದವೀಧರರಾದರೆ, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ನೂತನ ಮಠಾಧೀಶರಾಗಿ ಪೀಠಾರೋಹಣ ಮಾಡುತ್ತಿರುವ ಕೆಎಎಸ್ ಅಧಿಕಾರಿ ಹೆಚ್.ಎಲ್. ನಾಗರಾಜು ಅವರು ಆದಿ ಚುಂಚನಗಿರಿ ಮಠದ ಹಿಂದಿನ ಶ್ರೀಗಳಿಂದಲೇ ನಾಮಾಂಕಿತವಾಗಿದ್ದ '**ಶ್ರೀ ನಿಶ್ಚಲಾನಂದನಾಥ ಮಹಾ ಸ್ವಾಮೀಜಿ**' ಹೆಸರಿನಲ್ಲಿ ಪೀಠಾರೋಹಣ ಮಾಡುತ್ತಿರುವುದು ವಿಶೇಷ.




ಡಿ.14ರಂದು ಸಂಜೆ 6 ಗಂಟೆಗೆ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ನೂತನ ಪಟ್ಟಾಧಿಕಾರ ಮಹೋತ್ಸವ ಆರಂಭವಾಗಲಿದೆ. ಗಂಗಾ ಪೂಜೆ, ಶಿವ–ಪಾರ್ವತಿ ಪೂಜೆ, ಗಣಪತಿ ಪೂಜೆ, ಸ್ವಸ್ತಿ ಪುಣ್ಯಾಹ ವಾಚನ, ನಾಂದಿ ಸಮಾರಾಧನ, ರಕ್ಷಾ ಬಂಧನ, ವಾಪನ, ಸ್ನಪನ, ಪೋಷಕರಿಂದ ರಕ್ತ ಸಂಬಂಧದ ತ್ಯಾಗ ಮತ್ತು ಉತ್ತರಾಧಿಕಾರಯನ್ನು ಸಮಾಜಕ್ಕೆ ಸಮರ್ಪಿಸುವ ಕಾರ್ಯ ನಡೆಯಲಿದೆ.

ಡಿ.15ರಂದು ಬೆಳಿಗ್ಗೆ 6ರಿಂದ 9 ಗಂಟೆಯವರೆಗೆ ಕ್ಷೇತ್ರ ದೈವ ಶ್ರೀ ಮಹಾಮೇರು ಪಂಚಮುಖಿ ಗಣಪತಿಗೆ ರುದ್ರಾಭಿಷೇಕ, ನವದೇವತಾ ಪೂಜಾ, ಏಕ ದಶ ರುದ್ರ ಕಲಶ ಪೂಜೆ, ಅಷ್ಟಭೈರವ ಕಲಶ ಪೂಜೆ ನಂತರ ಜಗದ್ಗುರು ಶ್ರೀ ಕುಮಾರ ಚಂದ್ರಶೇಖರನಾಥ ಮಹಾ ಸ್ವಾಮೀಜಿಗಳ ಉತ್ತರಾಧಿಕಾರಿಯಾಗಿ ಶ್ರೀ ನಿಶ್ಚಲಾನಂದನಾಥ ಮಹಾ ಸ್ವಾಮೀಜಿಗಳಿಗೆ ಧಾರವಾಡದ ಮುರುಘಾ ಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿಯವರು ಪಾತಾಳ ಗಂಗೆ, ಮಲೆಮಹದೇಶ್ವರ ಬೆಟ್ಟದ, ಸಾಲೂರು ಮಠದ ಡಾ. ಶಾಂತಮಲ್ಲಿಕಾರ್ಜುನ ಸ್ವಾಮೀಜಿಗಳು ಕಾವೇರಿ, ಶ್ರೀರಂಗ ಬೇಬಿ ಮಠದ ಡಾ. ತ್ರಿನೇತ್ರ ಮಹಂತ ಶಿವಯೋಗಿಗಳು ಕೃಷ್ಣ, ಜೇವರ್ಗಿ ತಾಲೂಕು ಸೊನ್ನದ ವಿರಕ್ತ ಮಠದ ಡಾ. ಶಿವಾನಂದ ಸ್ವಾಮಿಗಳು ಘಟಪ್ರಭ, ಹುಬ್ಬಳ್ಳಿ ನವನಗರದ ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು ಮಲಪ್ರಭ, ಕೊರಟಗೆರೆ ಕುಂಚಟಿಗರ ಮಹಾಸಂಸ್ಥಾನ ಮಠದ ಡಾ. ಹನುಮಂತನಾಥ ಸ್ವಾಮೀಜಿಗಳು ಭೀಮಾ, ಗುರುಪುರ ಸಂಸ್ಥಾನ ಜಂಗಮ ಮಠದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿಗಳು ತುಂಗಭದ್ರ, ವಿರಾಜಪೇಟೆ ಅರಮೇರಿ ಕಳಂಚೇರಿ ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿಗಳು ಚಿತ್ರಾವತಿ, ಕನಕಪುರ ದೇಗುಲ ಮಠದ ಡಾ. ಮುಮ್ಮಡಿ ನಿರ್ವಾಣ ಸ್ವಾಮಿಗಳು ವೃಷಭಾವತಿ, ಹರಿಹರ ಹೊಸಹಳ್ಳಿ ರೆಡ್ಡಿ ಗುರು ಪೀಠದ ವೇಮನಾನಂದಪುರಿ ಸ್ವಾಮೀಜಿಗಳು ಹೇಮಾವತಿ ಮತ್ತು ತಿ.ನರಸೀಪುರ ಯಾಚೇನಹಳ್ಳಿ ಶ್ರೀ ರಾಮಕೃಷ್ಣ ಆಶ್ರಮದ ನಾಗಾನಂದನಾಥ ಸ್ವಾಮೀಜಿಗಳು ಗಂಗಾ ನದಿ ಸೇರಿದಂತೆ 11 ನದಿಗಳ ಜಲದಿಂದ ಅಭಿಷೇಕ ಮಾಡಲಿದ್ದಾರೆ.

ನಂತರ ವಿಭೂತಿ ಮತ್ತು ಗೌರಿಶಂಕರ ರುದ್ರಾಕ್ಷಿಧಾರಣೆ, ಮಂತ್ರೋಪದೇಶ, ದಂಡ–ಕಮಂಡಲ, ಭಿಕ್ಷಾಪಾತ್ರೆ, ಭಸ್ಮಘುಟಿಕೆ, ಸಿಂಗನಾದ–ಪಂಚಪಾತ್ರೆಗಳ ಪ್ರದಾನ, ಪಟ್ಟಬಂಧನ, ಪೂಜ್ಯರು ಹಾಗೂ ಭಕ್ತರಿಂದ ಪುಷ್ಪವೃಷ್ಟಿ, ಮಹಿಳೆಯರಿಂದ ನೀರಾಜನ ಆಚಾರೋಪದೇಶ, ಪೀಠಾರೋಹಣ, ರುದ್ರಾಕ್ಷಿ ಮಕುಟ ಧಾರಣೆ ನಂತರ ಪುಷ್ಪವೃಷ್ಟಿ ಜಯ ಘೋಷದೊಂದಿಗೆ ಪಟ್ಟಾಭಿಷೇಕ ಕಾರ್ಯಕ್ರಮ ನೆರವೇರಲಿದೆ.

> ## ಉತ್ತಮ ಸಮಾಜ ಕಟ್ಟಲು ಪ್ರೇರಣೆಯಾಗಿದೆ...
>
> 'ಮೈಸೂರು ಮಿತ್ರ'ನಿಗಾಗಿ ಬೂಕನಕೆರೆ ವಿಜೇಂದ್ರ
>
> ತುಮಕೂರು ಜಿಲ್ಲೆ, ಕುಣಿಗಲ್ ತಾಲೂಕು ಹೊನ್ನೇನಹಳ್ಳಿ ನಮ್ಮೂರು. ತಮ್ಮ ತಂದೆ–ತಾಯಿ ಗುರು ದೀಕ್ಷಿತರು. ತಮ್ಮ ಗ್ರಾಮಕ್ಕೆ ಬರುತ್ತಿದ್ದ ಉಂಗುರ ಮಠದ ಸ್ವಾಮೀಜಿಗಳಿಂದ ಗ್ರಾಮದ ಹತ್ತು–ಹದಿನೈದು ಕುಟುಂಬಗಳು ಗುರು ದೀಕ್ಷೆ ಪಡೆದಿದ್ದವು. ಅದರಲ್ಲಿ ನಮ್ಮ ಕುಟುಂಬವೂ ಒಂದು. ಪ್ರತೀ ಗುರುವಾರ ದೇವಸ್ಥಾನಕ್ಕೆ ತೆರಳಿ ಭಜನೆ ಸೇರಿದಂತೆ ವಿವಿಧ ಪೂಜಾ ಕಾರ್ಯ, ಮಾಡುತ್ತಿದ್ದೆವು. ಗುರುಗಳಿಗೆ ಪಾದ ಪೂಜೆ ಮಾಡುತ್ತಿದ್ದೆವು. ಅಂದಿನಿಂದಲೇ ತಮಗೆ ಸನ್ಯಾಸತ್ವದ ಬಗ್ಗೆ ಆಸಕ್ತಿ ಮೂಡಿತ್ತು. ತಾವು ಸನ್ಯಾಸತ್ವ ಸ್ವೀಕರಿಸಲು ಆದಿಚುಂಚನಗಿರಿ ಮಠದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಹಾಗೂ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರೇ ಪ್ರೇರಣೆ. ಬಾಲಗಂಗಾಧರನಾಥ ಶ್ರೀಗಳು 12 ವರ್ಷಗಳ ಕಾಲ ಅನ್ನ ಕೊಟ್ಟು ನನ್ನನ್ನು ಸಾಕಿದ್ದಾರೆ. ಅವರ ಆಶೀರ್ವಾದದಿಂದಲೇ ಕೆಎಎಸ್ ಅಧಿಕಾರಿಯಾಗಿ ಸರ್ಕಾರದಲ್ಲಿ ಉತ್ತಮ ಕೆಲಸ ಮಾಡಿದ್ದೇನೆ. ಅವರನ್ನು ಅನುಸರಿಸಿ ಮುಂದೆ ಉತ್ತಮ ಸಮಾಜ ಕಟ್ಟಬೇಕು. ಸಮಾಜಕ್ಕೆ ಕೈಲಾದ ಮಟ್ಟಿಗೆ ಪ್ರಯತ್ನ ಮಾಡಲು ನಿರ್ಧರಿಸಿದ್ದೇನೆ.
>
> ಬಾಲಗಂಗಾಧರನಾಥ ಶ್ರೀಗಳು ನನಗೆ ದೀಕ್ಷೆ ಕೊಟ್ಟಾಗ, ನಾನು ಕೆಲಸ ಮಾಡಿದ್ದ ಊರುಗಳಿಂದ ಬಂದ ಅಪಾರ ಜನರು, ಇಂತಹ ಪ್ರಾಮಾಣಿಕ ಅಧಿಕಾರಿಯ ಸೇವೆ ನಮಗೆ ಬೇಕು ಎಂದು ಶ್ರೀಗಳಲ್ಲಿ ಪ್ರಾರ್ಥನೆ ಮಾಡಿಕೊಂಡರು. ಆಗ ಸ್ವಾಮೀಜಿಯವರು ಇನ್ನೂ 10–15 ವರ್ಷ ಉತ್ತಮವಾಗಿ ಸರ್ಕಾರಿ ಕೆಲಸ ಮಾಡಿ, ಯಾವಾಗ ನಿನಗೆ ಇಷ್ಟ ಆಗುತ್ತದೋ ಆಗ ಮಠಕ್ಕೆ ಬರಬಹುದು ಎಂದು ಆಶೀರ್ವಾದ ಮಾಡಿ ಕಳುಹಿಸಿದರು. ಆದಿಚುಂಚನಗಿರಿ ಮಠದ ಇಂದಿನ ಶ್ರೀಗಳಾದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಗಳೂ ಕೂಡ ನನ್ನ ಮೇಲೆ ಅತೀವ ಪ್ರೀತಿ ಇಟ್ಟುಕೊಂಡಿದ್ದು, ಆಶೀರ್ವಾದ ಮಾಡುತ್ತಿದ್ದಾರೆ. ಪಟ್ಟಾಧಿಕಾರ ಮಹೋತ್ಸವಕ್ಕೆ ಬರುವುದಾಗಿಯೂ ತಿಳಿಸಿದ್ದಾರೆ. ಅವರ ಆಶೀರ್ವಾದದೊಂದಿಗೆ ಮುಂದುವರೆಯಲು ಇಷ್ಟಪಡುತ್ತೇನೆ. ನಿರ್ಮಲಾನಂದನಾಥ ಶ್ರೀಗಳು ಎಂ.ಟೆಕ್. ಪದವೀಧರರಾಗಿದ್ದು, ಉತ್ತಮ ಉದ್ಯೋಗದಲ್ಲಿದ್ದರೂ ಆದಿಚುಂಚನಗಿರಿ ಮಠಕ್ಕೆ ಬಂದು ಜಗದ್ಗುರುಗಳಾಗಿ ಸಮಾಜ ಕಟ್ಟುವ ಮೂಲಕ ನನಗೂ ಪ್ರೇರಣೆಯಾಗಿದ್ದಾರೆ.
>
> ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠ ಬೆಂಗಳೂರಿನ ಅಯಕಟ್ಟಿನ ಜಾಗದಲ್ಲಿದೆ. ಇಲ್ಲಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆ ಮಾಡಿ ಶಿಕ್ಷಣ ನೀಡಬೇಕು. ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಕೇಂದ್ರವನ್ನು ಸ್ಥಾಪಿಸಿ ಉಚಿತವಾಗಿ ತರಬೇತಿ ನೀಡುವ ಮೂಲಕ ಸಮಾಜದ ವಿದ್ಯಾರ್ಥಿಗಳು ಕೇಂದ್ರ ಹಾಗೂ ರಾಜ್ಯದಲ್ಲಿ ಉನ್ನತ ಹುದ್ದೆ ಅಲಂಕರಿಸಲು ಸಹಕಾರಿಯಾಗಬೇಕು. ಗ್ರಾಮೀಣ ಪ್ರದೇಶದ ಜನರಿಗೆ ಸ್ವಯಂ ಉದ್ಯೋಗ ತರಬೇತಿ ನೀಡಬೇಕು. ಮುಂದಿನ ದಿನಗಳಲ್ಲಿ ತಾಂತ್ರಿಕ ಶಿಕ್ಷಣ, ಕೌಶಲಾಭಿವೃದ್ಧಿ ಶಿಕ್ಷಣ ಸಂಸ್ಥೆಗಳ ಜೊತೆಗೆ ವೃದ್ಧಾಶ್ರಮ ನಿರ್ಮಿಸಬೇಕು, ಹೀಗೆ ಅನೇಕ ಯೋಜನೆಗಳು ನನ್ನ ಮನದಲ್ಲಿವೆ. ನನ್ನ ಈ ದೊಡ್ಡ ಕನಸು ಹೆಮ್ಮರವಾಗಿ ಬೆಳೆಯಲು ಭಕ್ತಿಯಿಂದ ಮಾತ್ರ ಸಾಧ್ಯ. ಅನೇಕ ಹಿರಿಯರ ಸಲಹೆ–ಸಹಕಾರ ಪಡೆದು ಈ ಮಠವನ್ನು ನಾಡಿನ ಉತ್ತಮ ಸಂಸ್ಥಾನವನ್ನಾಗಿ ಬೆಳೆಸುವ ಕನಸು ನನ್ನದು. **– ಡಾ. ಹೆಚ್.ಎಲ್.ನಾಗರಾಜು, ಒಕ್ಕಲಿಗರ ಮಹಾ ಸಂಸ್ಥಾನ ಮಠದ ನಿಯೋಜಿತ ಪೀಠಾಧಿಪತಿ**

ಅಂದು ಬೆಳಿಗ್ಗೆ 10.30ಕ್ಕೆ ನೂತನ ಪೀಠಾಧ್ಯಕ್ಷರಿಗೆ ಶುಭ ಹಾರೈಕೆ ಸಮಾರಂಭ ನಡೆಯಲಿದ್ದು, ಸುತ್ತೂರು ಮಠದ ಶ್ರೀಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಗಳು ಸೇರಿದಂತೆ ರಾಜ್ಯದ ವಿವಿಧ ಮಠಗಳ ಅನೇಕ ಮಠಾಧೀಶರು ಸಾನ್ನಿಧ್ಯ ವಹಿಸಲಿದ್ದಾರೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಉಪಸ್ಥಿತಿಯಲ್ಲಿ ಅನೇಕ ಗಣ್ಯರು ನೂತನ ಮಠಾಧೀಶರಿಗೆ ಶುಭ ಹಾರೈಸಲಿದ್ದಾರೆ.



ವಾರಭವಿಷ್ಯ

8.12.2024 ರಿಂದ 14.12.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ವೃಶ್ಚಿಕ, ಚಂದ್ರ–ಕುಂಭ, ಮೀನ, ಮೇಷ, ಮಿಥುನ, ಕುಜ–ಕಟಕ, ಬುಧ–ವೃಶ್ಚಿಕ, ಗುರು–ವೃಷಭ, ಶುಕ್ರ–ಮಕರ, ಶನಿ–ಕುಂಭ, ರಾಹು–ಮೀನ ಮತ್ತು ಕೇತು–ಕನ್ಯಾ.

ವಿ.ಕೇಶವಮೂರ್ತಿ

ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'

'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'

ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ

ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.

ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಈ ವಾರ ಪಿತ್ರಾರ್ಜಿತ ಆಸ್ತಿ ವಿಚಾರಗಳು ಇತ್ಯರ್ಥಗೊಳ್ಳುವ ಸಾಧ್ಯತೆ ಇರುತ್ತದೆ. ಚಂದ್ರ ಬಲವೂ ಚೆನ್ನಾಗಿರುವ ಕಾರಣ ಅದೃಷ್ಟ ಒಲಿದು ಬರುವುದು. ನೂತನ ವಸ್ತ್ರಾಭರಣ ಖರೀದಿಸುವಿರಿ. ನಿರುದ್ಯೋಗಿಗಳಿಗೆ ಸಂತಸದ ಸುದ್ದಿ ಬರುವುದು. ದಂಪತಿಗಳಲ್ಲಿನ ವಾದ–ವಿವಾದಗಳು ಸುಖಾಂತ್ಯವಾಗುವುದು. ಬಾಯ್ತಪ್ಪಿನ ಮಾತಿನಿಂದ ಸ್ನೇಹದಲ್ಲಿ ಅಪಸ್ವರ ಉಂಟಾಗುವುದು.

ಶ್ರೀ ಕಾರ್ತಿಕೇಯ ದರ್ಶನ. ಶುಭ ಸಂಖ್ಯೆ–8

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ವಾರದಾರಂಭಕ್ಕೆ ಹೊಸ ಮಿತ್ರರ ಪರಿಚಯ, ಉತ್ತಮ ಭೋಜನ, ಶಯನ ಸುಖ, ಹೋಟೆಲ್, ಟ್ರಾವೆಲ್ಸ್ ಏಜೆನ್ಸಿಯವರಿಗೆ ಉತಮ ಲಾಭ ದೊರೆಯುವುದು. ರೇಷ್ಮೆ ವ್ಯಾಪಾರಿಗಳಿಗೆ ಬಂಪರ್ ವ್ಯಾಪಾರ ಹಾಗೂ ಧನಲಾಭ ಕೆಲವೊಮ್ಮ ವಿಚಾರ ಹೀನತೆಯಿಂದ ಸಂಬಂಧಗಳು ಕೆಡುವುದು. ಪ್ರಯಾಣ ಸಮಯದಲ್ಲಿ ಕಳ್ಳ ಕಾಕರಿಂದ ಜಾಗೃತರಾಗಿರಿ. ಸಣ್ಣ ಪುಟ್ಟ ಆರೋಗ್ಯ ಸಮಸ್ಯೆ ಕಾಡುವುದು.

ಶ್ರೀ ಅಪರಾಜಿತ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–3

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ನೀವು ಅಂದುಕೊಂಡಿದ್ದೇ ಬೇರೆ, ಆಗುತ್ತಿರುವುದೇ ಬೇರೆ. ವೈಯಕ್ತಿಕವಾಗಿ ಒತ್ತಡಭರಿತ ವಾರವಾಗಿರುತ್ತದೆ. ತಾರಾಬಲ ಶುಭವಿದ್ದು, ಹಣಕಾಸಿನ ಬಿಕ್ಕಟ್ಟು ಪರಿಹಾರವಾಗುವುದು. ಮನೆಗೆ ಆದರಣೀಯರ ಆಗಮನ, ಅವರ ಸತ್ಕಾರಕ್ಕೆ ಧಾರಾಳ ಹಣ ವ್ಯಯವಾಗುವುದು. ನಿಮ್ಮ ಮಾತೃಶ್ರೀಯವರ ಆರೋಗ್ಯದಲ್ಲಿ ವ್ಯತ್ಯಯ ಉಂಟಾಗಬಹುದು. ವಾರಾಂತ್ಯಕ್ಕೆ ಮನೆ ದೇವರ ಅರ್ಚನೆಯಿಂದ ಸುಖ–ಶಾಂತಿ.

ಶ್ರೀ ಲಕ್ಷ್ಮೀ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–1.

ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)

ನಿಮ್ಮ ರಾಶ್ಯಾಧಿಪನಾದ ಚಂದ್ರ ಸಪ್ತಾಹಪೂರ್ತ ಶುಭ ಭಾವಗಳಲ್ಲಿ ಗೋಚರಿಸುವುದರಿಂದ ಮಾನಸಿಕವಾಗಿ ಸಕಾರಾತ್ಮಕ ಚಿಂತನೆಗಳು ಉಂಟಾಗುತ್ತವೆ. ನೀವು ಸರಿಯಾದ ದಿಕ್ಕಿನಲ್ಲಿ ಶ್ರಮಿಸಿದರೆ ಹಣಕಾಸಿನ ಪರಿಸ್ಥಿತಿ ಸುಧಾರಣೆ ಆಗುವುದು. ಗುರುಬಲವು ಇರುವುದರಿಂದ ನಿಮ್ಮ ಆತ್ಮವಿಶ್ವಾಸ ದ್ವಿಗುಣವಾಗುವುದು. ಮನೆಯಲ್ಲಿ ಮಂಗಳ ಕಾರ್ಯಗಳು ಜರುಗುವುದು. ಬ್ಯಾಂಕ್ ಸಾಲದ ಪ್ರಯತ್ನದಲ್ಲಿ ಸಫಲತೆ.

ಶ್ರೀ ದತ್ತಾತ್ರೇಯ ಸ್ತುತಿ. ಶುಭ ಸಂಖ್ಯೆ–2.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ವಾರದ ಆದಿಗೆ ಅಗತ್ಯಕ್ಕೆ ತಕ್ಕಂತೆ ಹಲವು ಮೂಲಗಳಿಂದ ಧನ ಸಂಚಯನವಾಗುವುದು. ನಿಮ್ಮ ಪೂರ್ವ ಪರಿಶ್ರಮದ ಫಲ ಈಗ ದೊರೆಯಲಿದೆ. ಮನೋಕಾರಕನೆನಿಸಿದ ಚಂದ್ರ ನಿಮ್ಮ ಆಶೋತ್ತರಗಳಿಗೆ ಪೂರಕ ಸಹಾಯವನ್ನು ನೀಡುತ್ತಲಿದ್ದಾನೆ. ಎನ್‌ಕ್ಯಾಷ್ ಮಾಡಿಕೊಳ್ಳುವಲ್ಲಿ ಹಿಂದೆ ಬೀಳದಿರಿ. ಅಷ್ಟಮ ಶನಿ ಸಂಚಾರವಿರುವ ಕಾರಣ ಹುಚ್ಚು ಸಾಹಸಗಳಿಗೆ ಕೈ ಹಾಕದಿರಿ.

ಶ್ರೀ ಸೂರ್ಯ ಭಗವಾನ್ ಪ್ರಾರ್ಥನೆ. ಶುಭ ಸಂಖ್ಯೆ–4.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಪ್ರಮುಖ ಕೆಲಸಗಳನ್ನು ಆದ್ಯತೆಯ ಆಧಾರದ ಮೇಲೆ ಪೂರೈಸಿಕೊಳ್ಳಿ. ಸಭೆ, ಸಮಾರಂಭಗಳಲ್ಲಿ ಭಾಗವಹಿಸಿ ಸನ್ಮಾನಕ್ಕೆ ಭಾಜನರಾಗುವಿರಿ. ನಿಮ್ಮ ಬುದ್ಧಿಕುಶಲತೆ ಉತ್ತಮ ಮಟ್ಟದ್ದಾಗಿರುತ್ತದೆ. ಸ್ಪರ್ಧಾ ಪರೀಕ್ಷೆ, ಸಂದರ್ಶನಗಳಲ್ಲಿ ಸಫಲರಾಗುವಿರಿ. ಫ್ಯಾನ್ಸಿ, ಉಡುಗೊರೆ ಸಾಮಾನು ವ್ಯಾಪಾರಿಗಳಿಗೆ ಉತ್ತಮ ಲಾಭವಾಗುವುದು. ದೂರ ಪ್ರಯಾಣಗಳು ಉಂಟಾಗಬಹುದು. ಎಚ್ಚರಿಕೆಯ ಡ್ರೈವಿಂಗ್ ಒಳ್ಳೆಯದು.

ಶ್ರೀ ರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–7

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಚತುರತೆಗಿಂತ ವಿಧಿಯಾಟ ಮೇಲು ಹಠ ಸ್ವಭಾವದಿಂದ ನೆರೆಹೊರೆಯಲ್ಲಿ ತಂಟೆ–ತಕರಾರುಗಳು ರಾಜಕಾರಣಿಗಳಿಗೆ ಅಪವಾದ ಸುತ್ತಿಕೊಳ್ಳುವುದು. ವಾರ ಮಧ್ಯೆ ಹಿತೈಷಿಗಳ ಸಹಕಾರದಿಂದ ಕೌಟುಂಬಿಕ ಸಮಸ್ಯೆಗೆ ಪರಿಹಾರ ದೊರಕುವುದು. ಆಸ್ತಿ ವಿಲೇವಾರಿ ಸಂಬಂಧ ಕಾನೂನು ತಜ್ಞರ ಸಲಹೆ ಪಡೆದುಕೊಳ್ಳುವುದು ಉಚಿತ. ಅವರಿವರು ಹೇಳಿದ್ದಕ್ಕೆಲ್ಲಾ ಮಹತ್ವ ಕೊಡಬೇಡಿ.

ಶ್ರೀ ಪದ್ಮಾವತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–5

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)

ವಿವಿಧ ಮೂಲಗಳಿಂದ ಹಣ ಸಂಗ್ರಹವಾಗಿ ಮಹತ್ವದ ಯೋಜನೆಗಳಿಗೆ ಕಾರ್ಯಾನುಕೂಲವಾಗಲಿದೆ. ಗುರುಕೃಪೆಯಿದೆ. ಎನ್‌ಕ್ಯಾಷ್ ಮಾಡಿಕೊಳ್ಳಿ. ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯುವುದು. ಗುತ್ತಿಗೆದಾರರಿಗೆ ಆದಾಯದಲ್ಲಿ ಹೆಚ್ಚಳ ಹಾಗೂ ಋಣಮುಕ್ತರಾಗಲು ಅವಕಾಶ. ಕೇಳಿಸಿಕೊಂಡದ್ದಕ್ಕೆಲ್ಲಾ ಮಹತ್ವ ಕೊಡಬೇಡಿ. ಜಾಣ ಕಿವುಡು ಬುದ್ಧಿವಂತರ ಲಕ್ಷಣ.

ಶ್ರೀ ನೃಸಿಂಹಸ್ವಾಮಿ ಆರಾಧನೆ. ಶುಭ ಸಂಖ್ಯೆ–6

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಹಿರಿಯರ ಸಲಹೆಯನ್ನು ಗೌರವಿಸಿ ನಡೆದರೆ ಒಳಿತನ್ನು ಕಾಣುವಿರಿ. ಅನಿವಾರ್ಯವಲ್ಲದ ಕೆಲಸಗಳನ್ನು ಮುಂದೂಡಿ. ವ್ಯಾಪಾರ ವ್ಯವಹಾರಗಳು ನಿಧಾನಗತಿಯಲ್ಲಿ ಸಾಗಿದರೂ ಆದಾಯಕ್ಕೆ ಕೊರತೆಯಾಗದು. ಜೀವನದ ಸಾಧಕ–ಬಾಧಕಗಳ ಬಗ್ಗೆ ಅರಿವು ಉಂಟಾಗದಿರಲು ಗ್ರಹಗತಿಗಳೇ ಕಾರಣ. ವಾರಾಂತ್ಯಕ್ಕೆ ಪ್ರಯತ್ನ ಕಾರ್ಯಗಳಲ್ಲಿ ಪ್ರಗತಿ ಶುಭ ಕಾರ್ಯಕ್ಕೆ ಪ್ರೇರಣೆ, ಗೆಳೆಯರ ಸಂಪರ್ಕದಿಂದ ಹರುಷ.

ಶ್ರೀ ಗುರುರಾಯರ ಸೇವೆ. ಶುಭ ಸಂಖ್ಯೆ–9

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಸರ್ಕಾರಿ ನೌಕರರಿಗೆ ಪದೋನ್ನತಿಯ ಜೊತೆ ವರ್ಗಾವಣೆ ವಿವಾಹ ಯೋಗ್ಯರಿಗೆ ಸೂಕ್ತ ಬಾಳ ಸಂಗಾತಿ ದೊರೆಯುವರು. ಕೃಷಿ ಉಪಕರಣ ಮಾರಾಟಗಾರರಿಗೆ ಹೆಚ್ಚಿನ ಧನಲಾಭ. ಸುವರ್ಣದಲ್ಲಿ ಬಂಡವಾಳ ಹೂಡಿಕೆಯಿಂದ ಲಾಭ. ಮಕ್ಕಳ ಸಾಧನೆಯಿಂದ ಹರ್ಷ. ವಾಹನ ರಿಪೇರಿಗೆ ಹಣ ಖರ್ಚಾಗುವುದು. ಜೊತೆಗೆ ವ್ಯರ್ಥ ಖರ್ಚುಗಳು ಎದುರಾಗಲಿದೆ. ಆತುರದ ವಾಹನ ಚಾಲನೆಯಿಂದ ಅಚಾತುರ್ಯ ಘಟಿಸುವುದು.

ಶ್ರೀ ಆಂಜನೇಯ ಅರ್ಚನೆ. ಶುಭ ಸಂಖ್ಯೆ–3

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಅಪರಿಚಿತರಲ್ಲಿ ಹಣಕಾಸಿನ ವ್ಯವಹಾರ ಮಾಡುವುದರಿಂದ ನಷ್ಟವನ್ನು ಅನುಭವಿಸುವಿರಿ. ಸಹೋದರ ಸಂಬಂಧಿಗಳಲ್ಲಿ ಉಂಟಾಗಿದ್ದ ವಿವಾದಗಳು ಸುಖಾಂತ್ಯವಾಗುತ್ತದೆ. ಗುಡಿ ಕೈಗಾರಿಕೆ ಮಾಡುವವರಿಗೆ ಉತ್ತಮ ವ್ಯಾಪಾರ ಹಾಗೂ ಧನಲಾಭವಾಗುವುದು. ರಾಹು–ಕೇತುಗಳು ಶುಭರಿಲ್ಲದ ಕಾರಣ ವಾಹನಾಪಘಾತಗಳಿಂದ ಎಚ್ಚರಿಕೆಯಿಂದಿರಿ. ಸಂಚಾರಿ ನಿಯಮ ಪಾಲಿಸಿ. ದಂಡ ಪಾವತಿಯನ್ನು ತಪ್ಪಿಸಿಕೊಳ್ಳಿ.

ಶ್ರೀ ಶಿವಪಂಚಾಕ್ಷರಿ ಜಪಿಸಿ. ಶುಭ ಸಂಖ್ಯೆ–2

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ನಂಬಿ ಕೆಟ್ಟವರಿಲ್ಲವೋ ಹರಿಯ. ನಂಬದವರು ಕೆಟ್ಟರೆ ಕೆಡಲಿ ಬಿಡು' ಎಂಬ ದಾಸರ ವಾಣಿಯಂತೆ ಸಾಗಲಿ ಈ ಸಪ್ತಾಹ.ಕೈಗೆ ಹಣ ಬಂದರೂ ಬಿದಿರೆಲೆಗೆ ಬಿದ್ದ ನೀರಿನಂತೆ ಕಾಣೆಯಾಗುವುದು. ಸಿದ್ಧ ವಸ್ತ್ರ, ಜವಳಿ ವ್ಯಾಪಾರಿಗಳಿಗೆ ಉತ್ತಮ ವ್ಯಾಪಾರವೂ, ಧನಲಾಭವೂ ಆಗಲಿದೆ. ಸಮಾಜದ ಪ್ರಮುಖ ವ್ಯಕ್ತಿಗಳ ಭೇಟಿಯಿಂದ ಕಾರ್ಯಾನುಕೂಲ. ನರ ಸೆಳೆತ ಉಂಟಾಗಬಹುದು.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಜಪಿಸಿ. ಶುಭ ಸಂಖ್ಯೆ–6.

ಮೈಸೂರು ಮಿತ್ರ

ದೇಶ ಮುನ್ನಡೆಸುವ ನೈಜ ಸಂವಿಧಾನ ಮುಚ್ಚಿಟ್ಟ ಕಾಂಗ್ರೆಸ್

ಸಂವಿಧಾನ ಸನ್ಮಾನ ಕಾರ್ಯಕ್ರಮದಲ್ಲಿ ಎನ್.ವಿ.ಫಣೀಶ್ ಆರೋಪ



ಸಂವಿಧಾನ ಸನ್ಮಾನ ಕಾರ್ಯಕ್ರಮವನ್ನು ಮಾಜಿ ಸಚಿವ ಎನ್.ಮಹೇಶ್ ಉದ್ಘಾಟಿಸಿದರು.

ತಿ.ನರಸೀಪುರ, ಡಿ.7– ಕುಟುಂಬದಲ್ಲಿಯೇ ರಾಜಕೀಯ ಅಧಿಕಾರ ಕೇಂದ್ರಿಕರಿಸಿಟ್ಟುಕೊಳ್ಳಲು ದೇಶದಲ್ಲಿ ಹಲವು ದಶಕಗಳ ಕಾಲ ಆಡಳಿತ ನಡೆಸಿದ ಕಾಂಗ್ರೆಸ್ ದೇಶವನ್ನು ಮುನ್ನಡೆಸುವ ನೈಜ ಸಂವಿಧಾನವನ್ನು ಮುಚ್ಚಿಟ್ಟಿತ್ತು ಎಂದು ಸಿಟಿಜನ್ಸ್ ಫಾರ್ ಸೋಶಿಯಲ್ ಜಸ್ಟೀಸ್ ಅಭಿಯಾನದ ರಾಜ್ಯ ಸಹ ಸಂಚಾಲಕ ಎನ್.ವಿ.ಫಣೀಶ್ ಆರೋಪಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ನಡೆದ ಸಂವಿಧಾನ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಜಗತ್ತಿನ ಅತ್ಯುನ್ನತ ಸಂವಿಧಾನವನ್ನು ದೇಶದ ಆಡಳಿತ ನಡೆಸಲು ನೀಡಿದ ಕೀರ್ತಿ ಅಂಬೇಡ್ಕರ್ ಅವರದ್ದಾಗುತ್ತದೆ ಎಂಬ ಭಯದಿಂದ ರಾಷ್ಟ್ರದ ಆಡಳಿತವನ್ನು ಕಪಿಮುಷ್ಠಿಯಲ್ಲಿ ಇಟ್ಟುಕೊಂಡಿದ್ದ ಕಾಂಗ್ರೆಸ್ ಸಂವಿಧಾನ ಮತ್ತು ಅಂಬೇಡ್ಕರ್ ಅವರನ್ನು ಜನರಿಗೆ ತಿಳಿಸಲೇ ಇಲ್ಲವೆಂದು ದೂರಿದರು.

ನೆಹರು ಸೇರಿದಂತೆ ಇಂದಿರಾ ಗಾಂಧಿ ಹಾಗೂ ರಾಜೀವ್ ಗಾಂಧಿ ಅವರು ಅಧಿಕಾರದ ದುರಾಸೆಗಾಗಿ ಸಂವಿಧಾನವನ್ನು ನೂರಾರು ಬಾರಿ ತಿದ್ದುಪಡಿ ಮಾಡಿ, ಆಡಳಿತ ವ್ಯವಸ್ಥೆಯನ್ನು ದುರ್ಬಲಗೊಳಿಸಿದ್ದಾರೆ. ಪ್ರಧಾನಿ ಮೋದಿ ಅವರು ಅಂಬೇಡ್ಕರ್ ಅವರು ವಿಶ್ವದ ಜ್ಞಾನದ ಸಂಕೇತವಾಗಬೇಕು ಎಂದು ಅಪೇಕ್ಷಿಸಿದ್ದ ರಿಂದಲೇ ಇಂದು ವಿಶ್ವಸಂಸ್ಥೆ ಬಾಬಾ ಸಾಹೇಬರ ಜನುಮದಿನವನ್ನು ವಿಶ್ವಜ್ಞಾನದ ದಿನವೆಂದು ಘೋಷಣೆ ಮಾಡಿದೆ. ಸಂವಿಧಾನ ದುರ್ಬಲ ಗೊಳಿಸಿದ ಕಾಂಗ್ರೆಸ್‌ನ ಸತ್ಯವನ್ನು ಜನರಿಗೆ ತಿಳಿಸಲು ಸಿಟಿಜನ್ಸ್ ಫಾರ್ ಸೋಶಿಯಲ್ ಜಸ್ಟೀಸ್ ಅಭಿಯಾನ ವನ್ನು ರಾಜ್ಯಾದ್ಯಂತ ಆರಂಭಿಸಲಾಗಿದೆ ಎಂದರು.

ಬಿಜೆಪಿ ಮುಖಂಡ ಡಾ.ರೇವಣ್ಣ, ಕಾಂಪೋಸ್ಟ್ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ ಹಾಗೂ ಅಭಿಯಾನದ ಸಹ ಸಂಚಾಲಕಿ ಪ್ರಫುಲ್ಲ ಮಲ್ಲಾಡಿ ಮಾತನಾಡಿದರು. ಕಾರ್ಯಕ್ರಮವನ್ನು ಮಾಜಿ ಸಚಿವ ಎನ್.ಮಹೇಶ್ ಉದ್ಘಾಟಿಸಿದರು. ದಲಿತ ಮುಖಂಡ ಎಸ್.ನಂಜುಂಡಯ್ಯ ಅಂಬೇಡ್ಕರ್ ಕುರಿತು ಗೀತೆಯನ್ನು ಪ್ರಸ್ತುತ ಪಡಿಸಿದರು. ವಕ್ತಾರ ದಯಾನಂದ ಪಟೇಲ್ ಸಂವಿಧಾನ ಪೀಠಿಕೆ ಬೋಧಿಸಿದರು. ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲಾ ಜನಜಾಗೃತಿ ಸಮಿತಿ ಅಧ್ಯಕ್ಷ ಕೆ.ಎನ್.ಪ್ರಭುಸ್ವಾಮಿ, ಕಬ್ಬು ಬೆಳೆಗಾರರ ಸಂಘದ ಕಾರ್ಯಾಧ್ಯಕ್ಷ ಕಿರಗಸೂರು ಶಂಕರ್, ರೈತ ಸಂಘದ ಅಧ್ಯಕ್ಷ ಬನ್ನೂರು ನಾರಾಯಣ್, ದಸಂಸ ಜಿಲ್ಲಾ ಸಂಚಾಲಕ ಸೋಸಲೆ ರಾಜಶೇಖರ್, ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಸಿ.ಎಂ.ಪ್ರಕಾಶ್, ಬಾಬೂಜಿ ಸಂಘದ ಅಧ್ಯಕ್ಷ ಸಿ.ಪುಟ್ಟಯ್ಯ, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸೋಮಶೇಖರಪ್ಪ, ಸಂಸ್ಕೃತಿ ಮತ್ತು ಕಲೆ ವಿಭಾಗದ ಸಂಚಾಲಕ ಶಿವಕುಮಾರ್, ತಾಪಂ ಮಾಜಿ ಸದಸ್ಯ ಕೆ.ಜಿ.ವೀರಣ್ಣ, ಬಿಜೆಪಿ ಕ್ಷೇತ್ರಾಧ್ಯಕ್ಷ ಶಿವಕುಮಾರ್, ಪ್ರಧಾನ ಕಾರ್ಯದರ್ಶಿ ಡಾ.ಟಿ.ಎಸ್.ಮಲ್ಲಿಕಾರ್ಜುನಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ಎನ್.ಎಂ.ರಾಮಚಂದ್ರ, ಯುವ ಮೋರ್ಚಾ ಅನಿಲ್ ಕುಮಾರ್, ಮುಖಂಡರಾದ ಬಿ.ಪಿ.ಪರಶಿವ ಮೂರ್ತಿ, ಬಿ.ಎನ್.ವಿಜಯಕುಮಾರ್, ಕೆ.ವಿ.ಶಿವಶಂಕರ್, ಅಂಗಡಿ ಪುಟ್ಟಸ್ವಾಮಿ, ಚೌಹಳ್ಳಿ ಸಿದ್ದರಾಜು, ಎಸ್.ರಾಜಶೇಖರ್ ಇತರರಿದ್ದರು.

> ಸಮಾಜ ಕಲ್ಯಾಣ ಇಲಾಖೆಯಲ್ಲಿ ಪರಿಶಿಷ್ಟರ ಶೈಕ್ಷಣಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಿದ್ದ 25 ಸಾವಿರ ಕೋಟಿ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಕೊಟ್ಟಿದ್ದು, ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಬುಡಕಟ್ಟು ಜನರ ಅಭಿವೃದ್ಧಿಗೆ ಬಳಸಬೇಕಿದ್ದ 182 ಕೋಟಿ ಹಣವನ್ನು ಖಾಸಗಿ ಖಾತೆಗಳಿಗೆ ವರ್ಗಾವಣೆ ಮಾಡಿಕೊಂಡು ಭ್ರಷ್ಟಾಚಾರ ನಡೆಸಿರುವುದು ಕಾಂಗ್ರೆಸ್ ಸರ್ಕಾರದ ಸಂವಿಧಾನ ಬಾಹಿರ ಕೆಲಸ. ಸಿಎಂ ಸಿದ್ದರಾಮಯ್ಯ ಅವರ 4 ದಶಕಗಳ ರಾಜಕೀಯ ಜೀವನ ತೆರೆದ ಪುಸಕ್ತದಲ್ಲಿ ಮುಡಾದ 14 ಸೈಟ್‌ಗಳು ಇದ್ದವು. ಸಂವಿಧಾನ ದಮನಕಾರಿ ನಿಲುವುಗಳ ಸರ್ಕಾರದಲ್ಲಿ ಸಂವಿಧಾನ ಪಾಠ ಮಾಡುತ್ತಿರುವ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ನಡವಳಿಕೆ ನಿಜಕ್ಕೂ ವಿಪರ್ಯಾಸ.
>
> -ಎನ್.ಮಹೇಶ್, ಮಾಜಿ ಸಚಿವ

ಬಸ್ಸಿನಿಂದ ಬಿದ್ದು ಪ್ರವಾಸಕ್ಕೆ ಬಂದಿದ್ದ ತಮಿಳುನಾಡು ವಿದ್ಯಾರ್ಥಿ ಸಾವು

ಪಿರಿಯಾಪಟ್ಟಣದ ಬೈಲಕುಪ್ಪೆ ಬಳಿ ದುರಂತ

ಬೈಲಕುಪ್ಪೆ, ಡಿ.7– ಚಾಲನೆ ವೇಳೆ ಖಾಸಗಿ ಬಸ್ಸಿನ ಬಾಗಿಲು ಹಠಾತ್ತನೆ ತೆರೆದುಕೊಂಡ ಕಾರಣ ಬಸ್‌ನಿಂದ ಕೆಳಗೆ ಬಿದ್ದು ವಿದ್ಯಾರ್ಥಿ ಸಾವಿಗೀಡಾದ ಘಟನೆ ಶುಕ್ರವಾರ ಸಂಜೆ ಬೈಲಕುಪ್ಪೆ ಮತ್ತು ಗೋಲ್ಡನ್ ಟೆಂಪಲ್ ನಡುವೆ ಸಂಭವಿಸಿದೆ.

ತಮಿಳುನಾಡಿನ ಗಂಧರ್ವ ತಾಲೂಕಿನ ತಿಲ್ಲತ್ತೂರು ಗ್ರಾಮದ ದೀನ್ ದಯಾಳ್ (21) ಅಪಘಾತದಲ್ಲಿ ಮೃತಪಟ್ಟ ವಿದ್ಯಾರ್ಥಿಯಾಗಿದ್ದು, ಈತ ಗಂಧರ್ವ ತಾಲೂಕಿನ ಕಾಲೇಜೊಂದರಲ್ಲಿ ವ್ಯಾಸಂಗ ಮಾಡುತ್ತಿದ್ದ. ಕಾಲೇಜಿನಿಂದ ಮೈಸೂರು ಜಿಲ್ಲೆಯ ಪ್ರವಾಸಿ ತಾಣಗಳ ವೀಕ್ಷಣೆಗೆಂದು ತನ್ನ ಸಹಪಾಠಿಗಳೊಂದಿಗೆ ಖಾಸಗಿ ಬಸ್ಸಿನಲ್ಲಿ (ಟಿ.ಎನ್.52 ಎಬಿ 8485) ಈತ ಬಂದಿದ್ದ. ಬಸ್ ಬೈಲಕುಪ್ಪೆ ಸಮೀಪವಿರುವ ಗೋಲ್ಡನ್ ಟೆಂಪಲ್ ಕಡೆಗೆ ತೆರಳುತ್ತಿದ್ದ ವೇಳೆ ಹಠಾತ್ತನೆ ಕೊಪ್ಪ ಮತ್ತು ಗೋಲ್ಡನ್ ಟೆಂಪಲ್ ನಡುವೆ ಬಸ್‌ನ ಡೋರ್ ತೆರೆದುಕೊಂಡ ಪರಿಣಾಮ ವಿದ್ಯಾರ್ಥಿ ಬಸ್ಸಿನಿಂದ ಬಿದ್ದು, ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೈಲಕುಪ್ಪೆ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಮೃತ ವಿದ್ಯಾರ್ಥಿ ಶವವನ್ನು ಕುಶಾಲನಗರ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಿದ್ದಾರೆ. ನಂತರ ಪ್ರವಾಸಕ್ಕೆ ಬಂದಿದ್ದ ವಿದ್ಯಾರ್ಥಿಗಳನ್ನು ಬೇರೊಂದು ಬಸ್ಸಿನಲ್ಲಿ ಊರಿಗೆ ಕಳುಹಿಸಿ, ಅಪಘಾತಕ್ಕೆ ಕಾರಣವಾದ ಬಸ್ಸು, ಚಾಲಕ ಮತ್ತು ನಿರ್ವಾಹಕನನ್ನು ತಮ್ಮ ವಶಕ್ಕೆ ಪಡೆದುಕೊಂಡಿದ್ದಾರೆ.

ವಿಷಯ ತಿಳಿದು ಕುಶಾಲನಗರಕ್ಕೆ ಬಂದ ಮೃತ ವಿದ್ಯಾರ್ಥಿಯ ಪೋಷಕರ ರೋಧನೆ ಮುಗಿಲು ಮುಟ್ಟಿತ್ತು. ಮರಣೋತ್ತರ ಪರೀಕ್ಷೆಯ ನಂತರ ಮೃತದೇಹವನ್ನು ಪೋಷಕರು ತಮ್ಮ ಊರಿಗೆ ಕೊಂಡೊಯ್ದರು. ಬೈಲಕುಪ್ಪೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ರಥಕ್ಕೆ ಸ್ವಾಗತ



ಹುಣಸೂರಿಗೆ ಆಗಮಿಸಿದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕನ್ನಡ ಜ್ಯೋತಿ ಹೊತ್ತ ರಥವನ್ನು ತಹಸೀಲ್ದಾರ್ ಜೆ.ಮಂಜುನಾಥ್ ನೇತೃತ್ವದಲ್ಲಿ ಸ್ವಾಗತಿಸಲಾಯಿತು.

ನಾಳೆ ಶ್ರೀಮುತ್ತುರಾಯಸ್ವಾಮಿ ಜಾತ್ರಾ ಮಹೋತ್ಸವ

ಪಿರಿಯಾಪಟ್ಟಣ, ಡಿ.7– ತಾಲೂಕಿನ ಆನೆ ಚೌಕೂರು ರಸ್ತೆಯಲ್ಲಿರುವ ಶ್ರೀಮುತ್ತುರಾಯಸ್ವಾಮಿ ದೇವಸ್ಥಾನದಲ್ಲಿ ಡಿ.9ರಂದು 31ನೇ ವರ್ಷದ ಜಾತ್ರಾ ಮಹೋತ್ಸವ ನಡೆಯಲಿದೆ. ಅಂದು ಬೆಳಗ್ಗೆ 5.30ರಿಂದ 6.30ರವರೆಗೆ ಸ್ವಾಮಿಗೆ ಅಭಿಷೇಕ, ಗಣಪತಿ ಹೋಮ, ನವಗ್ರಹ ಪೂಜೆ ಸೇರಿದಂತೆ ಪೂಜಾ ಕೈಂಕರ್ಯಗಳು ನಡೆಯಲಿದೆ. 11.30ಕ್ಕೆ ತೀರ್ಥ ಪ್ರಸಾದ ವಿನಿಯೋಗ ನಂತರ ಮಧ್ಯಾಹ್ನ ಅನ್ನಸಂತರ್ಪಣೆ ಆಯೋಜಿಸಲಾಗಿದೆ. ಹೀಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ದೇವರ ಕೃಪೆಗೆ ಪಾತ್ರರಾಗಬೇಕು ಎಂದು ಶ್ರೀಮುತ್ತುರಾಯಸ್ವಾಮಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವಿ.ಎಸ್.ರಾಮಚಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಸ್ಕಾರಯುತ ಶಿಕ್ಷಣಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ

ಮೀನುಗಾರಿಕೆ ಸಚಿವ ಮಾಂಕಾಳ ಎಸ್.ವೈದ್ಯ



ಕ್ರೀಡಾಕೂಟವನ್ನು ಸಚಿವ ಮಧು ಬಂಗಾರಪ್ಪ ಹಾಗೂ ಗಣ್ಯರು ಉದ್ಘಾಟಿಸಿದರು.

ನಂಜನಗೂಡು, ಡಿ.7– ಅಭಿವೃದ್ಧಿಗೆ ಶಿಕ್ಷಣವೇ ಕಾರಣ. ಸಂಸ್ಕಾರಯುತ ಶಿಕ್ಷಣಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಅಂತಹ ಮೌಲ್ಯಾಧಾರಿತ ಶಿಕ್ಷಣವನ್ನು ಪೂಜ್ಯಶ್ರೀಗಳು ತಮ್ಮ ಮಠದ ಸಂಸ್ಥೆಗಳಲ್ಲಿ ನೀಡುತ್ತಿರುವುದು ಶ್ಲಾಘನೀಯ ಎಂದು ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವ ಮಾಂಕಾಳ ಎಸ್.ವೈದ್ಯ ತಿಳಿಸಿದರು.

ತಾಲೂಕಿನ ಸುತ್ತೂರಿನಲ್ಲಿ ಡಾ.ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಸಂಸ್ಮರಣೆ ಅಂಗವಾಗಿ ನಡೆದ ಜೆಎಸ್‌ಎಸ್ ಅಂತರ ಸಂಸ್ಥೆಗಳ ಕ್ರೀಡಾಕೂಟದಲ್ಲಿ ಮಾತನಾಡಿದ ಅವರು, ಶ್ರೀಮಠ ಹಳ್ಳಿಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ಬಡ ವಿದ್ಯಾರ್ಥಿಗಳ ಕನಸುಗಳಿಗೆ ನೀರೆರೆದು ಪೋಷಿಸುತ್ತಿದೆ. ಮಠದ ವಸತಿ ಶಾಲೆಯಲ್ಲಿ 4 ಸಾವಿರಕ್ಕೂ ಹೆಚ್ಚು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಜಾತಿ, ಮತ ಭೇದವಿಲ್ಲದೆ ಉಚಿತ ಶಿಕ್ಷಣ ನೀಡುತ್ತಿರುವುದು ಅನನ್ಯ. ಛಲದಿಂದ ಸಾಧಿಸುವ ಮಕ್ಕಳಿಗೆ ಕೈಯಲ್ಲಿ ಕ್ರೀಡೆಯಿದೆ. ಅದನ್ನು ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧಿಸುವಂತಹ ಪ್ರೋತ್ಸಾಹ ಹಾಗೂ ಮನೋಸ್ಥೈರ್ಯ ತುಂಬುವ ಕೆಲಸ ಶ್ರೀಮಠ ಮಾಡುತ್ತಿರುವುದು ಅನುಕರಣೀಯ ಎಂದರು.

ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಕ್ರೀಡಾಕೂಟದಲ್ಲಿ ಭಾಗವಹಿಸಿರುವುದಕ್ಕೆ ನನಗೆ ಅತೀವ ಸಂತೋಷವಾಗುತ್ತಿದೆ. ಸುತ್ತೂರು ಮಠವು ಶಿಕ್ಷಣ ಇಲಾಖೆಗೆ ಹೆಮ್ಮೆ ತರುವ ಕೆಲಸಗಳನ್ನು ಮಾಡುತ್ತಿದೆ. ಮಕ್ಕಳಿಗೆ ಒಳ್ಳೆಯ ಶಿಕ್ಷಣ, ಸಂಸ್ಕೃತಿ, ಕ್ರೀಡಾಭಿಮಾನ ಬೆಳೆಸಿ ಉತ್ತಮ ವ್ಯಕ್ತಿಗಳನ್ನಾಗಿ ರೂಪಿಸುತ್ತಿದೆ ಎಂದರು.

ಅಂತಾರಾಷ್ಟ್ರೀಯ ವೇಟ್ ಲಿಫ್ಟರ್ ಪುಷ್ಪರಾಜ್ ಹೆಗಡೆ ಮಾತನಾಡಿದರು. ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ವಸತಿ ಶಾಲಾ ಮಕ್ಕಳು ಮಲ್ಲಕಂಬ ಪ್ರದರ್ಶನ ನೀಡಿದರು. ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆಶೀರ್ವಚನ ನೀಡಿದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ.ಮಂಜುನಾಥ್, ಎಸ್.ಶಿವಕುಮಾರಸ್ವಾಮಿ, ಡಾ.ಪುಷ್ಪಲತಾ ಮಾಂಕಾಳ ವೈದ್ಯ, ಶ್ರೀಜಯರಾಜೇಂದ್ರ ಸ್ವಾಮೀಜಿ, ಯು.ಡಿ.ಪವನ್, ಹೆಚ್.ಸಿ.ಉಮೇಶ್, ಲೋಕೇಶಪ್ಪ, ಹೆಚ್.ಎಸ್.ಗಂಗಾಧರಸ್ವಾಮಿ, ಡಿ.ಎಂ.ಸಿದ್ದಲಿಂಗಸ್ವಾಮಿ ಉಪಸ್ಥಿತರಿದ್ದರು.

ಅದ್ಧೂರಿ ಸುಬ್ರಹ್ಮಣ್ಯಸ್ವಾಮಿ ರಥೋತ್ಸವ



ಸುಬ್ರಹ್ಮಣ್ಯಸ್ವಾಮಿ ರಥೋತ್ಸವ ಶನಿವಾರ ಅದ್ಧೂರಿಯಾಗಿ ಜರುಗಿತು.

ತಿ.ನರಸೀಪುರ, ಡಿ.7– ತಾಲೂಕಿನ ಮರಡಿಗುಡ್ಡ ಎಂದೇ ಪ್ರಸಿದ್ಧಿಯಾಗಿರುವ ಮಾದಾಪುರ ಗ್ರಾಮ ಸಮೀಪದ ಶ್ರೀಮರುಡೇಶ್ವರ ದೇವಸ್ಥಾನದಲ್ಲಿ ಷಷ್ಠಿ ಪ್ರಯುಕ್ತ ಸುಬ್ರಹ್ಮಣ್ಯಸ್ವಾಮಿ ರಥೋತ್ಸವ ಶನಿವಾರ ಅದ್ಧೂರಿಯಾಗಿ ಜರುಗಿತು.

ದೇವಾಲಯದಲ್ಲಿ ಬೆಳಗ್ಗೆಯಿಂದಲೇ ಮರುಡೇಶ್ವರಸ್ವಾಮಿಗೆ ರುದ್ರಾಭಿಷೇಕ ಸೇರಿದಂತೆ ವಿವಿಧ ವಿಶೇಷ ಪೂಜಾ ಕಾರ್ಯಗಳು ನಡೆದವು. ಜೊತೆಗೆ ಚರ್ಮ ವ್ಯಾದಿ ನಿವಾರಣೆಗೆ ಹೆಸರಾದ ಶ್ರೀಮತ್ತಿತಾಳೇಶ್ವರ ಸ್ವಾಮಿಗೂ ವಿಶೇಷ ಪೂಜೆ ನಡೆಯಿತು. ಮಧ್ಯಾಹ್ನ 1.20ರ ವೇಳೆಗೆ ಅಲಂಕೃತ ರಥದಲ್ಲಿ ಸುಬ್ರಹ್ಮಣ್ಯಸ್ವಾಮಿಯನ್ನು ಪ್ರತಿಷ್ಠಾಪಿಸಿ ದೇವಾಲಯದ ಎದುರಿನ ರಥದ ಬೀದಿಯಲ್ಲಿ ಒಂದು ಸುತ್ತು ಪ್ರದಕ್ಷಿಣೆ ಹಾಕಿ ಮತ್ತೆ ರಥೋತ್ಸವ ದೇವಾಲಯ ತಲುಪಿತು.

ಶನಿವಾರ ಬೆಳಗ್ಗೆ ಷಷ್ಠಿ ಪ್ರಯುಕ್ತ ಮಾದಾಪುರ ಗ್ರಾಮದಲ್ಲಿ ಶ್ರೀಗಣೇಶ ಮತ್ತು ಶ್ರೀಮರುಡೇಶ್ವರ ಸ್ವಾಮಿ, ಸುಬ್ರಮಣ್ಯೇಶ್ವರ ಸ್ವಾಮಿ ಮೆರವಣಿಗೆ ನಡೆಸಲಾಯಿತು. ದೇವಾಲಯಕ್ಕೆ ಆಗಮಿಸಿದ ಭಕ್ತರು ನಾಗರ ಕಲ್ಲಿಗೆ ಹಾಗೂ ಹುತ್ತಕ್ಕೆ ಹಾಲೆರೆದು ಷಷ್ಠಿ ಆಚರಿಸಿ ದೇವರ ದರ್ಶನ ಪಡೆದರು. ರಥೋತ್ಸವದಲ್ಲಿ ಪಾಲ್ಗೊಂಡ ಭಕ್ತರಿಗೆ ಪ್ರಸಾದ ವಿತರಿಸಲಾಯಿತು.

ಸರಗೂರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ರಥಕ್ಕೆ ಸ್ವಾಗತ



ತಾಲೂಕು ಆಡಳಿತದಿಂದ ರಥವನ್ನು ಬರಮಾಡಿಕೊಳ್ಳಲಾಯಿತು.

ಸರಗೂರು, ಡಿ.7– ಪಟ್ಟಣಕ್ಕೆ ಆಗಮಿಸಿದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಚಾರ ರಥವನ್ನು ತಾಲೂಕು ಆಡಳಿತ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಸದಸ್ಯರು ಸೇರಿದಂತೆ ಕನ್ನಡಾಭಿಮಾನಿಗಳು ಅದ್ಧೂರಿಯಾಗಿ ಬರಮಾಡಿಕೊಂಡರು.

ಪಟ್ಟಣದ ಮಹಾವೀರ ಸರ್ಕಲ್‌ನಲ್ಲಿರುವ ಗಣಪತಿ ದೇವಾಲಯದ ಎದುರು ರಥವನ್ನು ಸ್ವಾಗತಿಸಿ ಮಾತನಾಡಿದ ತಹಸೀಲ್ದಾರ್ ಮೋಹನ ಕುಮಾರಿ, ಕನ್ನಡ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಕಾಪಾಡುವುದು ಸಾಮುದಾಯಿಕ ಕರ್ತವ್ಯ. ಕನ್ನಡ ಸಾಹಿತ್ಯ ಸಮ್ಮೇಳನ ಕೇವಲ ಸರ್ಕಾರಿ ಅಥವಾ ಆಡಳಿತಾತ್ಮಕ ಕಾರ್ಯಕ್ರಮವಾಗಿರದೇ ಪ್ರತಿ ಮನೆಯವರ ಸಂಭ್ರಮಾಚರಣೆಯಾಗಿದ್ದು, ಇದು ನೆಲ ಮತ್ತು ಭಾಷೆಯ ಹೆಮ್ಮೆ ಬಿಂಬಿಸುತ್ತದೆ ಎಂದರು.

ಕೃಷಿ ಪ್ರಧಾನ ಜಿಲ್ಲೆಯಾಗಿರುವ ಮಂಡ್ಯ ಸಾಹಿತ್ಯಕ್ಕೂ ಹೆಸರುವಾಸಿಯಾಗಿದ್ದು, ಅಲ್ಲಿನ ಜನ ಸಾಹಿತ್ಯದ ಜೊತೆ ನಂಟು ಹೊಂದಿದ್ದಾರೆ. ಪ್ರತಿಯೊಬ್ಬ ಕನ್ನಡಿಗರು ಸ್ವಯಂ ಪ್ರೇರಣೆಯಿಂದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪಾಲ್ಗೊಳ್ಳಬೇಕು ಎಂದರು.

ಇದೇ ವೇಳೆ ಎಇಇ ಉಷಾ, ಎಪಿಎಂಸಿ ಕಾರ್ಯದರ್ಶಿ ಹೆಚ್.ಎಸ್.ಕೃಷ್ಣಮೂರ್ತಿ, ಸಹಾಯಕ ಕಾರ್ಯದರ್ಶಿ ವಸಂತ ಕುಮಾರ್, ತಾಲೂಕು ಕಸಾಪ ಅಧ್ಯಕ್ಷ ಕೆಂಡಗಣ್ಣಸ್ವಾಮಿ, ಪ್ರಧಾನ ಕಾರ್ಯದರ್ಶಿ ನಿಂಗರಾಜು, ಆದಿಕರ್ನಾಟಕ ಮಹಾಸಭಾ ಅಧ್ಯಕ್ಷ ಶಿವಣ್ಣ, ಅಕ್ರಮ ಸಕ್ರಮ ಸಮಿತಿ ಸದಸ್ಯ ಶಿವಶಂಕರ್, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪಿ.ಜವರನಾಯಕ, ಪಪಂ ಉಪಾಧ್ಯಕ್ಷ ಶಿವಕುಮಾರ್, ಸದ್ಯರಾದ ಸ್ವಾಮಿ, ಚಲುವಕೃಷ್ಣ, ಮಾಜಿ ಅಧ್ಯಕ್ಷ ಶಿವರಾಜು, ವರ್ತಕರ ಸಂಘದ ಅಧ್ಯಕ್ಷ ಎಸ್.ಪಿ.ಪ್ರಸಾದ್, ಮಾಜಿ ಅಧ್ಯಕ್ಷ ಶ್ರೀನಿವಾಸ್, ತ್ರಿಮತಸ್ಥ ಬ್ರಾಹ್ಮಣ ಗೌರವಾಧ್ಯಕ್ಷ ಎಸ್.ಎ.ಸಾಂಬವ ಮೂರ್ತಿ, ಪ್ರಧಾನ ಕಾರ್ಯದರ್ಶಿ ಭಾಸ್ಕರ್, ಶ್ರೀವತ್ಸ, ಮಹೇಶ್, ಗುತ್ತಿಗೆದಾರ ಎಸ್.ಎಸ್. ಬಸವರಾಜು, ಶಿಕ್ಷಕರಾದ ಬಂಗಾರಯ್ಯ, ನಾಗರಾಜು, ಮುಖಂಡರಾದ ಮಲ್ಲೇಶ್, ನಿಂಗಚಾರ್, ವೈಂಕುಠ ನಾಯಕ, ಬೆಟ್ಟಸ್ವಾಮಿ ಇನ್ನಿತರರಿದ್ದರು.

ಜನರು ಸಂವಿಧಾನದ ನೀತಿ ನಿಯಮ ತಿಳಿಯಬೇಕು

ಬಿಜೆಪಿ ಜಿಲ್ಲಾ ಸಂಚಾಲಕ ಎಸ್.ಮಹದೇವಯ್ಯ



ಕಾರ್ಯಕ್ರಮವನ್ನು ಬಿಜೆಪಿ ಜಿಲ್ಲಾ ಸಂಚಾಲಕ ಎಸ್.ಮಹದೇವಯ್ಯ ಉದ್ಘಾಟಿಸಿದರು.

ತಿ.ನರಸೀಪುರ, ಡಿ.7– ಸಂವಿಧಾನದ ನೀತಿ ನಿಯಮಗಳು, ಕಾನೂನು, ಹಕ್ಕು, ಕರ್ತವ್ಯಗಳನ್ನು ಗ್ರಾಮೀಣ ಜನರು ತಿಳಿಯಬೇಕು ಎಂದು ಬಿಜೆಪಿ ಜಿಲ್ಲಾ ಸಂಚಾಲಕ ಎಸ್.ಮಹದೇವಯ್ಯ ತಿಳಿಸಿದರು.

ವರುಣ ಗ್ರಾಮದ ಅಂಬೇಡ್ಕರ್ ಭವನದಲ್ಲಿ ನಡೆದ ಸಂವಿಧಾನ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಂವಿಧಾನ ಜಾರಿಯಾಗಿ 75 ವರ್ಷಗಳು ಕಳೆದಿದ್ದರೂ, ದೇಶದ ಜನರಿಗೆ ಸಾಮಾಜಿಕ ಸ್ವಾತಂತ್ರ್ಯ ಇನ್ನೂ ಸಿಕ್ಕಿಲ್ಲ. 60 ವರ್ಷ ದೇಶವನ್ನು ಆಳಿದ ಕಾಂಗ್ರೆಸ್ ಸರ್ಕಾರ ಇದರ ಅನುಷ್ಠಾನದಲ್ಲಿ ವಿಫಲವಾಗಿದೆ ಎಂದರು.

ದೇಶದ ಸ್ವಾತಂತ್ರ್ಯಕ್ಕೂ ಮುನ್ನಾ, ಸ್ವಾತಂತ್ರ್ಯ ನಂತರ ಕಾಂಗ್ರೆಸ್‌ನವರು ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ವಿರೋಧಿಸಿಕೊಂಡು ಬಂದರು ಎಂದರು.

ಮುಖ್ಯ ಭಾಷಣಕಾರ ಪ್ರಫುಲ್ಲಾ ಮಲ್ಲಾಡಿ ಮಾತನಾಡಿ, ಅಂಬೇಡ್ಕರ್ ಅವರನ್ನು ಚುನಾವಣೆಗಳಲ್ಲಿ ಸೋಲಿಸಿದವರು ಕಾಂಗ್ರೆಸ್‌ನವರು. ಮಹಿಳೆಯರಿಗೆ ಆಸ್ತಿಯಲ್ಲಿ ಹಕ್ಕು ಸಿಗಬೇಕು ಎಂದು ಪ್ರತಿಪಾದಿಸಿದವರು ಅಂಬೇಡ್ಕರ್ ಎಂದರು.


ಜಿಪಂ ಮಾಜಿ ಸದಸ್ಯ ಸದಾನಂದ ಮಾತನಾಡಿದರು. ಸಭೆ ಅಧ್ಯಕ್ಷತೆಯನ್ನು ಸಂಚಾಲಕ ಮಹದೇವಸ್ವಾಮಿ ವಹಿಸಿದ್ದರು. ಜಿಲ್ಲಾ ಸಹ ಸಂಚಾಲಕ ನರಸಿಂಹಮೂರ್ತಿ, ಪ್ರಕಾಶ್ ಕುಮಾರ್, ಪ್ರಧಾನ ಕಾರ್ಯದರ್ಶಿ ವೆಂಕಟ ರಮಣಶೆಟ್ಟಿ, ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ವಾಸುದೇವ, ನಾಗರಾಜ್ ಮಲ್ಲಾಡಿ, ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಸಿಎಂ ಮಹದೇವಯ್ಯ, ಮಾಜಿ ಕ್ಷೇತ್ರಾಧ್ಯಕ್ಷ ಎ.ಎನ್.ಶಿವಯ್ಯ, ಕುಮಾರ್, ಪ್ರಕಾಶ್, ನರಸಿಂಹ ಮೂರ್ತಿ, ಮಹದೇವಸ್ವಾಮಿ, ಶಂಕರ್, ಎಸ್‌ಟಿ ಮೋರ್ಚಾ ಅಧ್ಯಕ್ಷ ಚಂದ್ರು ಎಸ್ಸಿ ಮೋರ್ಚಾ ಅಧ್ಯಕ್ಷ ಸದಾನಂದ, ಯುವ ಮೋರ್ಚಾ ಅಧ್ಯಕ್ಷ ಮಹೇಶ, ನದೀಶ್, ಶಂಕರ, ನಿರಂಜನ್, ಶಶಾಂಕ್, ಶ್ರೀಧರ್, ಮಹಿಳಾ ಮೋರ್ಚಾ ಅಧ್ಯಕ್ಷೆ ಲಕ್ಷ್ಮಿ, ಗ್ರಾಪಂ ಸದಸ್ಯೆ ಪುಷ್ಪಲತಾ, ರಾಜೇಶ್ವರಿ, ಮಧು, ಮಂಜುನಾಥ್ ಇದ್ದರು.

ಪಟ್ಟಾಧಿಕಾರ ಮಹೋತ್ಸವಕ್ಕೆ ದೇಣಿಗೆ ವಿತರಣೆ



ಮೈಸೂರು ತಾಲೂಕಿನ ಬರಡನಪುರ ಮಹಾಂತೇಶ್ವರ ಮಠದಲ್ಲಿ ನಡೆಯುವ ಪಟ್ಟಾಧಿಕಾರ ಮಹೋತ್ಸವಕ್ಕೆ ಉದ್ಯಮಿ ಎಸ್.ಶ್ರೀಕಾಂತ್ ಅವರು ಮಠದ ಪೀಠಾಧ್ಯಕ್ಷ ಪರಶಿವಮೂರ್ತಿ ಸ್ವಾಮೀಜಿ ಅವರಿಗೆ 51150 ರೂ. ದೇಣಿಗೆ ನೀಡಿದರು. ಈ ವೇಳೆ ಪುರ ಮಠದ ಚಂದ್ರಶೇಖರ ಸ್ವಾಮೀಜಿ, ಜಯಪುರ ಗ್ರಾಪಂ ಸದಸ್ಯರಾದ ಬಸವಣ್ಣ, ಎಂ.ನಾಗರಾಜು, ರೇಣುಕಾ, ಮುಖಂಡರಾದ ಮೂಗನಾಯಕ, ಜವರನಾಯಕ, ಮಹದೇವಯ್ಯ, ಶಿವರಾಜು, ದೊಡ್ಡಣ್ಣ, ಶಂಭಪ್ಪ, ಡೇರಿ ಬಸವರಾಜು, ಅಬ್ದುಲ್ ಮುತಾಲೀಫ್, ಮಂಜುನಾಥ್ ಇತರರಿದ್ದರು.

ಕಣಿಯನಹುಂಡಿ ಡೈರಿಗೆ ಅವಿರೋಧ ಆಯ್ಕೆ



ಕಣಿಯನಹುಂಡಿ ಡೈರಿ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರನ್ನು ಸನ್ಮಾನಿಸಲಾಯಿತು.

ಹೆಚ್.ಡಿ.ಕೋಟೆ, ಡಿ.7– ತಾಲೂಕಿನ ಕಣಿಯನಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆಯಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು ಸೇರಿದಂತೆ ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಡೈರಿ ಅಧ್ಯಕ್ಷರಾಗಿ ಸಣ್ಣನಿಂಗೇಗೌಡ, ಉಪಾಧ್ಯಕ್ಷರಾಗಿ ಬಸವರಾಜು, ನಿರ್ದೇಶಕರಾಗಿ ರಮೇಶ್, ಶಿವರಾಜು, ಸೋಮೇಶ್, ಚಂದು, ದೇವಮ್ಮ, ಎಸ್.ಪ್ರೇಮ್, ಮಲ್ಲಶೆಟ್ಟಿ, ಕೆ.ಎ.ಶಿವರಾಜು, ಮಾಧವಯ್ಯ, ಸ್ವಾಮಿನಾಯಕ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಅಶ್ವಿನ್ ಕುಮಾರ್ ಘೋಷಿಸಿದರು.

ಮೈಮುಲ್ ನಿರ್ದೇಶಕ ಈರೇಗೌಡ ಮಾತನಾಡಿ, ಕಣಿಯನಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ನಿರ್ದೇಶಕರ ಆಯ್ಕೆಗಾಗಿ ಕಳೆದ 30 ವರ್ಷಗಳಿಂದ ಚುನಾವಣೆ ನಡೆಸಲಾಗುತ್ತಿತ್ತು. ಆದರೆ ಈ ಬಾರಿ ಯಾವುದೇ ಗೊಂದಲ ಸೃಷ್ಟಿಯಾಗದ ರೀತಿ ಎಲ್ಲರನ್ನೂ ಒಗ್ಗೂಡಿಸಿ ಅವಿರೋಧವಾಗಿ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರನ್ನು ಆಯ್ಕೆ ಮಾಡಲು ಯಶಸ್ವಿಯಾಗಿದ್ದೇವೆ ಹೀಗಾಗಿ ಮುಂದಿನ ದಿನಗಳಲ್ಲಿ ನೂತನ ಆಡಳಿತ ಮಂಡಳಿ ಸದಸ್ಯರು ಸಂಘದ ಅಭಿವೃದ್ಧಿಗೆ ಶ್ರಮಿಸಬೇಕು. ಇದಕ್ಕೆ ಬೇಕಾದ ಎಲ್ಲಾ ರೀತಿಯ ನೆರವು ನೀಡಲಾಗುವುದು ಎಂದರು.

ಇದೇ ವೇಳೆ ಅಧ್ಯಕ್ಷರು, ಉಪಾಧ್ಯಕ್ಷರು ಸೇರಿದಂತೆ ನಿರ್ದೇಶಕರು, ಗ್ರಾಮಸ್ಥರು ಸಿಹಿ ಹಂಚಿ ಸಂಭ್ರಮಿಸಿದರು. ಇದೇ ವೇಳೆ ಗ್ರಾಪಂ ಮಾಜಿ ಅಧ್ಯಕ್ಷ ಹೆಚ್.ಕೆ.ಅನುರಾಜು, ಸದಸ್ಯ ಬಸವರಾಜು, ಡೈರಿ ಮಾಜಿ ಅಧ್ಯಕ್ಷ ಸಿ.ಕೆ.ರಮೇಶ್, ಕಾಂಗ್ರೆಸ್ ಮುಖಂಡ ಕೃಷ್ಣರಾಮು, ಜೆಡಿಎಸ್ ಮುಖಂಡ ಮರೀಗೌಡ, ಡೈರಿ ಅಧ್ಯಕ್ಷ ಚಂದ್ರಸ್ವಾಮಿ, ಕುಮಾರ್, ಸುದೀಪ್, ಮರೀಗೌಡ, ಸಕಲೇಶ, ಸುರೇಶ್, ಗುರು, ವಿಸ್ತಾರಣಾಧಿಕಾರಿ ಜಗದಂಬ, ಗ್ರಾಮದ ಮುಖಂಡರು ಹಾಜರಿದ್ದರು.

> ಕಳೆದ ಕೆಲವು ವರ್ಷಗಳ ಹಿಂದೆ ಹೈನುಗಾರಿಕೆಯಲ್ಲಿ ತಾಲೂಕು ಹಿಂದೆ ಉಳಿದಿದ್ದು, 20 ಹಾಲು ಉತ್ಪಾದಕರ ಸಹಕಾರ ಸಂಘಗಳು ಮಾತ್ರ ಇದ್ದವು. ನಾನು ಮೈಮುಲ್ ನಿರ್ದೇಶಕನಾದ ಮೇಲೆ ಹೆಚ್.ಡಿ.ಕೋಟೆಯಲ್ಲಿ 180 ಸಂಘಗಳನ್ನು ಸ್ಥಾಪಿಸಿದ್ದೇನೆ. ಮುಂದಿನ ದಿನಗಳಲ್ಲಿ ಕಣಿಯನಹುಂಡಿ ಗ್ರಾಮದಲ್ಲಿ ಬಿಎಂಸಿ ಕಟ್ಟಡ ನಿರ್ಮಾಣ ಮಾಡುವ ಆಲೋಚನೆ ಇದ್ದು, ಸಹಕಾರ ಸಂಘಕ್ಕೆ ಹಾಲು ಉತ್ಪಾದಕರು ಗುಣಮಟ್ಟದ ಹಾಲು ಸರಬರಾಜು ಮಾಡಬೇಕು.
>
> - ಈರೇಗೌಡ, ಮೈಮುಲ್ ನಿರ್ದೇಶಕ

ಡಿ.15ರಂದು ಹುಣಸೂರಲ್ಲಿ ಹನುಮ ಜಯಂತಿ

ಶಾಂತಿಯುತವಾಗಿ ಆಚರಿಸುವಂತೆ ಶಾಸಕ ಜಿ.ಡಿ.ಹರೀಶ್‌ಗೌಡ ಮನವಿ



ಹುಣಸೂರಲ್ಲಿ ಹನುಮ ಜಯಂತಿ ಪೂರ್ವಭಾವಿ ಸಭೆ ನಡೆಯಿತು

ಹುಣಸೂರು, ಡಿ.7– ನಗರದಲ್ಲಿ ಡಿ.15ರಂದು ನಡೆಯುವ ಹನುಮ ಜಯಂತಿಯನ್ನು ಶಾಂತಿಯುತವಾಗಿ ಆಚರಿಸುವಂತೆ ಶಾಸಕ ಜಿ.ಡಿ.ಹರೀಶ್‌ಗೌಡ ಮನವಿ ಮಾಡಿದರು.

ನಗರದ ಉಪವಿಭಾಗಾಧಿಕಾರಿ ಕಚೇರಿಯಲ್ಲಿ ಎಸಿ ವಿಜಯ ಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಹನುಮ ಜಯಂತಿ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಎಲ್ಲಾ ಧರ್ಮಿಯರು ಮತ್ತು ಸಮುದಾಯದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸರ್ಕಾರದ ಮಾರ್ಗಸೂಚಿಯಂತೆ ಯಾವುದೇ ಅಹಿತಕರ ಘಟನೆಗಳಿಗೆ ಆಸ್ಪದ ನೀಡದಂತೆ ಮುನ್ನೆಚ್ಚರಿಕೆ ವಹಿಸಿ ಹನುಮ ಜಯಂತಿ ಆಚರಿಸುವಂತೆ ತಿಳಿಸಿದರು.

ಹನುಮ ಜಯಂತಿ ಅಂಗವಾಗಿ ನಡೆಯುವ ಮೆರವಣಿಗೆ ಸಾಗುವ ರಸ್ತೆಗಳಲ್ಲಿ ಪೊಲೀಸ್ ಇಲಾಖೆ 40 ಹಾಗೂ ನಗರಸಭೆ ವತಿಯಿಂದ 20 ಸಿಸಿ ಕ್ಯಾಮರಾ ಅಳವಡಿಸುವಂತೆ ನಗರಸಭೆ ಆಯುಕ್ತೆ ಮಾನಸ ಅವರಿಗೆ ಸೂಚಿಸಿದರು.

ಎಸಿ ವಿಜಯ್ ಕುಮಾರ್ ಮಾತನಾಡಿ, ಧಾರ್ಮಿಕ ಆಚರಣೆ, ಉತ್ಸವ, ಮೆರವಣಿಗೆಗಳು ನಮ್ಮ ಸಂಸ್ಕೃತಿ ಪ್ರತಿಬಿಂಬಿಸಲಿವೆ. ಹೀಗಾಗಿ ಎಲ್ಲಾ ಸಮುದಾಯದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಶಾಂತಿಯುತವಾಗಿ ಹನುಮ ಜಯಂತಿ ಆಚರಿಸಬೇಕು. ಮೆರವಣಿಗೆಗೆ ತಾಲೂಕು ಆಡಳಿತ ಅನುಮತಿ ನೀಡಲಿದ್ದು, ಮುನ್ನೆಚ್ಚರಿಕಾ ಕ್ರಮ ವಹಿಸಬೇಕು ಎಂದರು.

ಡಿವೈಎಸ್ಪಿ ಪಿ.ಗೋಪಾಲಕೃಷ್ಣ ಮಾತನಾಡಿ, ಮೆರವಣಿಗೆ ಮತ್ತಿತರ ಕಾರ್ಯಗಳಿಗೆ ಬಳಸುವ ವಾಹನಗಳ ದಾಖಲಾತಿ ಸರಿಯಾಗಿರಬೇಕು. ಪೊಲೀಸ್ ಮಾರ್ಗಸೂಚಿಯನ್ನು ಕಡ್ಡಾಯವಾಗಿ ಪಾಲಿಸಬೇಕು. ಮೆರವಣಿಗೆ, ಬ್ಯಾನರ್, ಬಂಟಿಂಗ್ಸ್, ಫ್ಲೆಕ್ಸ್‌ಗಳಲ್ಲಿ ಹನಮಂತ ದೇವರ ಹೊರತುಪಡಿಸಿ ಬೇರೆ ಯಾವುದೇ ಫೋಟೋ ಇರದಂತೆ ಸಮಿತಿ ಎಚ್ಚರ ವಹಿಸಬೇಕು ಎಂದರು.

ಜಯಂತಿ ಆಚರಣೆಗೆ ತಾಲೂಕು ಆಡಳಿತ ಅನುಮತಿ ನೀಡಲಿದೆ. ಬ್ಯಾನರ್, ಫ್ಲೆಕ್ಸ್ ಅಳವಡಿಕೆಗೆ ನಗರಸಭೆ ಅನುಮತಿ ಪಡೆಯಬೇಕು. ಆಹಾರ ಮತ್ತು ಆರೋಗ್ಯ ಇಲಾಖೆಯಿಂದ ಕಡ್ಡಾಯವಾಗಿ ಪ್ರಸಾದ ಪರೀಕ್ಷೆ ನಡೆಸಬೇಕು. ಪ್ರಸಾದ ವಿತರಿಸುವವರು, ನೀಡುವವರು ಮೊದಲೇ ಮಾಹಿತಿ ನೀಡಬೇಕು. ಎಲ್ಲದಕ್ಕೂ ತಾಲೂಕು ಆಡಳಿತದ ಪೂರ್ವಾನುಮತಿ ಪಡೆಯಬೇಕು ಎಂದು ತಿಳಿಸಿದರು.

ಹನುಮಂತೋತ್ಸವ ಸಮಿತಿ ಅಧ್ಯಕ್ಷ ವೆಂಕಟನಾರಾಯಣ ದಾಸ್ ಮಾತನಾಡಿ, ಡಿ.13ರಂದು ಆಂಜನೇಯಸ್ವಾಮಿ ದೇವಾಸ್ಥಾನದಿಂದ ಹನುಮ ವಿಗ್ರಹವನ್ನು ಮೆರವಣಿಗೆಯಲ್ಲಿ ತಂದು ಮುನೇಶ್ವರ ಕಾವಲ್ ಮೈದಾನದಲ್ಲಿ ಪ್ರತಿಷ್ಠಾಪಿಸಲಾಗುವುದು. ಡಿ.14ರಂದು ಆಟೋಟ ಸ್ಪರ್ಧೆಗಳು ನಡೆಯಲಿವೆ. ಡಿ.15 ರಂದು ಹನುಮಂತೋತ್ಸವ ಮೆರವಣಿಗೆ ನಡೆಯಲಿದೆ ಎಂದರು.

ಮಸೀದಿ ಕಾರ್ಯದರ್ಶಿ ಎಜಾಜ್ ಅಹಮದ್, ಮುಸ್ಲಿಂ ಮುಖಂಡರಾದ ಅಯೂಬ್ ಖಾನ್, ಅಸ್ಲಾಂಪಾಷ, ಸರದಾರ್, ಜಿಪಂ ಸದಸ್ಯ ಹೆಚ್.ಎಂಫಜಲುಲ್ಲಾ ಮಾತನಾಡಿ ಜಯಂತಿಗೆ ಸಂಪೂರ್ಣ ಸಹಕಾರ ನೀಡುವುದಾಗಿ ಸೂಚಿಸಿದರು.

ಸಭೆಯಲ್ಲಿ ನಗರಸಭಾ ಸದಸ್ಯ ವಿವೇಕನಂದ, ತಾಪಂ ಸಹಾಯಕ ನಿರ್ದೇಶಕ ರಾಜೇಶ್, ತಹಸೀಲ್ದಾರ್ ಯಧು ಗಿರೀಶ್, ಮುಖಂಡರಾದ ಅನಿಲ್, ಪಿ.ಆರ್.ರಾಚಪ್ಪ, ಪುಟ್ಟರಾಜು, ರಾಘವೇಂದ್ರ ಕೃಷ್ಣ ರವಿಕುಮಾರ್, ಕಾರ್ತಿಕ್, ರವಿ, ರಾಜು, ನರಸಿಂಹ ಸೇರಿದಂತೆ ಇನ್ನಿತರರಿದ್ದರು.

ಸಿದ್ದಲಿಂಗಪುರ ಶ್ರೀ ಷಷ್ಠಿ ಸುಬ್ರಹ್ಮಣ್ಯೇಶ್ವರಸ್ವಾಮಿ ದೇವಸ್ಥಾನದಲ್ಲಿ ಅದ್ಧೂರಿ ಜಾತ್ರೆ; ರಥೋತ್ಸವ

• ಸಾವಿರಾರು ಭಕ್ತರಿಂದ ದರ್ಶನ; ವಿಶೇಷ ಪೂಜೆ • ಬೆಂಗಳೂರು–ಮೈಸೂರು ಸರ್ವಿಸ್ ರಸ್ತೆ ಬಂದ್



ದೇವಾಲಯದ ರಥೋತ್ಸವದಲ್ಲಿ ನೆರೆದಿದ್ದ ಭಕ್ತರ ದಂಡು.



ಸಿದ್ಧಲಿಂಗಪುರದ ಸುಬ್ರಹ್ಮಣ್ಯೇಶ್ವರ ದೇವಾಲಯದ ಪಕ್ಕದಲ್ಲಿರುವ ಹುತ್ತಕ್ಕೆ ತನಿ ಎರೆಯುತ್ತಿರುವ ಭಕ್ತ ಸಮೂಹ.

ಮೈಸೂರು, ಡಿ.7(ಎಂಟಿವೈ)– ಅಪಾರ ಭಕ್ತರ ಸಮ್ಮುಖದಲ್ಲಿ ಶನಿವಾರ ಮೈಸೂರು–ಬೆಂಗಳೂರು ಮುಖ್ಯರಸ್ತೆಯಲ್ಲಿನ ಸಿದ್ದಲಿಂಗಪುರದ ಶ್ರೀ ಷಷ್ಠಿ ಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಾಲಯದಲ್ಲಿ ಶ್ರೀ ಷಷ್ಠಿ ಸುಬ್ರಹ್ಮಣ್ಯೇಶ್ವರಸ್ವಾಮಿ ಜಾತ್ರೆ ಹಾಗೂ ರಥೋತ್ಸವ ವಿಜೃಂಭಣೆಯಿಂದ ಜರುಗಿತು.

ಮಾರ್ಗಶಿರ ಮಾಸದ ಶುದ್ಧ ಷಷ್ಠಿಯ ದಿನವಾದ ಇಂದು ಸುಬ್ರಹ್ಮಣ್ಯೇಶ್ವರಸ್ವಾಮಿ ದೇವಾಲಯದಲ್ಲಿ ಮುಂಜಾನೆಯಿಂದಲೇ ವಿವಿಧ ಪೂಜಾ ಕೈಂಕರ್ಯಗಳು ಜರುಗಿದವು. ನಂತರ ಅಪಾರ ಸಂಖ್ಯೆಯ ಭಕ್ತರು ಸುಬ್ರಹ್ಮಣ್ಯೇಶ್ವರ ಸ್ವಾಮಿಯ ದರ್ಶನ ಪಡೆದರು.

ಕೋವಿಡ್‌ನಿಂದಾಗಿ ಎರಡು ದೇವಾಲಯದ ಜೀರ್ಣೋದ್ಧಾರ ಕಾರ್ಯದಿಂದ ಕಳೆದ ಮೂರು ವರ್ಷಗಳಿಂದ ಸಿದ್ಧಲಿಂಗಪುರದ ಷಷ್ಠಿ ಸುಬ್ರಹ್ಮಣ್ಯೇಶ್ವರ ದೇವಾಲಯದಲ್ಲಿ ಷಷ್ಠಿ ಜಾತ್ರೆ ನಡೆದಿರಲಿಲ್ಲ. ಅಲ್ಲದೆ, ಭಕ್ತರು ದೇವಾಲಯಕ್ಕೆ ಬಂದು ಪೂಜೆ ಸಲ್ಲಿಸಲು ಹಾಗೂ ದರ್ಶನ ಪಡೆಯಲು ಅವಕಾಶವಿರಲಿಲ್ಲ. ಈ ಹಿನ್ನೆಲೆಯಲ್ಲಿ ಈ ಬಾರಿ ವಿಜೃಂಭಣೆಯಿಂದ ಷಷ್ಠಿ ಜಾತ್ರೆ ನಡೆಸಲು ನಿರ್ಧರಿಸಿದ್ದರಿಂದ ಮೈಸೂರು, ಮಂಡ್ಯ, ಚಾಮರಾಜನಗರ, ಬೆಂಗಳೂರು ಸೇರಿದಂತೆ ವಿವಿಧೆಡೆಯಿಂದ ಅಪಾರ ಸಂಖ್ಯೆಯ ಭಕ್ತರು ಇಂದು ಮುಂಜಾನೆಯಿಂದಲೇ ದೇವಾಲಯದ ಮುಂದೆ ಸಾಲುಗಟ್ಟಿ ನಿಂತು, ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ವಿಶೇಷ ಪೂಜೆ: ಕುಕ್ಕೆ ಸುಬ್ರಹ್ಮಣ್ಯ ಹೊರತುಪಡಿಸಿದರೆ ಮೈಸೂರು ಭಾಗದ ಸಿದ್ಧಲಿಂಗಪುರದ ಸುಬ್ರಹ್ಮಣ್ಯೇಶ್ವರ ದೇವಾಲಯದಲ್ಲಿ ನಡೆಯುವ ಷಷ್ಠಿ ಜಾತ್ರೆ ಈ ಭಾಗದಲ್ಲಿ ಮನೆ ಮಾತಾಗಿದೆ. ಸಿದ್ಧಲಿಂಗಪುರ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಷಷ್ಠಿ ಜಾತ್ರೆ ವಿಜೃಂಭಣೆಯಿಂದ ನೆರವೇರಲಿದೆ. ಅರ್ಚಕ ಎಂ.ವಿ. ಸುಬ್ರಹ್ಮಣ್ಯ ನೇತೃತ್ವದಲ್ಲಿ ಬೆಳಿಗ್ಗೆಯೇ ಶ್ರೀ ಷಷ್ಠಿ ಸುಬ್ರಹ್ಮಣ್ಯೇಶ್ವರಸ್ವಾಮಿಯ ಮೂರ್ತಿಗೆ ಮಹಾನ್ಯಾಸಪೂರ್ವಕ ರುದ್ರಾಭಿಷೇಕ, ಪುರುಷ ಸೂಕ್ತ, ಶ್ರೀ ಸೂಕ್ತ, ಸಹಸ್ರನಾಮಾರ್ಚನೆ, ಅಷ್ಟಾವಧಾನ ಸೇವೆ ನೆರವೇರಿದ ಬಳಿಕ, 6 ಅಡಿ ಎತ್ತರದ ಬೆಳ್ಳಿಯ ನಾಗಾಭರಣ ಅಲಂಕಾರ ಮಾಡಿ ಪೂಜೆ ಸಲ್ಲಿಸಲಾಯಿತು. ಬಳಿಕ ಮುಂಜಾನೆ 3ರಿಂದ ಭಕ್ತರಿಗೆ ಸ್ವಾಮಿಯ ದರ್ಶನ ಪಡೆಯಲು ಅವಕಾಶ ಮಾಡಿಕೊಡಲಾಯಿತು. ರಾತ್ರಿ 9.30ರವರೆಗೂ ಅಪಾರ ಸಂಖ್ಯೆಯ ಭಕ್ತರು ದೇವಾಲಯಕ್ಕೆ ಆಗಮಿಸಿ ದರ್ಶನ ಪಡೆದರು. ರಾತ್ರಿ 10 ಗಂಟೆಗೆ ದೇವಾಲಯ ಬಂದ್ ಮಾಡಿ, ನಾಗಾಭರಣವನ್ನು ಅರಮನೆಗೆ ಸುರಕ್ಷಿತವಾಗಿ ಕೊಂಡೊಯ್ಯಲಾಯಿತು.

ಭಕ್ತರ ಪ್ರವೇಶಕ್ಕೆ ಎರಡು ಸಾಲು: ಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಾಲಯಲ್ಲಿ ಎಂದಿನಂತೆ ಧರ್ಮದರ್ಶನ ಹಾಗೂ ಟಿಕೆಟ್ ಪಡೆದು ವಿಶೇಷ ದರ್ಶನ ಪಡೆಯಲೆಂದು ಎರಡು ಪ್ರತ್ಯೇಕ ಸಾಲಿನ ವ್ಯವಸ್ಥೆ ಮಾಡಲಾಗಿತ್ತು. ಧರ್ಮದರ್ಶನಕ್ಕೆ ಒಂದು ಸಾಲು, 30 ರೂ. ಟಿಕೆಟ್ ಪಡೆದ ಭಕ್ತರಿಗೆ ವಿಶೇಷ ದರ್ಶನಕ್ಕೆ ಪ್ರತ್ಯೇಕ ಸಾಲಿನ ವ್ಯವಸ್ಥೆ ಮಾಡಲಾಗಿತ್ತು. ನೂಕುನುಗ್ಗಲು ಉಂಟಾಗದಂತೆ ಕಟ್ಟೆಚ್ಚರ ವಹಿಸಲು ಬ್ಯಾರಿಕೇಡ್ ವ್ಯವಸ್ಥೆ ಮಾಡಲಾಗಿತ್ತು. ಅಲ್ಲದೆ, ಕಂದಾಯ ಮತ್ತು ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿತ್ತು.

ಸರ್ವಿಸ್ ರಸ್ತೆ ಬಂದ್: ದೇವಾಲಯದ ಮುಂಭಾಗವಿರುವ ಬೆಂಗಳೂರು–ಮೈಸೂರು ರಸ್ತೆಯ ಸರ್ವಿಸ್ ರಸ್ತೆಯಲ್ಲಿ ವಾಹನ ಸಂಚಾರ ಬಂದ್ ಮಾಡಲಾಗಿತ್ತು ಎಕ್ಸ್‌ಪ್ರೆಸ್ ವೇನಲ್ಲಿ ವಾಹನ ಸಂಚಾರ ಎಂದಿನಂತಿತ್ತು.

ತಲೆ ಎತ್ತಿದ ಅಂಗಡಿಗಳು: ಸಿದ್ಧಲಿಂಗಪುರದ ಷಷ್ಠಿ ಸುಬ್ರಹ್ಮಣ್ಯೇಶ್ವರ ಜಾತ್ರಾ ಮಹೋತ್ಸದ ಅಂಗವಾಗಿ ಸರ್ವಿಸ್ ರಸ್ತೆಯಲ್ಲಿ ವಿವಿಧ ತಿನಿಸು, ಆಟಿಕೆ ಸೇರಿದಂತೆ ವಿವಿಧ ವಸ್ತುಗಳ ಮಾರಾಟದ ನೂರಾರು ಅಂಗಡಿ ತಲೆ ಎತ್ತಿದ್ದವು. ಜಾತ್ರೆಗೆ ಮೆರಗು ತುಂಬಿದ ಅಂಗಡಿಗಳು ಭಕ್ತರನ್ನು ಆಕರ್ಷಿಸಿದವು.

ಹುತ್ತಕ್ಕೆ ತನಿ ಎರೆದರು: ದೇವಾಲಯ ಪ್ರವೇಶಿಸಲು ಆಗದೇ ಇದ್ದವರು ದೇವಾಲಯದ ಪಕ್ಕದ ಖಾಲಿ ನಿವೇಶನದಲ್ಲಿದ್ದ ಹುತ್ತ ನಾಗನಹಳ್ಳಿ ರಸ್ತೆ, ಮೇಳಾಪುರದ ರಸ್ತೆಯಲ್ಲಿರುವ ಹುತ್ತಗಳಿಗೆ ಅರಿಶಿನ, ಕುಂಕುಮ, ಬೆಣ್ಣೆ, ಹಾಲೆರೆದು ಭಕ್ತರು ಪೂಜೆ ಮಾಡಿಕೊಂಡು ಇಷ್ಟಾರ್ಥ ಸಿದ್ಧಿಗೆ ಪ್ರಾರ್ಥಿಸಿದರು.

ಸ್ಥಳದಲ್ಲೇ ಹಾಲು ಮಾರಾಟ: ಷಷ್ಠಿ ಹಿನ್ನೆಲೆಯಲ್ಲಿ ಸಿದ್ಧಲಿಂಗಪುರದ ಸುಬ್ರಹ್ಮಣ್ಯೇಶ್ವರ ದೇವಾಲಯದ ಬಳಿ ಹಾಲು, ಬೆಣ್ಣೆ ಹಾಗೂ ಚಿನ್ನ–ಬೆಳ್ಳಿ ನಾಗರ ಮಾರಾಟ ಮಾಡುತ್ತಿದ್ದರು. ಇದರಿಂದ ದೇವಾಲಯಕ್ಕೆ ಪೂಜೆ ಸಲ್ಲಿಸಲೆಂದು ಬಂದಿದ್ದ ಅನೇಕ ಭಕ್ತರು ಹಾಲು ಖರೀದಿಸಿ ತನಿ ಎರೆದರು.

ಪೊಲೀಸ್ ಭದ್ರತೆ: ಸಿದ್ಧಲಿಂಗಪುರದ ಷಷ್ಠಿ ಜಾತ್ರೆಗೆ ಅಪಾರ ಸಂಖ್ಯೆಯ ಭಕ್ತರು ಆಗಮಿಸಿದ್ದರಿಂದ ಮೇಟಗಳ್ಳಿ ಪೊಲೀಸರು ಭದ್ರತೆ ಒದಗಿಸಿದ್ದರು.

ಗೀತಗಾಯನ ಸ್ಪರ್ಧೆಯ ಪೋಸ್ಟರ್ ಬಿಡುಗಡೆ ಮಾಡಿದ ಅಶ್ವಿನಿ ಪುನೀತ್ ರಾಜ್‌ಕುಮಾರ್



ಗೀತ ಗಾಯನ ಸ್ಪರ್ಧೆಯ ಪೋಸ್ಟರ್ ಅನ್ನು ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಬಿಡುಗಡೆಗೊಳಿಸಿದರು.

ಮೈಸೂರು, ಡಿ.7(ಜಿಎ)–ಮೈಸೂರಿನ ಪಡುವಾರಹಳ್ಳಿಯ ಶ್ರೀ ವಿದ್ಯಾಗಣಪತಿ ಮತ್ತು ಮಾರುತಿ ಶ್ರೀ ಯುವಕರ ಸಂಘದ ವತಿಯಿಂದ 57ನೇ ವರ್ಷದ ಶ್ರೀ ಹನುಮ ಜಯಂತಿಯ ಪೂಜಾ ಮಹೋತ್ಸವ ಅಂಗವಾಗಿ ಡಿ.15ರಂದು ಆಯೋಜಿಸಿರುವ ಗೀತ ಗಾಯನ ಸ್ಪರ್ಧೆಯ ಪೋಸ್ಟರ್ ಅನ್ನು ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಬಿಡುಗಡೆಗೊಳಿಸಿದರು.

ನಂತರ ಮಾತನಾಡಿದ ಅವರು, ಹನುಮ ಜಯಂತಿ ಕಾರ್ಯಕ್ರಮದಲ್ಲಿ ಕಲಾವಿದರಿಗೆ ಗೀತ ಗಾಯನ ಸ್ಪರ್ಧೆ ಮಾಡುವ ಮುಖಾಂತರ ಯುವ ಕಲಾವಿದರಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಅರ್ಥಪೂರ್ಣವಾಗಿ ಜಯಂತಿಯನ್ನು ಮೈಸೂರಿನಲ್ಲಿ ಆಚರಣೆ ಮಾಡುತ್ತಿರುವುದು ಸಾಂಸ್ಕೃತಿಕ ನಗರಿ ಮೈಸೂರಿಗೆ ಕೀರ್ತಿ ಹೆಚ್ಚಿಸಲಿದೆ ಎಂದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಕೃಷ್ಣಪ್ಪ, ಸಮಾಜ ಸೇವಕರಾದ ಪಡುವಾರಳ್ಳಿ ಮಂಜುನಾಥ್, ಬಿಜೆಪಿ ಯುವ ಮೋರ್ಚಾ ಮೈಸೂರು ನಗರ ಪ್ರಧಾನ ಕಾರ್ಯದರ್ಶಿ ಡಿ.ಲೋಹಿತ್ ಹಾಗೂ ಸಂಘದ ಎಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸ್ಪರ್ಧೆಯಲ್ಲಿ ವಿಜೇತರಿಗೆ ಪ್ರಥಮ ಬಹುಮಾನ 4,000 ರೂ., ದ್ವಿತೀಯ ಬಹುಮಾನ 3,000 ರೂ., ತೃತೀಯ ಬಹುಮಾನ 2,000 ರೂ., ನಾಲ್ಕನೇ ಬಹುಮಾನ ರೂ. 1,000 ರೂ. ಹಾಗೂ "ಐದನೇ ಬಹುಮಾನ 500 ರೂ. ವಿತರಿಸಲಿದ್ದಾರೆ. ಸ್ಪರ್ಧೆಯು ಡಿ.15ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 7 ಗಂಟೆವರೆಗೆ ನಡೆಯಲಿದ್ದು, ಭಾಗವಹಿಸುವ ಸ್ಪರ್ಧಿಗಳು ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಬಂದು ನೇರವಾಗಿ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ 8105078070 ಸಂಪರ್ಕಿಸಬಹುದು.

ಮೈಸೂರು ವಿವಿ ಸಂಶೋಧಕರ ಸಂಘದಿಂದ ಕನ್ನಡ ರಾಜ್ಯೋತ್ಸವ

ಕನ್ನಡ ಗೀತೆಗಳಿಗೆ ಕುಣಿದು ಕುಪ್ಪಳಿಸಿದ ವಿದ್ಯಾರ್ಥಿಗಳು



ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ಕ್ಲಾಕ್ ಟವರ್ ಬಳಿ ಮೈಸೂರು ವಿ.ವಿ ಸಂಶೋಧಕರ ಸಂಘದ ವತಿಯಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಮೈಸೂರು, ಡಿ.7(ಜಿಎ)–ರಾಜ್ಯಾದ್ಯಂತ ಕನ್ನಡ ರಾಜ್ಯೋತ್ಸವ ಆಚರಿಸುತ್ತಿದ್ದು, ಈ ಮೂಲಕ ಕನ್ನಡ ಕಂಪು ಎಲ್ಲೆಡೆ ಪಸರಿಸಿದೆ. ಈ ದಿನ ನಮ್ಮ ಮಾನಸಗಂಗೋತ್ರಿಯಲ್ಲಿ ಕನ್ನಡ ಕಂಪು ಮೊಳಗಿದೆ ಎಂದು ವಕೀಲ ಹಾಗೂ ಕರ್ನಾಟಕ ಪ್ರಜಾ ಪಾರ್ಟಿಯ ರಾಜ್ಯಾಧ್ಯಕ್ಷ ಶಿವಣ್ಣ ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ಕ್ಲಾಕ್ ಟವರ್ ಬಳಿ ಮೈ.ವಿ.ವಿ ಸಂಶೋಧಕರ ಸಂಘದ ವತಿಯಿಂದ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವವನ್ನು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ರಾಜ್ಯೋತ್ಸವ ಆಚರಿಸುವ ಮೂಲಕ ಕನ್ನಡಾಂಬೆಗೆ ಗೌರವ ಸಲ್ಲಿಸುವುದು ಮಾತ್ರವಲ್ಲ, ಕನ್ನಡದ ಭಾಷಾಭಿಮಾನವನ್ನು ಮೆರೆಯಬೇಕು. ಇತರೆ ಭಾಷೆಗಳನ್ನು ಗೌರವಿಸಿ ನಮ್ಮ ಭಾಷೆಯನ್ನು ಪ್ರೀತಿಸಿ, ಪ್ರೋತ್ಸಾಹಿಸಬೇಕು ಎಂದರು.

ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಪ್ರೊ. ಗುರುಸಿದ್ದಯ್ಯ ಮಾತನಾಡಿ, ಜಾಗತೀಕರಣದ ಇಂದಿನ ದಿನಗಳಲ್ಲಿ ಕನ್ನಡ ಭಾಷೆಯನ್ನು ಎಲ್ಲರೂ ಅಭಿವೃದ್ಧಿಪಡಿಸಬೇಕಾಗಿದೆ ಕನ್ನಡ ಭಾಷೆ, ಸಂಸ್ಕೃತಿ, ಕಲೆ ಹಾಗೂ ಸಾಹಿತ್ಯ ಅಭಿವೃದ್ಧಿಪಡಿಸಲು ಪ್ರತಿಯೊಬ್ಬರು ಸಹಕಾರ ನೀಡಬೇಕು. ಕನ್ನಡ ಭಾಷೆಗೆ ತನ್ನದೇ ಆದ ಪ್ರಾಮುಖ್ಯತೆ, ಐತಿಹಾಸಿಕ ಹಿನ್ನೆಲೆ ಇದೆ. ಕನ್ನಡ ಭಾಷೆ ಸರಳ, ಸಹಜ, ಇಂಪು ಎಂದರು.

ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗದ ವಿದ್ಯಾರ್ಥಿಗಳಿಂದ ಕನ್ನಡದ ಕಂಪು ಬೀರುವ ಕನ್ನಡ ಚಲನಚಿತ್ರಗೀತೆಗಳಿಗೆ ನೃತ್ಯ ಪ್ರದರ್ಶನ ಯಶಸ್ವಿಯಾಗಿ ಮೂಡಿಬಂತು. ನೆರೆದಿದ್ದ ವಿದ್ಯಾರ್ಥಿಗಳು ಕನ್ನಡ ಗೀತೆಗಳಿಗೆ ಕುಣಿದು ಕುಪ್ಪಳಿಸಿದರು. ಈ ವೇಳೆ ಸಿಂಡಿಕೇಟ್ ಸದಸ್ಯ ನಟರಾಜ್, ಶಿವಣ್ಣ, ನಾಗರಾಜು, ಸಂಶೋಧಕರ ಸಂಘದ ಅಧ್ಯಕ್ಷ ಶಿವಶಂಕರ್, ಕಾರ್ಯಕ್ರಮ ಸಂಯೋಜಕ ಅಭಿಷೇಕ್ ಪಾಳ್ಯಗಾರ್, ರಾಜೇಶ್ ಚಾಕನಹಳ್ಳಿ, ಜಯರಾಜ್, ದಲಿತ ವಿದ್ಯಾರ್ಥಿ ಒಕ್ಕೂಟದ ಪುನೀತ್ ಆಲನಹಳ್ಳಿ ಉಪಸ್ಥಿತರಿದ್ದರು.

ಡಿ.15ರಂದು ಪಂಚ ಮಹಾಶಕ್ತಿ ಪೂಜೆ

ಮೈಸೂರು, ಡಿ.7– ಫ್ಯೂಷನ್ ರಾಗಾಸ್ ಮ್ಯೂಸಿಕ್ ಅಂಡ್ ಸ್ಪಿರಿಚ್ಯುಯಲ್ ಅಸೋಸಿಯೇಷನ್ ವತಿಯಿಂದ ಡಿ. 15 ರಂದು ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಬಹು ವಿಶೇಷವಾದ ಪಂಚ ಮಹಾಶಕ್ತಿ ಪೂಜೆಯನ್ನು ಧನುರ್ ಮಾಸದಲ್ಲಿ ಅತ್ಯಂತ ವಿಜೃಂಭಣೆಯಿಂದ ಆಯೋಜಿಸಲಾಗಿದೆ.

ದೇವಿಯ ಐದು ಸ್ವರೂಪಗಳಾದ – ಚಾಮುಂಡೇಶ್ವರೀ, ಲಲಿತಾ ಪರಮೇಶ್ವರೀ, ಮಹಾಲಕ್ಷ್ಮೀ, ಮಹಾಸರಸ್ವತೀ ಹಾಗೂ ಕನ್ಯಕಾಪರಮೇಶ್ವರಿಗೆ ವಿಶೇಷ ಆರಾಧನೆ ಹಾಗೂ ಪೂಜೆಗಳ ದೈವಿಕ ಕೈಂಕರ್ಯ, ಮಂಗಳದ್ರವ್ಯ ಪೂಜೆ, ಶ್ವೇತ ಪುಷ್ಪ ಪೂಜೆ, ಕಮಲಮಣಿ ಪೂಜೆ, ಬಹು ಅಪರೂಪದ ಪುಷ್ಪ ಯಾಗ, ಪುರೋಹಿತರಿಂದ ವೇದ ಮಂತ್ರಗಳ ಪಠಣ, ಸಾಮೂಹಿಕವಾಗಿ ಸ್ತೋತ್ರಗಳ ಪಠಣ, ಲಲಿತಾ ಸಹಸ್ರನಾಮ ರಾಗಮಾಲಿಕೆಯ ಗಾಯನದಲ್ಲಿ ಮಂಗಳದ್ರವ್ಯ ಸಮರ್ಪಣೆ ಈ ಪೂಜೆಯ ವಿಶೇಷತೆ.

ಕಣ್ಣಿನ ಉಚಿತ ತಪಾಸಣಾ ಶಿಬಿರ

ಮೈಸೂರು, ಡಿ. 7– ಕೊಯಮತ್ತೂರು ಅರವಿಂದ ಕಣ್ಣಿನ ಆಸ್ಪತ್ರೆ ಮತ್ತು ಸ್ನೇಹ ವೃಂದ ಮೈಕ್ ಪ್ರಕಾಶ್ ಅಭಿಮಾನಿಗಳ ಸಹಯೋಗದೊಂದಿಗೆ ಡಿ.15ರಂದು ಬೆಳಗ್ಗೆ 8.30ರಿಂದ ಮಧ್ಯಾಹ್ನ 1.30ರವರೆಗೆ ಟೀಚರ್ಸ್ ಬಡಾವಣೆಯಲ್ಲಿರುವ ಮೌಲಾನ ಆಜಾದ್ ಸ್ಕೂಲ್ ಆವರಣದಲ್ಲಿ ಕಣ್ಣಿನ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9448270641 ಸಂಪರ್ಕಿಸಬಹುದು.

ಬಾಂಧವ್ಯದಲ್ಲಿ ಕ್ರೀಡಾ ಸಾಧನೆ ಮೆರೆದ ಭಿನ್ನ ಸಾಮರ್ಥ್ಯದ ಮಕ್ಕಳು

ಹೈಜಂಪ್, ಲಾಂಗ್‌ಜಂಪ್, ರನ್ನಿಂಗ್ ರೇಸ್‌ನಲ್ಲಿ ಪಾಲ್ಗೊಂಡ 500ಕ್ಕೂ ಹೆಚ್ಚು ಮಕ್ಕಳು



ಮೈಸೂರಿನ ಓವಲ್ ಮೈದಾನದಲ್ಲಿ ಭಿನ್ನ ಸಾಮರ್ಥ್ಯದ ಮಕ್ಕಳಿಗಾಗಿ ಆಯೋಜಿಸಿದ್ದ ಬಾಂಧವ್ಯ ಕ್ರೀಡಾ ಮಹೋತ್ಸವದಲ್ಲಿ ರಾಷ್ಟ್ರೀಯ ಪ್ಯಾರಾ ಒಲಂಪಿಕ್ ಕ್ರೀಡಾಪಟುಗಳಾದ ಹೇಮಂತ್, ಪೂರ್ಣರಾವ್, ಪಲ್ಲವಿ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಡಿ.7(ಜಿಎ)–ಕ್ರೀಡೆಯಲ್ಲಿ ನಾವು ಯಾರಿಗೂ ಕಮ್ಮಿ ಇಲ್ಲ ಎಂದು ಭಿನ್ನ ಸಾಮರ್ಥ್ಯದ ಮಕ್ಕಳು ಕ್ರೀಡಾಕೂಟದಲ್ಲಿ ಭಾಗವಹಿಸಿ, ತಮ್ಮ ಕ್ರೀಡಾ ಪ್ರತಿಭೆ ಸಾಬೀತುಪಡಿಸಿದರು.

ರೋಟರಿ ಮೈಸೂರು ಮಿಡ್–ಟೌನ್ ವತಿಯಿಂದ ನಗರದ ಓವಲ್ ಮೈದಾನದಲ್ಲಿ ಶನಿವಾರ ಭಿನ್ನ ಸಾಮರ್ಥ್ಯದ ಮಕ್ಕಳಿಗಾಗಿ ಆಯೋಜಿಸಿದ್ದ ಬಾಂಧವ್ಯ ಕ್ರೀಡಾ ಮಹೋತ್ಸವದಲ್ಲಿ ನಾನಾ ಶಾಲೆಗಳಿಂದ ಆಗಮಿಸಿದ್ದ ಮಕ್ಕಳು ಹೈಜಂಪ್, ಲಾಂಗ್ ಜಂಪ್, ರನ್ನಿಂಗ್ ಇತರೆ ಕ್ರೀಡೆಗಳಲ್ಲಿ ಭಾಗವಹಿಸಿ ಕ್ರೀಡಾ ಸ್ಫೂರ್ತಿ ಮೆರೆದರು.

ಸುತ್ತೂರು ಮಠದ ಪೀಠಾಧಿಪತಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹಾಗೂ ಎನ್.ರಂಗರಾವ್ ಅಂಡ್ ಸನ್ಸ್ ಪ್ರೈವೇಟ್ ಲಿಮಿಟೆಡ್‌ನ ಸಿಇಒ ಅರ್ಜುನ್ ರಂಗ ಇತರೆ ಗಣ್ಯರು ಬಲೂನು ಹಾರಿ ಬಿಡುವ ಮೂಲಕ ಕ್ರೀಡಾಕೂಟಕ್ಕೆ ಚಾಲನೆ ನೀಡಿ, ನಂತರ ಭಿನ್ನ ಸಾಮರ್ಥ್ಯದ ಮಕ್ಕಳಿಂದ ಗೌರವವಂದನೆ ಸ್ವೀಕರಿಸಿದರು.

ನಂತರ ಉದ್ಯಮಿ ಅರ್ಜುನ್ ರಂಗ ಅವರು ಮಾತನಾಡಿ, ಪೋಷಕರು ಹಾಗೂ ವಿಶೇಷ ಮಕ್ಕಳ ಶಾಲೆಯ ಶಿಕ್ಷಕರು, ವಿಶೇಷ ಚೇತನರ ಕ್ರೀಡೆಯಲ್ಲಿ ವಿಶೇಷಚೇತನ ಮಕ್ಕಳು ಭಾಗವಹಿಸಲು ಬಹಳಷ್ಟು ಶ್ರಮ ಪಡುತ್ತಿದ್ದಾರೆ. ಮಕ್ಕಳನ್ನು ನಿರ್ಲಕ್ಷ್ಯದಿಂದ ನೋಡದೇ ಅವರ ಪ್ರತಿಭೆಯನ್ನು ಗುರುತಿಸಿದರೆ ಅವರು ಬೆಳೆಯುತ್ತಾರೆ. ಭಾರತವು ಮುಂದಿನ 20 ವರ್ಷದಲ್ಲಿ ಎಲ್ಲ ಕ್ಷೇತ್ರದಲ್ಲಿಯೂ ಬದಲಾವಣೆಯಾಗಲಿದೆ. ನಾವು ಬದಲಾವಣೆಗೆ ಹೊಂದಿಕೊಂಡು ಜೀವನ ರೂಪಿಸಿಕೊಳ್ಳುವ ಮಾರ್ಗವನ್ನು ಕಂಡುಕೊಳ್ಳಬೇಕು. ಜೀವನದಲ್ಲಿ ಗುರಿ ಹಾಗೂ ಆತ್ಮವಿಶ್ವಾಸದಿಂದ ಮುನ್ನಡೆಯುವುದನ್ನು ಕಲಿಯಬೇಕು ಎಂದು ಸಲಹೆ ನೀಡಿದರು.

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಮಾತನಾಡಿ, ಸೋಲು–ಗೆಲುವು ಸಹಜ, ಆದರೆ, ಕ್ರೀಡೆಯಲ್ಲಿ ದ್ವೇಷ ಇರಬಾರದು. ಕ್ರೀಡೆ ಮನುಷ್ಯರ ಭಾವನೆಗಳನ್ನು ಒಂದು ಮಾಡುವ ಶಕ್ತಿ ಹೊಂದಿದ್ದು, ಕ್ರೀಡೆಯಲ್ಲಿ ಪಾಲ್ಗೊಳ್ಳುವುದೇ ವಿಶೇಷವಾಗಿದೆ ಎಂದು ತಿಳಿಸಿದರು.

ಯಾವುದೇ ಮಕ್ಕಳಿಗೆ ಬಾಲ್ಯದಿಂದಲೇ ಜೀವನದ ಮೌಲ್ಯ ಹಾಗೂ ಶಿಸ್ತನ್ನು ತಿಳಿಸಿಕೊಡಬೇಕು.ಆಗ ಮಕ್ಕಳು ಸಮಾಜದಲ್ಲಿ ನಡೆಯುತ್ತಿರುವ ಘಟನೆಗಳನ್ನು ತಿಳಿದುಕೊಂಡು ಅವರು ಕೂಡ ಬದಲಾವಣೆಯ ಮಾರ್ಗದಲ್ಲಿ ನಡೆಯುತ್ತಾರೆ. ರೋಟರಿ ಮೈಸೂರು ಮಿಡ್–ಟೌನ್ ಅವರು ವಿಶೇಷ ಚೇತನ ಮಕ್ಕಳಿಗಾಗಿ ಪ್ರತಿವರ್ಷ ಕ್ರೀಡಾಕೂಟವನ್ನು ಆಯೋಜನೆ ಮಾಡಿಕೊಂಡು ಬರುತ್ತಿರುವುದು ಶ್ಲಾಘನೀಯ ಎಂದರು.

ಕ್ರೀಡಾಕೂಟದಲ್ಲಿ 18 ಶಾಲೆಗಳಿಂದ 500ಕ್ಕೂ ಹೆಚ್ಚು ಮಕ್ಕಳು ಪಾಲ್ಗೊಂಡಿದ್ದರು. ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಪ್ಯಾರಾಒಲಂಪಿಕ್ ಕ್ರೀಡಾಪಟುಗಳಾದ ಹೇಮಂತ್, ಪೂರ್ಣರಾವ್, ಪಲ್ಲವಿ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ರೋಟರಿ ಮೈಸೂರು ಮಿಡ್–ಟೌನ್ ಅಧ್ಯಕ್ಷ ಎಸ್.ಕುಮಾರಸ್ವಾಮಿ, ಕಾರ್ಯದರ್ಶಿ ಎಲಿಜರ್ ಮಿಲ್ಟನ್, ವಲಯ –7ರ ಸಹಾಯಕ ಗವರ್ನರ್ ಡಾ.ಕೆ.ಎ.ಪ್ರಹ್ಲಾದ್, ಬಾಂಧವ್ಯ ಚೇರ್‌ಮನ್ ಆರ್.ವೆಂಕಟೇಶ್, ಉಪ ಚೇರ್‌ಮನ್ ಆರ್.ರವೀಂದ್ರ ಬಾಬು, ಸಮುದಾಯ ಸೇವೆ ನಿರ್ದೇಶಕ ಆರ್.ನಾಗರಾಜ್, ಇನ್ನರ್ ವ್ಹೀಲ್ ಅಶ್ವಿನಿ ರಾಘವೇಂದ್ರ, ಕಾರ್ಯದರ್ಶಿ ರೇವತಿ ಬಳಿಗ, ಸಂಚಾಲಕ ಅಯ್ಯಣ್ಣ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ನಾ ನಿನ್ನ ಬಿಡಲಾರೆ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಭೈರತಿ ರಣಗಲ್(ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪುಷ್ಪಾ–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಬಘೀರ (ಕ)	4 ಪ್ರದರ್ಶನಗಳು
ಸಂಗಂ	
ಪುಷ್ಪಾ–2 (ತೆ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಜೀಬ್ರಾ (ಕ)	4 ಪ್ರದರ್ಶನಗಳು
ಪ್ರಭಾ	
ಬಘೀರಾ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	**ಪುಷ್ಪಾ 2 (ಕ):** ಬೆ.9.45ಕ್ಕೆ, ಮ.1.45ಕ್ಕೆ, **ಪುಷ್ಪಾ 2 (ಹಿಂ):** ಸಂ.5.50ಕ್ಕೆ, **ಪುಷ್ಪಾ 2 (ತೆ):** ರಾ.9.50ಕ್ಕೆ.
ಸ್ಕ್ರೀನ್ 2	**ಮೋನಾ 2 (3ಡಿ)(ಇಂ):** ಬೆ.11ಕ್ಕೆ, ಮ.3.45ಕ್ಕೆ, ಸಂ.6ಕ್ಕೆ, **ಸೋಲೋ ಲೀವಿಂಗ್ ರಿವಾಕ್ (ಜ):** ಮ.1.10ಕ್ಕೆ, **ಪುಷ್ಪಾ 2 (ತೆ):** ರಾ.8.10ಕ್ಕೆ.
ಸ್ಕ್ರೀನ್ 3	**ದಿ ಸಬರ್‌ಮತಿ ರಿಪೋರ್ಟ್ (ಹಿಂ):** ಬೆ.10.25ಕ್ಕೆ, **ಭೈರತಿ ರಣಗಲ್ (ಕ):** ಮ.1.05ಕ್ಕೆ, **ಹರಿದಾಸರ ದಿನಚರಿ (ಕ):** ಸಂ.4ಕ್ಕೆ, **ಪುಷ್ಪಾ 2 (ಕ):** ಸಂ.6.15ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	**ಪುಷ್ಪಾ 2 (ತೆ):** ಬೆ.10.10ಕ್ಕೆ, ಮ.2.10ಕ್ಕೆ, ಸಂ.6.05ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	**ಬ್ಯಾಡ್ ನ್ಯೂಸ್ (ಹಿಂ):** ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	**ಕಲ್ಕಿ 2898 ಎಡಿ (ಕ):** ಬೆ.11.40ಕ್ಕೆ, ಸಂ.6.05ಕ್ಕೆ, **ಟ್ವಿಸ್ಟರ್ಸ್ (ಇಂ):** ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	**ಇಂಡಿಯನ್ 2 (ತ):** ಬೆ.9.40ಕ್ಕೆ, ಸಂ.4.05ಕ್ಕೆ, **ಟ್ವಿಸ್ಟರ್ಸ್ (ಇಂ):** ಮ.1.20ಕ್ಕೆ, ರಾ.7.45ಕ್ಕೆ, **ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ):** ರಾ.10.30ಕ್ಕೆ.
ಸ್ಕ್ರೀನ್ 4	**ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ):** ಬೆ.11.30ಕ್ಕೆ, **ಕಲ್ಕಿ 2898 ಎಡಿ (3ಡಿ)(ತೆ):** ಮ.2.50ಕ್ಕೆ, **ಹಿರಣ್ಯ (ಕ):** ಸಂ.6.30ಕ್ಕೆ, **ಕಲ್ಕಿ 2898 ಎಡಿ (ಹಿಂ):** ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	**ಅಮರನ್ (ಕ):** ಬೆ.10.30ಕ್ಕೆ, ರಾ.7.30ಕ್ಕೆ, **ಭೈರತಿ ರಣಗಲ್ (ಕ):** ಮ.1.45ಕ್ಕೆ, **ಧೀರ ಭಗತ್ ರಾಯ್ (ಕ):** ಸಂ.4.30ಕ್ಕೆ.
ಸ್ಕ್ರೀನ್ 2	**ಭೈರತಿ ರಣಗಲ್ (ಕ):** ಬೆ.10.40ಕ್ಕೆ, **ಪುಷ್ಪಾ 2 (ಕ):** ಮ.1.15ಕ್ಕೆ, ಸಂ.5.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	**ಪುಷ್ಪಾ 2 (ಕ):** ಬೆ.11.30ಕ್ಕೆ, ರಾ.7.45ಕ್ಕೆ, **ಪುಷ್ಪಾ 2 (ತೆ):** ಸಂ.4ಕ್ಕೆ.
ಸ್ಕ್ರೀನ್ 4	**ಪುಷ್ಪಾ 2 (ತೆ):** ಬೆ.10.30ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, **ಪುಷ್ಪಾ 2 (ಕ):** ಮ.2.15ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, **ಶ್ರೀಕಾಂತ್ (ಹಿಂ):** ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, **ಸ್ಟಾರ್ (ತ):** ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, **ಅರಮನೈ 4 (ತ):** ಮ.12.30ಕ್ಕೆ, **ಪ್ರತಿನಿಧಿ 2 (ತೆ):** ಮ.12.55ಕ್ಕೆ, ರಾ.9.15ಕ್ಕೆ, **ರಾಮನ ಅವತಾರ (ಕ):** ಮ.3.40ಕ್ಕೆ, **ಅಂಜನೀಪುತ್ರ (ಕ):** ಸಂ.4ಕ್ಕೆ, **ಗ್ರೇ ಗೇಮ್ಸ್ (ಕ):** ಸಂ.6.35ಕ್ಕೆ, **ಕೃಷ್ಣಮ್ಮ (ತೆ):** ರಾ.7.25ಕ್ಕೆ, **ಮಾರಿವಿಲ್ಲಿನ್ ಗೋಪುರಂಗಲ್ (ಮ):** ರಾ.10ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ನಾರಾಯಣ ಆಸ್ಪತ್ರೆಯಿಂದ ವೃಷಣ ಸಮಸ್ಯೆಗೆ ಯಶಸ್ವಿ ಶಸ್ತ್ರಚಿಕಿತ್ಸೆ

ವೆರಿಕೋಸಿಲ್ ಎಂಬೋಲೈಸೇಷನ್ ವಿಧಾನ ಬಳಕೆ

ಮೈಸೂರು, ಡಿ.7(ಜಿಎ)–ವೆರಿಕೋಸಿಲ್ ಎಂಬೋಲೈಸೇಷನ್ ಚಿಕಿತ್ಸೆ ಮೂಲಕ ವೃಷಣ ಸಮಸ್ಯೆಯಿಂದ ಬಳಲುತ್ತಿದ್ದ 25 ವರ್ಷದ ಯುವಕನಿಗೆ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ಮಾಡಲಾಗಿದೆ ಎಂದು ನಾರಾಯಣ ಆಸ್ಪತ್ರೆಯ ಚಿಕಿತ್ಸಾ ನಿರ್ದೇಶಕರಾದ ಡಾ.ಎಂ.ಎನ್. ರವಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವೃಷಣ ಭಾಗಕ್ಕೆ ಬಂದ ರಕ್ತ ಪುನಃ ಹೃದಯಕ್ಕೆ ಸಾಗದೇ ಅಲ್ಲೇ ಉಳಿದ ಕಾರಣ ತೀವ್ರ ಬಿಸಿ ಹಾಗೂ ಇನ್ನಿತರ ಸಮಸ್ಯೆಯಿಂದ ಬಳಲುತ್ತಿದ್ದ ಸುಮಾರು 25 ವರ್ಷ ವಯಸ್ಸಿನ ಯುವಕ ಆಸ್ಪತ್ರೆಗೆ ಬಂದಾಗ ವಿವಿಧ ತಪಾಸಣೆ ಮಾಡಿದ ನಂತರ ರೋಗಿಯು ಗ್ರೇಡ್ 3 ವೆರಿಕೋಸಿಲ್ ಕಾಯಿಲೆಯಿಂದ ಬಳಲುತ್ತಿರುವುದಾಗಿ ಗುರುತಿಸಲಾಯಿತು ಎಂದರು.

ಸಾಧಾರಣವಾಗಿ ಇಂತಹ ಸಮಸ್ಯೆ ಕಂಡುಬಂದಾಗ ಶಸ್ತ್ರಚಿಕಿತ್ಸೆ ಅನಿವಾರ್ಯ. ಆದರೆ ರೋಗಿಗೆ ಇದರ ಬಗ್ಗೆ ಆತಂಕವಿದ್ದ ಕಾರಣ ವೈದ್ಯರು ಚರ್ಚಿಸಿ, ವೆರಿಕೋಸಿಲ್ ಎಂಬೋಲೈಸೇಷನ್ ನೂತನ ವಿಧಾನ ಬಳಸಲಾಗಿದೆ. ಈ ರೀತಿಯ ಸಮಸ್ಯೆ ಶೇ.50 ರಷ್ಟು ಮಂದಿಯಲ್ಲಿ ಸಾಮಾನ್ಯ. ಚಿಕಿತ್ಸೆ ಪಡೆಯದೇ ಹೋದಲ್ಲಿ ವೀರ್ಯದ ಗುಣಮಟ್ಟ ಕಡಿಮೆ ಆಗುತ್ತದೆ. ಇದರಿಂದಾಗಿ ಪುರುಷರಲ್ಲಿ ಬಂಜೆತನ ಸಮಸ್ಯೆಯುಂಟಾಗುತ್ತದೆ. ಅಸ್ವಸ್ಥತೆ, ಊತಗಳು ಕಾಣಿಸಿಕೊಳ್ಳಬಹುದಾಗಿದೆ. ಹೀಗಾಗಿ ಶಸ್ತ್ರಚಿಕಿತ್ಸೆ ನಡೆಸದೇ ಈ ವಿಧಾನದ ಮೂಲಕ ವೃಷಣದಿಂದ ರಕ್ತ ಮತ್ತೆ ಹೃದಯಕ್ಕೆ ಹೋಗುವ ರೀತಿ ಮಾಡಲಾಗುತ್ತದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಚಿಕಿತ್ಸೆ ನೀಡಿದ ವೈದ್ಯರಾದ ಡಾ.ಎಸ್. ನಿತೇಶ್ ಹಾಗೂ ಡಾ.ಶೈಲೇಶ್ ಪೇಣೆ ಉಪಸ್ಥಿತರಿದ್ದರು.

ಬಯಲು ಶೌಚಕ್ಕೆ 200 ರೂ. ದಂಡ


ಮೈಸೂರು, ಡಿ.7– ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಎಲ್ಲಾ 1 ರಿಂದ 19 ವಾರ್ಡ್‌ಗಳಲ್ಲಿರುವ ವಾಸದ ಮನೆ, ವಾಣಿಜ್ಯ ಕಟ್ಟಡ, ಶಾಲಾ–ಕಾಲೇಜುಗಳು ಶೌಚಾಲಯಗಳನ್ನು ಹೊಂದಿದ್ದು, ಪಟ್ಟಣದಲ್ಲಿ ಸಾರ್ವಜನಿಕ ಹಾಗೂ ಸಮುದಾಯ ಶೌಚಾಲಯಗಳು ಕಾರ್ಯ ನಿರ್ವಹಿಸುತ್ತಿವೆ. ಹಾಗಾಗಿ ಯಾರೂ ಬಯಲು ಶೌಚ ಮಾಡಬಾರದು, ಮಾಡಿದರೆ ಪಟ್ಟಣ ಪಂಚಾಯಿತಿ ವತಿಯಿಂದ ರೂ. 200 ದಂಡ ವಿಧಿಸಲಾಗುವುದು. ಪಟ್ಟಣವನ್ನು ಬಯಲು ಶೌಚ ಮುಕ್ತ ಪಟ್ಟಣವೆಂದು ಘೋಷಿಸಲು ಸಾರ್ವಜನಿಕರು 15 ದಿವಸದೊಳಗೆ ಕಚೇರಿಗೆ ಅಭಿಪ್ರಾಯ ಸಲ್ಲಿಸಬೇಕು ಎಂದು ರಮನಹಳ್ಳಿ ಪಟ್ಟಣ ಪಂಚಾಯಿತಿಯ ಮುಖ್ಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಂ.ಎಸ್. ಪಲ್ಲವಿಗೆ ಪಿಹೆಚ್.ಡಿ ಪದವಿ



ಮೈಸೂರು, ಡಿ.7– ಪಲ್ಲವಿ ಎಂ.ಎಸ್ ಅವರು ಗಣಕ ವಿಜ್ಞಾನದಲ್ಲಿ ಸಲ್ಲಿಸಿದ ಮಹಾಪ್ರಬಂಧಕ್ಕೆ ಅಮೃತ ವಿಶ್ವವಿದ್ಯಾಪೀಠಂ, ಮೈಸೂರು ಕ್ಯಾಂಪಸ್ ಪಿಹೆಚ್.ಡಿ ಪದವಿ ನೀಡಿದೆ. ಈ ಮಹಾಪ್ರಬಂಧವನ್ನು ಡಾ. ನಿಧೀಶ್ ಎಂ ಅವರ ಮಾರ್ಗದರ್ಶನದಲ್ಲಿ ಸಾದರಪಡಿಸಿದ್ದಾರೆ.

ಕೈಲಾಸ ಶಿವಗಣಾರಾಧನ ಆಹ್ವಾನ ಪತ್ರಿಕೆ




ಶ್ರೀ ಶಿವಕುಮಾರಸ್ವಾಮಿ ರವರು

ಇವರು ದಿನಾಂಕ 29.11.2024 ಶುಕ್ರವಾರ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಬಂಧ ದಿನಾಂಕ 09/12/2024 ಸೋಮವಾರ ಬೆಳಗ್ಗೆ 10ಕ್ಕೆ ಸುಕ್ಷೇತ್ರ ಮಲ್ಲನಮೂಲೆ ಮಠಾಧ್ಯಕ್ಷರಾದ ಶ್ರೀ।। ನಿ।। ಪ್ರ।। ಸ್ವ।। ಶ್ರೀ ಚನ್ನಬಸವಸ್ವಾಮಿಗಳವರ ದಿವ್ಯಪಾದಪೂಜೆಯನ್ನು ಹಾಗೂ 12 ಗಂಟೆಗೆ ಕೈಲಾಸ ಶಿವಗಣಾರಾಧನೆಯನ್ನು ಚಾಮರಾಜನಗರ ತಾ।। ಕಮರವಾಡಿ ಗ್ರಾಮದ ನಮ್ಮ ಸ್ವಗೃಹದಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಲಿಂಗೈಕರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಶ್ರೀಮತಿ ಪಾರ್ವತಾಂಬೆ ಮತ್ತು ಕುಟುಂಬ ವರ್ಗದವರು, ಕಮರವಾಡಿ, ಚಾಮರಾಜನಗರ ತಾ।। ಮತ್ತು ಜಿಲ್ಲೆ

5ನೇ ವರ್ಷದ ಸವಿನೆನಪು



ಜನನ: 1947 ಮರಣ: 8–12–2019

ಶ್ರೀ ಎನ್.ಬಸವರಾಜುರವರು

ಹಣ್ಣು ತರಕಾರಿ ಅಂಗಡಿ,
ಆರ್‌ಬಿಐ ಶಾಪಿಂಗ್ ಕಾಂಪ್ಲೆಕ್ಸ್

ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ನಿಮ್ಮ ನೆನಪು ಹಚ್ಚ ಹಸಿರಾಗಿದೆ.

ಸದಾ ನಿಮ್ಮ ನೆನಪಿನಲ್ಲಿರುವ
ಪತ್ನಿ-ಶ್ರೀಮತಿ ದೇವಮ್ಮ, ಮಕ್ಕಳು, ಸೊಸೆಯಂದಿರು ಅಳಿಯ ಹಾಗೂ ಮೊಮ್ಮಕ್ಕಳು. ಕೆ.ಆರ್.ಮಿಲ್ ಕಾಲೋನಿ

Biggest Handloom & handicraft Expo

ಇಂಡಿಯನ್ ದಸ್ತಕಾರ್ ಹ್ಯಾಂಡ್ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಹಾಟ್

Indian Dastkaar Handloom & Handicraft Haat

Recognized by - Government of India, Ministry of Textiles, Office of the Development Commissioner (Handicrafts)

Exhibition & Sale
of indigenous handlooms and handicrafts from across the country

09-Nov'24 to 05-Jan'25

Scouts & Guides Ground
Behind Old DC Office, Mysuru

SAREES | DRESSES | TOPS | SHAWLS | JEWELLERY | FOOTWEAR | FASHION ACCESSORIES | HOME FURNISHINGS
BEDSHEETS | CARPETS | FURNITURE | METAL & BRASS HOME DECOR | CROCKERY & MUCH MORE..

!! LIVE !! MAKING OF CHANPATNA TOYS on 07 & 08 Dec'24

150+ Shopping stalls | 70000+ Varieties on display
Festive discounts & offers | Artisian from across India

FOR DETAILS: 98865 07007 | ENTRY FREE | FREE PARKING

Thomas Cook

From Europe's timeless charm to Japan's cherry blossom

Experience the world in full bloom with Thomas Cook



17 D - European Extravaganza
England, France, Belgium, Netherlands, Germany, Switzerland, Austria, Italy & Vatican City

15 D - Enchanting East Europe With Balkans
Germany, Czech Republic, Poland, Austria, Slovakia, Hungary, Croatia & Slovenia

6 D - Mysore Special DSF
Dubai & Abu Dhabi

14 D - Scenic Scandinavia With Iceland
Finland, Estonia, Sweden, Norway, Denmark & Iceland

9 D - Japan Cherry Blossom Special
Tokyo, Hakone, Nagoya & Osaka

13 D - Japan Cherry Blossom Special With Korea
Tokyo, Hakone, Nagoya, Osaka & Seoul

Inclusions: Flights, Hotels, Meals, Visa Fees, Insurance, Sightseeing & Services of our Tour Manager.

Meet our holiday experts on:

Date: 08th December 2024 | Time: 10:00 am to 6:00 pm

VENUE: ROOPA ELITE
No. D-29, 6th Main Rd, VV Mohalla
Next Loyal World, Mysore - 570001

THOMAS COOK STORE
Shop No 5, Hari Plaza, Dewans Road,
Next India Sweet House, Mysore - 570001

9619473026

WE ARE HIRING

Desktop Support Engineer
Having min 1-2 yrs of experience.

Roles & Responsibility:
Respond & resolve user reported IT issues via phone call, email or in person. Troubleshoot & diagnose hardware & software problems on desktop, laptop, printer & mobile devices.
Assist in user training & orientation on IT systems & tools.

Qualification :
BCA, MCA, BE (CSE) & Other.

Location - Mysore
Contact No: 9606969261

ಮಾರುತಿ ಸರ್ವೀಸ್ ಪಾಯಿಂಟ್ ಕಾರ್ ಗ್ಯಾರೇಜ್‌ನಲ್ಲಿ

ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
ವಾಟರ್ ವಾಷ್ ಮತ್ತು ಹೆಲ್ಪರ್ ಕೆಲಸಕ್ಕೆ.
ಶ್ರೀರಾಂಪುರ, ಮೈಸೂರು
Mob: 9448804347

ಹೊಸ ಮನೆ ಮಾರಾಟಕ್ಕಿದೆ

3BHK 30x40
Built up Area 1500 SF
ಮುಡಾ ಅಪ್ರೂವ್
ಸೆಂಟ್ ಜೋಸೆಫ್ ಶಾಲೆಯ ಹತ್ತಿರ ಹುಯಿಲಾಳು, ಮೈಸೂರು
8217851695

ಜಮೀನು ಮಾರಾಟಕ್ಕಿದೆ

ಮೈಸೂರು ತಾ. ಜಯಪುರ ಹೋ. ಹಾರೋಹಳ್ಳಿಯಲ್ಲಿ 12 ಗುಂಟೆ, ಮದ್ದೂರಿನಲ್ಲಿ 25 ಗುಂಟೆ, ಮದ್ದೂರುಹುಂಡಿಯಲ್ಲಿ 32 ಗುಂಟೆ ಮತ್ತು ಮದ್ದೂರಲ್ಲಿ 29 ಗುಂಟೆ, ಗೋಪಾಲಪುರದಲ್ಲಿ 25 ಗುಂಟೆ, ದೂರ ಗ್ರಾಮದಲ್ಲಿ 19 ಗುಂಟೆ ಹಾಗೂ 1 ಎಕರೆ, 4 ಗುಂಟೆ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ:
9945661696 / 9663793666

DOORS-N-DOORS

Urea-Free-Eco Friendly
P.F. Bonded (Water Proof)
H.M.R. H.D HMR Grade-
Premium Quality, Unlimited Choices. Direct Factory Sale
Contact: 8147032299

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ಪ್ಲಾಟ್ ಮಾರಾಟಕ್ಕಿದೆ

9000 Sqft.,
ಜಾಯ್ ಐಸ್‌ಕ್ರೀಮ್ ಫ್ಯಾಕ್ಟರಿ ಹತ್ತಿರ ಯಾದವಗಿರಿ, ಮೈಸೂರು. ಸಂಪರ್ಕಿಸಿ:
6362075472

SITES ARE AVAILABLE FOR SALE

At Prime Locations in **Mysore**
30X40, 40X60
Near to Schools & Colleges, Hospital & Basic amenities
9986439090
9972825343

ಇಂಪೀರಿಯಲ್ ಸಿಟಿ

ಮೆಗಾ ರೆಸಿಡೆನ್ಸಿಯಲ್ ವಿಲ್ಲಾ ಟೌನ್‌ಶಿಪ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
ಇಲವಾಲ ಸ್ಯಾಟ್‌ಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕಿ.ಮೀ
ಬುಕಿಂಗ್ ಪ್ರಾರಂಭವಾಗಿದೆ
MUDA LIMITS
ಕೇವಲ ₹749/ ಪ್ರತಿ ಚದರ ಅಡಿ
ಸುಲಭ 4 ಕಂತುಗಳ ಸೌಲಭ್ಯವಿದೆ
30x40 | 30x50 | 40x60 | 50x80
ಅಚತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಹೈಲ್ಯಾಂಡ್ ಪ್ರಾಪರ್ಟೀಸ್
ಕಾಳಿದಾಸ ರಸ್ತೆ, ವಿಜಯನಗರ 1ನೇ ಹಂತ, ಮೈಸೂರು
95133 01854
90713 86615

LAND AVAILABLE

35000 sqft clear title land Available For Sale
Location: Mysore
(Erstwhile Ranajith Theatre), Nilgiri road next to Mysore Central Mall
974 1460 224
991 6425 054

LAND FOR SALE

7 Acre Land with Farm House is for sale in Sunkathonnur near Pandavapura Tq, Mandya 30 Kms form Mysore, Canal water is also available, 2 Bore water.
Price: 1.25 Lakhs per Gunta.
9632434689 / 8496000727



Hi! TAXI
ONLY ONE WAY **TAXI CHARGE**
MYSORE to BANGALORE
City drop or Pick up
BANGALORE to MYSORE
Airport drop or Pick up
MYSURU
9611177599

ಬೇಕಾಗಿದ್ದಾರೆ

ಉದ್ಯಮಿ ಗ್ರೂಪ್, ಐರನ್ ಫೌಂಡರಿ ಮತ್ತು ಹೆಚ್ಚು ನಿಖರತೆಯುಳ್ಳ ಸಿಎನ್‌ಸಿ ಶಾಪ್‌ಗೆ ಕೆಳಗಿನ ಹುದ್ದೆಗಳಿಗೆ ಬೇಕಾಗಿದ್ದಾರೆ.

ಸಿಎನ್‌ಸಿ ಆಪರೇಟರ್ /ಸೆಟ್ಟರ್
ಹೆಚ್‌ಎಂಸಿ/ವಿಟಿಎಲ್/ವಿಎಂಸಿ/ಸಿಎನ್‌ಸಿ ಟರ್ನಿಂಗ್ ಸೆಂಟರ್
ಐಟಿಐ ಹೊಂದಿರುವವರು – 3 ರಿಂದ 4 ವರ್ಷಗಳ ಅನುಭವಿ
ಡಿಪ್ಲೋಮಾ: 3 ರಿಂದ 4 ವರ್ಷಗಳ ಅನುಭವಿ
ಬಿಇ : ಕನಿಷ್ಠ 2 ವರ್ಷಗಳ ಅನುಭವಿ

ಕ್ವಾಲಿಟಿ ಇನ್ಸ್‌ಪೆಕ್ಟರ್
ಡಿಪ್ಲೋಮಾ ಇನ್ ಮೆಕಾನಿಕಲ್ ಇಂಜಿನಿಯರ್ – 3 ರಿಂದ 4 ವರ್ಷಗಳ ಅನುಭವಿ

ಕ್ವಾಲಿಟಿ ಇಂಜಿನಿಯರ್ಸ್
ಬಿಇ/ಡಿಪ್ಲೋಮಾ– 3 ರಿಂದ 4 ವರ್ಷಗಳ ಅನುಭವಿ

ಡಾಟಾ ಎಂಟ್ರಿ ಆಪರೇಟರ್
ಯಾವುದೇ ಡಿಗ್ರಿ – ಟ್ಯಾಲಿ ಜ್ಞಾನದೊಂದಿಗೆ,
ಅವಿವಾಹಿತರಿಗೆ ಉಚಿತ ವಸತಿ ಸೌಲಭ್ಯ

Resume to be sent to umsivanathan@gmail.com
9791949368 | 8072361853 | 6382803706

MYSORE RACE CLUB CHARITABLE TRUST

H-1, Vinayamarga, Siddhartha Layout, MYSORE 570 011
Tel.No.0821-2472102; Email: administrator@mrceyehospital.in

Mysore Race Club (MRC) Eye Hospital

EXPRESSION OF INTEREST

Expression of Interest invited for Operating the CANTEEN at THE MRC EYE HOSPITAL so as to reach the Administrator of the MRC Eye Hospital by 5.00PM on or before 14th December 2024.

For More details including the Terms and conditions, please contact the MRC Eye Hospital Office.

Sd/-Secretary
MRC Charitable Trust

MAHENDRA DEVELOPERS

Muda Approved
SITES & HOUSE FOR SALE
Vajamangala: 20x30, 20x40, 30x40
Nagawala : 20x40, 30x40, 30x50, 40x60
Hunsuru : 20x30, 20x40, 30x40
Devagalli: 30x40, 40x60
Uttanahalli : 5.04 Guntas, Farm Land.
8884001233, 9620546347

BUILDING FOR RENT

Suitable for Service Apartment, Company guest house located in prime location of Dattagalli 3rd Stage adjacent to Ring Road.
For further details contact Owner
9036512621
8904523423



ಹಸಿರು ನಮ್ಮ ಉಸಿರು

ವೃದ್ಧಾಶ್ರಮ

ನಮ್ಮ ವೃದ್ಧಾಶ್ರಮದಲ್ಲಿ ಹಿರಿಯ ನಾಗರಿಕರು, ಹಾಸಿಗೆ ಹಿಡಿದವರು, ಪಾರ್ಶ್ವ ವಾಯು ಪೀಡಿತರು, ಮರೆಗುಳಿ ರೋಗಿಗಳನ್ನು, ಮಾರಣಾಂತಿಕ ಸ್ಥಿತಿಯಲ್ಲಿರುವ ರೋಗಿಗಳಿಗೆ ಪ್ರವೇಶವಕಾಶವಿರುತ್ತದೆ. ನಮ್ಮಲ್ಲಿ 24ಗಂಟೆಗಳ ನರ್ಸಿಂಗ್ ಸೇವೆ, ಹಾಗೂ ಮೂಲಭೂತ ವೈದ್ಯಕೀಯ ಸೇವೆ ಹಾಗೂ ಹೋಂ ನರ್ಸಿಂಗ್ ಸೇವೆ ಸಹ ಲಭ್ಯವಿದೆ
9591547239

MYSORE RACE CLUB CHARITABLE TRUST

H-1, Vinayamarga, Siddhartha Layout, MYSORE 570 011
Tel.No.0821-2472102; Email: administrator@mrceyehospital.in

Mysore Race Club (MRC) Eye Hospital

REQUIRES

(1) **General Ophthalmologist,** (2) **Glaucoma Specialist**
(3) **Cornea Specialist,** (4) **Pediatric Ophthalmologist**
Doctors having MS/DNB/DOMS & also doctors with fellowship in Glaucoma, Cornea & Pediatric ophthalmology from reputed institutions, with surgical experience in SICS and phacoemulsification preferred.
(5) **Receptionist Cum Accounts Assistant**
(6) **Optometrist,** (7) **Driver Cum Camp Coordinator**
(8) **House Keeping**

Candidates may apply within 7 days to
mrc_eye@rediffmail.com or administrator@mrceyehospital.in
with their detailed resume. Salary will be commensurate with qualification, surgical experience.

Sd/-Secretary
MRC Charitable Trust

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷೀದಾರರು ಅದರ ಮಾಲೀಕರಾದ, ಮೈಸೂರು, ಆಲನಹಳ್ಳಿ ಅಂಚೆ, ನಾಡನಹಳ್ಳಿ, ರಾಮಮಂದಿರ ರಸ್ತೆ, ಮನೆ ನಂಬರ್: 48 ರ ನಿವಾಸಿಯಾದ ಶ್ರೀ ಮಹದೇವು @ ಮಹಾದೇವ ಬಿನ್ ಲೇಟ್. ಚಿಕ್ಕಮಕ್ಕಯ್ಯ ಮತ್ತು ಇವರ ಕುಟುಂಬದವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಬಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಮೇಲ್ಕಂಡ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷೀದಾರರು ನಿರ್ಬಂಧಿತರಾಗುವುದಿಲ್ಲ.

ಷೆಡ್ಯೂಲ್: ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಕಸಬಾ ಹೋಬಳಿ, ನಾಡನಹಳ್ಳಿ ಗ್ರಾಮದ ಸರ್ವೆ ನಂಬರ್. 3/16 ರಲ್ಲಿನ ಹದಿನೇಳು ಗುಂಟೆ ಪೈಕಿ ಸುಮಾರು ಹನ್ನೊಂದು ಗುಂಟೆ (0.11.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ:– ಸರ್ವೇ ನಂ. 3/2, ಪಶ್ಚಿಮಕ್ಕೆ:– ಸರ್ವೇ ನಂ. 3/9, 5, ಉತ್ತರಕ್ಕೆ: ಸರ್ಕಾರಿ ರಸ್ತೆ, ದಕ್ಷಿಣಕ್ಕೆ:–ಸರ್ವೇ ನಂ. 3/16 ರ ಉಳಿಕೆ ಜಮೀನು

Sd/- M.N. Prakash Kalappa
KAR-1996-2000
Advocate & Legal Consultant
2-3, First Floor, PRI Complex, 67/7A, New Sayyajirao Road, Fort Mohalla, Mysuru-570004, Cell: 93431 12535
ಮೈಸೂರು : 06/12/2024

ಬೇಕಾಗಿದ್ದಾರೆ

ಪೆಟ್ರೋಲ್‌ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು
ಹುಡುಗರು ಮತ್ತು ಹುಡುಗಿಯರು
ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ. ಸಂಬಳ: 12000/–
6364748485

ಪ್ಲಾಟ್ ಮಾರಾಟಕ್ಕಿದೆ

14,960 Sqft.,
ಎಪಿಎಮ್‌ಸಿ ಯಾರ್ಡ್ ಹತ್ತಿರ ಹುಣಸೂರು–ಮೈಸೂರು ಮುಖ್ಯ ರಸ್ತೆ ಹುಣಸೂರು ನಗರ. ಸಂಪರ್ಕಿಸಿ:
6362075472

DTCP APPROVED

Sites attached to Mysuru - Hunsur Highway
Starts from 10.75 L
9845 77 11 77

ನಗರಸಭಾ ಕಾರ್ಯಾಲಯ, ಹುಣಸೂರು,
ಮೈಸೂರು ಜಿಲ್ಲೆ – 571105

ಈ–ಮೇಲ್: itstaff_ulb_hunsur@yahoo.co.in
ಫ್ಯಾಕ್ಸ್: 08222–252250 ಕಛೇರಿ ಫೋನ್: 252048
E-mail: itstaff_ulb_hunsur@yahoo.co.in
Fax : 08222-252250 office Phone : 252048

ಸಂಖ್ಯೆ: ಹುನಕಾ/ಜೆ.ಇ(ವಿ)/ಎಸ್.ಎಫ್.ಸಿ(ಕು.ನೀ)/ಟೆಂಡರ್/16/2024–25
ದಿನಾಂಕ: 05.12.2024

ಟೆಂಡರ್ ಪ್ರಕಟಣೆ

(https://kppp.karnataka.gov.in ಪೋರ್ಟಲ್ ಮೂಲಕ)

ಹುಣಸೂರು ನಗರಸಭೆ ವ್ಯಾಪ್ತಿಯಲ್ಲಿ 2024–25ನೇ ಸಾಲಿನ ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನದಲ್ಲಿ, ನೀರುಸರಬರಾಜು ವಿಭಾಗಕ್ಕೆ ಸಂಬಂಧಿಸಿದ ಕಾಮಗಾರಿಗಳಿಗೆ 4ನೇ ದರ್ಜೆ ಮತ್ತು ಮೇಲ್ಪಟ್ಟ ಅರ್ಹ ವಿದ್ಯುತ್ ಗುತ್ತಿಗೆದಾರರಿಂದ K.W-1ರ ನಿಯಮಗಳ ಅನ್ವಯ 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಟೆಂಡರನ್ನು ಆಹ್ವಾನಿಸಲಾಗಿದೆ. ಕಾಮಗಾರಿಯ ವಿವರ: ಟೆಂಡರ್ ಸಂಖ್ಯೆ: (1) DMA/2024-25 /WS/WORK_INDENT 33289 ಅಂದಾಜು ಮೊತ್ತ: 2.60 ಲಕ್ಷಗಳು 1) ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿ: 21.12.2024 ಸಂಜೆ 5.00 ಗಂಟೆಯವರೆಗೆ. 2) ಟೆಂಡರ್‌ಗಳನ್ನು ತೆರೆಯುವ ದಿ: 23.12.2024 ಪೂರ್ವಾಹ್ನ 11.30 ಗಂಟೆಗೆ ಅಥವಾ ಮುಂದೆ ಸೂಚಿಸುವ ದಿನಾಂಕದಂದು ತೆರೆಯಲಾಗುವುದು.

ಸೂಚನೆ: ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಗುತ್ತಿಗೆದಾರರು https://kppp.karnataka.gov.in ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/– ಉಪಾಧ್ಯಕ್ಷರು (ಶ್ರೀಮತಿ ಹೆಚ್.ಡಿ.ಆಶಾ) ನಗರಸಭೆ, ಹುಣಸೂರು
ಸಹಿ/– ಅಧ್ಯಕ್ಷರು (ಶ್ರೀ ಎಸ್.ಶರವಣ) ನಗರಸಭೆ,ಹುಣಸೂರು
ಸಹಿ/– ಪೌರಾಯುಕ್ತರು ನಗರಸಭೆ, ಹುಣಸೂರು

DIPR/DDMYS-926/KSMCA-622/2024-25

NEWLY LAUNCHED PROJECT IN YELWALA

"PARISARA SIRI" - MYSORE
RESIDENTIAL PLOTS
@ JUST Rs. 675/- Sqft.,
2 KMS FROM YELWALA,
1 KM FROM NH 275
NEAR HORTICULTURE UNIVERSITY
MADIKERI – MYSORE HIGHWAY
DIMENSION
"30x40" "30x50" "40x60"
Contact: 9740391228

GSSS

Geetha Bharathi Higher Primary School
Bantwal Madhava Shenoy High School
Badriprasadji Pre-University College
Siddartha Nagar, Mysuru - 570 011.

REQUIRED

Institution	Post	Qualification
GEETHA BHARATHI HIGHER PRIMARY SCHOOL ENGLISH MEDIUM	Asst. Teachers for • Nursery • English • Mathematics • Science • Social Science	NTT, PUC / Degree PUC, D.Ed, B.A / B.Sc with B.Ed. M.A / M.Sc with B.Ed. with at least 5 years of experience
	• Library Assistant	D.Lib. with experience
	• Yoga	With experience
BADRIPRASADJI PRE-UNIVERSITY COLLEGE ENGLISH MEDIUM	Lecturers in • Biology • Accountancy • Business Studies • Statistics	M.Sc in Botany / Zoology with B.Ed. M.Com with at least 5 years of experience

a) Fluency in English is mandatory.
b) Kindly superscribe on the envelope, the post applied for.
c) Application with recent passport size photo must be sent by post / courier to **The Secretary, GSSS(R), Siddarthanagar, Mysuru - 570 011** on or before **20.12.2024.**

Dr. M. Jagannatha Shenoi, President
Smt. Anupama B. Pandit, Secretary